ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ವೈಶಾಲಿ ವಿಜಯ

ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ ಅವರು ಸತತ ಎರಡನೇ ಬಾರಿ ಫಿಡೆ ಮಹಿಳಾ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯಲ್ಲಿ ಚಾಂಪಿಯನ್ ಕಿರೀಟ ಧರಿಸಿದರು



ಮತದಾನ ಜಾಗೃತಿ

ಮೈಸೂರಿನಲ್ಲಿ ನಡೆದ 'ನನ್ನ ಮತ ನನ್ನ ಹಕ್ಕು' ಸೈಕಲ್ ರ್‍ಯಾಲಿಯಲ್ಲಿ ಭಿತ್ತಿ ಫಲಕದೊಂದಿಗೆ ಪಾಲ್ಗೊಂಡಿದ್ದ ಯುವತಿ

ಸೆನ್ಸೆಕ್ಸ್ 81,785 | ನಿಫ್ಟಿ 25,069 | $/₹ 88.16 | ಚಿನ್ನ (Std. 10g) ₹1,15,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,36,700 (ಬೆಂಗಳೂರು)

ವಕ್ಫ್: ಪ್ರಮುಖ ಅಂಶಗಳಿಗೆ ತಡೆ

ವಕ್ಫ್ (ತಿದ್ದುಪಡಿ) ಕಾಯ್ದೆ–2025: ತಡೆಯಾಜ್ಞೆಗೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ (ಪಿಟಿಐ): ಇಸ್ಲಾಂ ಧರ್ಮವನ್ನು ಕನಿಷ್ಠ ಐದು ವರ್ಷ ಅನುಸರಿಸಿದ ವ್ಯಕ್ತಿ ಮಾತ್ರ ಆಸ್ತಿಯನ್ನು ವಕ್ಫ್‌ಗೆ ದಾನ ನೀಡಬಹುದು ಎಂಬ ಷರತ್ತು ಸೇರಿದಂತೆ ವಕ್ಫ್ (ತಿದ್ದುಪಡಿ) ಕಾಯ್ದೆ–2025ರ ಕೆಲವು ಪ್ರಮುಖ ಅಂಶಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ತಡೆ ನೀಡಿದೆ. ಆದರೆ, ಇಡೀ ಕಾಯ್ದೆಗೆ ತಡೆಯಾಜ್ಞೆ ನೀಡಲು ನಿರಾಕರಿಸಿದೆ.

'ಕಾಯ್ದೆಯು ಸಂವಿಧಾನಬದ್ಧವಾಗಿಯೇ ಇದೆ ಎಂದು ನಾವು ಭಾವಿಸುತ್ತೇವೆ. ಅತ್ಯಂತ ವಿರಳ ಪ್ರಕರಣಗಳಲ್ಲಿ ಮಾತ್ರ ಮಧ್ಯಪ್ರವೇಶಿಸಲು ಬಯಸುತ್ತೇವೆ' ಎಂದು ಮುಖ್ಯ ನ್ಯಾಯಮೂರ್ತಿ ಬಿ.ಆರ್ ಗವಾಯಿ ಮತ್ತು ನ್ಯಾಯಮೂರ್ತಿ ಆಗಸ್ಟಿನ್ ಜಾರ್ಜ್ ಮಸೀಹ್ ಅವರ ಪೀಠವು ಮಹತ್ವಪೂರ್ಣವಾದ ಮಧ್ಯಂತರ ಆದೇಶದಲ್ಲಿ ಹೇಳಿದೆ.

'ಹೊಸ ಕಾಯ್ದೆಯಲ್ಲಿನ ಪ್ರತಿಯೊಂದು ಅಂಶವನ್ನೂ ಗಣನೆಗೆ ತೆಗೆದುಕೊಂಡಿದ್ದೇವೆ. ಇಡೀ ಕಾಯ್ದೆಗೆ ತಡೆಯಾಜ್ಞೆ ನೀಡುವಂತಹ ಅವಶ್ಯಕತೆ ಕಂಡುಬಂದಿಲ್ಲ. ಆದ್ದರಿಂದ, ಕಾಯ್ದೆಗೆ ತಡೆ ನೀಡಬೇಕೆಂಬ ಕೋರಿಕೆಯನ್ನು ತಿರಸ್ಕರಿಸಲಾಗಿದೆ' ಎಂದು 128 ಪುಟಗಳ ಆದೇಶದಲ್ಲಿ ತಿಳಿಸಿದೆ.

ಆದಾಗ್ಯೂ, 'ಕಕ್ಷಿದಾರರ ಹಿತಾಸಕ್ತಿ ರಕ್ಷಿಸಲು' ಮತ್ತು 'ನ್ಯಾಯದಲ್ಲಿ ಸಮತೋಲನ ಕಾಪಾಡಿಕೊಳ್ಳಲು', ವಕ್ಫ್ ಆಸ್ತಿಗಳ ಸಿಂಧುತ್ವವನ್ನು ನಿರ್ಣಯಿಸಲು ಜಿಲ್ಲಾಧಿಕಾರಿಗೆ ಪರಮಾಧಿಕಾರ ನೀಡಿರುವುದೂ ಸೇರಿದಂತೆ ಕೆಲವು ಅಂಶಗಳಿಗೆ ಮಧ್ಯಂತರ ತಡೆ ಆದೇಶ ನೀಡಿತು. ವಕ್ಫ್ ಮಂಡಳಿಗಳಲ್ಲಿ ಮುಸ್ಲಿಮೇತರರ ಪ್ರಾತಿನಿಧ್ಯದ ಕುರಿತೂ ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿದೆ.

ವಕ್ಫ್ ಮಂಡಳಿಗಳಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ನೇಮಕಾತಿ ಮತ್ತು ಅವರ ಅಧಿಕಾರದ ಅವಧಿ ಹಾಗೂ ಕಾರ್ಯವ್ಯಾಪ್ತಿಗೆ ಸಂಬಂಧಿಸಿದ ಕಾಯ್ದೆಯ ಸೆಕ್ಷನ್ 23ಕ್ಕೆ ಪೀಠವು ತಡೆ ನೀಡಲಿಲ್ಲ. ಆದರೆ ಈ ಹುದ್ದೆಗೆ 'ಸಾಧ್ಯವಾದಷ್ಟೂ' ಮುಸ್ಲಿಂ ಸಮುದಾಯದವರನ್ನೇ ನೇಮಿಸಲು ಪ್ರಯತ್ನಿಸಬೇಕು ಎಂದು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಿದೆ.

ತಾನು ನೀಡಿರುವ ನಿರ್ದೇಶನಗಳು ಮಧ್ಯಂತರ ಸ್ವರೂಪದ್ದಾಗಿವೆ ಎಂದು ಪೀಠವು ಹೇಳಿದೆ. ಅಂತಿಮ ವಿಚಾರಣೆಯ ಸಮಯದಲ್ಲಿ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವದ ಕುರಿತಂತೆ ಪೂರ್ಣ ವಾದ ಮಂಡಿಸುವುದರಿಂದ ಅರ್ಜಿದಾರರು ಅಥವಾ ಸರ್ಕಾರವನ್ನು ಈ ನಿರ್ದೇಶನಗಳು ತಡೆಯುವುದಿಲ್ಲ ಎಂದೂ ಸ್ಪಷ್ಟಪಡಿಸಿತು.

ಕಾಯ್ದೆಯ ಸಾಂವಿಧಾನಿಕ ಸಿಂಧುತ್ವದ ಕುರಿತಂತೆ ಪೂರ್ವನಿದರ್ಶನಗಳನ್ನು ಉಲ್ಲೇಖಿಸಿದ ಪೀಠ, 'ಕಾಯ್ದೆಯ ಅಂಶಗಳನ್ನು ತಡೆಹಿಡಿಯುವ ಮೂಲಕ ಮಧ್ಯಂತರ ತೀರ್ಪು ನೀಡುವಲ್ಲಿ ನ್ಯಾಯಾಲಯಗಳು ಬಹಳ ನಿಧಾನವಾಗಿರಬೇಕು. ಅಪರೂಪದ ಸಂದರ್ಭಗಳಲ್ಲಿ ಮಾತ್ರ ಮಧ್ಯಂತರ ತೀರ್ಪು ನೀಡಬಹುದು' ಎಂದು ಹೇಳಿತು.



ಸುಪ್ರೀಂ ಕೋರ್ಟ್ ನೀಡಿರುವ ಆದೇಶದಿಂದ ಪ್ರಜಾಪ್ರಭುತ್ವಕ್ಕೆ ಒಳ್ಳೆಯದಾಗಲಿದೆ ಎಂದು ನಾನು ನಂಬಿದ್ದೇನೆ. ವಕ್ಫ್ ಕಾಯ್ದೆಯ ಅಂಶಗಳು ಎಲ್ಲ ಮುಸ್ಲಿಮರಿಗೂ ಪ್ರಯೋಜನಕಾರಿಯಾಗಿವೆ

ಕಿರಣ್ ರಿಜಿಜು, ಕೇಂದ್ರ ಸಚಿವ



ವಕ್ಫ್ ಕಾಯ್ದೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ಮಧ್ಯಂತರ ಆದೇಶವು ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವ ಕಾಂಗ್ರೆಸ್ ಪಕ್ಷದ ಸಂಕಲ್ಪವನ್ನು ಪುನರುಚ್ಚರಿಸಿದೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಆದೇಶದ ಪ್ರಮುಖಾಂಶಗಳು

- ಕನಿಷ್ಠ ಐದು ವರ್ಷ ಇಸ್ಲಾಂ ಧರ್ಮವನ್ನು ಅನುಸರಿಸಿದ ವ್ಯಕ್ತಿ ಮಾತ್ರ ಆಸ್ತಿಯನ್ನು ವಕ್ಫ್‌ಗೆ ದಾನ ನೀಡಬಹುದು ಎಂಬ ಅಂಶ ಹೊಂದಿರುವ ಸೆಕ್ಷನ್ 3(1)(ಆರ್)ಗೆ ಪೀಠ ತಡೆ ನೀಡಿದೆ
- ಒಬ್ಬ ವ್ಯಕ್ತಿಯು ಇಸ್ಲಾಂ ಧರ್ಮವನ್ನು ಅನುಸರಿಸುತ್ತಿದ್ದಾನೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಲು ರಾಜ್ಯ ಸರ್ಕಾರಗಳು ನಿಯಮಗಳನ್ನು ರೂಪಿಸುವವರೆಗೂ ತಡೆಯಾಜ್ಞೆ ಜಾರಿಯಲ್ಲಿರಲಿದೆ ಎಂದು ಹೇಳಿದೆ
- 'ವಿವಾದದಲ್ಲಿರುವ ಆಸ್ತಿಗೆ ಸಂಬಂಧಿಸಿದಂತೆ ನಿಯೋಜಿತ ಅಧಿಕಾರಿ ತನ್ನ ವರದಿ ಸಲ್ಲಿಸುವವರೆಗೂ ಆಸ್ತಿಯನ್ನು ವಕ್ಫ್ ಆಸ್ತಿಯನ್ನಾಗಿ ಪರಿಗಣಿಸಬಾರದು' ಎಂದು ಹೇಳುವ ಅಂಶಕ್ಕೂ ತಡೆ ನೀಡಿದೆ
- ನಿಯೋಜಿತ ಅಧಿಕಾರಿಯು ಆಸ್ತಿಯನ್ನು ಸರ್ಕಾರಿ ಆಸ್ತಿ ಎಂದು ನಿರ್ಧರಿಸಿದರೆ, ಅವರು ಕಂದಾಯ ದಾಖಲೆಗಳಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡಬೇಕು ಮತ್ತು ರಾಜ್ಯ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಬೇಕು ಎಂಬ ಅಂಶಕ್ಕೆ ತಡೆ ನೀಡಲಾಗಿದೆ
- ವಿವಾದಿತ ಆಸ್ತಿಯ ಮಾಲೀಕತ್ವದ ಬಗ್ಗೆ ನ್ಯಾಯಮಂಡಳಿಯು ಅಂತಿಮ ನಿರ್ಣಯ ತೆಗೆದುಕೊಳ್ಳುವವರೆಗೆ ಮತ್ತು ಮೇಲ್ಮನವಿಗೆ ಸಂಬಂಧಿಸಿದಂತೆ ಹೈಕೋರ್ಟ್‌ನ ಮುಂದಿನ ಆದೇಶದವರೆಗೆ ಆ ಆಸ್ತಿಯ ಹಕ್ಕನ್ನು ಯಾವುದೇ ಮೂರನೇ ವ್ಯಕ್ತಿಗೆ ನೀಡುವಂತಿಲ್ಲ ಎಂದು ಹೇಳಿದೆ
- ರಾಜ್ಯ ವಕ್ಫ್ ಮಂಡಳಿಗಳು ಮತ್ತು ಕೇಂದ್ರ ವಕ್ಫ್ ಪರಿಷತ್ತಿನಲ್ಲಿ ಮುಸ್ಲಿಮೇತರರ ಪ್ರಾತಿನಿಧ್ಯಕ್ಕೆ ಮಿತಿ ಹೇರಿದೆ
- ಕೇಂದ್ರ ವಕ್ಫ್ ಪರಿಷತ್ತಿನ 22 ಸದಸ್ಯರಲ್ಲಿ ಗರಿಷ್ಠ ನಾಲ್ವರು ಮುಸ್ಲಿಮೇತರರು ಇರಬಹುದು
- ರಾಜ್ಯ ವಕ್ಫ್ ಮಂಡಳಿಯ 11 ಸದಸ್ಯರಲ್ಲಿ ಗರಿಷ್ಠ ಮೂವರು ಮುಸ್ಲಿಮೇತರರಿಗಷ್ಟೇ ಅವಕಾಶ



ಪೀಠ ಹೇಳಿದ್ದು...

- ಕಾಯ್ದೆಯು ಅಸಾಂವಿಧಾನಿಕವಾಗಿದೆ ಮತ್ತು ನಾಗರಿಕರ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತಿದೆ ಎಂದೆನಿಸಿದಾಗ ಮಾತ್ರ ಅದನ್ನು ತಡೆಹಿಡಿಯಬೇಕು
- ಪೀಠವು ಒಂದು ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಪರಿಗಣಿಸುವಾಗ ಅದರ ನೈಜ ಸ್ವರೂಪ, ಕಾರ್ಯವ್ಯಾಪ್ತಿ ಮತ್ತು ಉದ್ದೇಶವನ್ನು ಪರಿಗಣಿಸುವುದು ಅಗತ್ಯ
- ಸಂವಿಧಾನದಲ್ಲಿರುವ ಅಂಶಗಳ ಸ್ಪಷ್ಟ ಉಲ್ಲಂಘನೆಯ ಹೊರತು, ಸಂಸತ್ತು ಅಥವಾ ರಾಜ್ಯ ಶಾಸಕಾಂಗ ರೂಪಿಸಿದ ಕಾಯ್ದೆಯನ್ನು ಅಮಾನ್ಯವೆಂದು ಘೋಷಿಸಲು ಸಾಧ್ಯವಿಲ್ಲ

ಪ್ರಜಾಪ್ರಭುತ್ವ ಸಂಭ್ರಮ

ಪ್ರಜಾವಾಣಿ ಚಿತ್ರ



ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ನಡೆದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮವನ್ನು ಸಚಿವ ಎಚ್.ಸಿ. ಮಹದೇವಪ್ಪ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಕೆ.ಎಚ್. ಮುನಿಯಪ್ಪ ತಮಟೆ ಬಾರಿಸಿ ಉದ್ಘಾಟಿಸಿದರು. ಶಾಸಕ ಎಸ್.ಎನ್. ನಾರಾಯಣಸ್ವಾಮಿ, ಕರ್ನಾಟಕ ಅಲೆಮಾರಿ ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಉಪಸ್ಥಿತರಿದ್ದರು ▶6

ಕರ್ನಾಟಕ, ಆಂಧ್ರಪ್ರದೇಶದ 16 ಕಡೆ ಸಿಬಿಐ ಶೋಧ

ನಾಗೇಂದ್ರ ನೆಂಟರಿಗೆ ಹಣ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆಗಳ (ಕೆಜಿಟಿಟಿಐ) ಖಾತೆಯಿಂದ ಮಾಜಿ ಸಚಿವ, ಕಾಂಗ್ರೆಸ್ ಶಾಸಕ ಬಿ.ನಾಗೇಂದ್ರ ಅವರ ಸೋದರಿಯ ಖಾತೆಗೆ ಹಣ ವರ್ಗಾವಣೆಯಾಗಿದ್ದ ಪ್ರಕರಣದಲ್ಲಿ ಸಿಬಿಐ 16 ಕಡೆ ಸೋಮವಾರ ಶೋಧ ನಡೆಸಿದೆ.



ಬಿ.ನಾಗೇಂದ್ರ

ಹಣ ದುರ್ಬಳಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ 12 ಕಡೆ ಮತ್ತು ಆಂಧ್ರ ಪ್ರದೇಶದ 4 ಕಡೆಗಳಲ್ಲಿ ಶೋಧ ನಡೆದಿದೆ.

ತನಿಖೆಯ ಸಂದರ್ಭದಲ್ಲಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಮತ್ತು ಕೆಜಿಟಿಟಿಐಗೆ ಸೇರಿದ ಹಣವನ್ನು ಅಕ್ರಮವಾಗಿ ಬೇರೆಡೆಗೆ ವರ್ಗ ಮಾಡಿರುವುದು ಪತ್ತೆಯಾಗಿದೆ. ಆ ವೇಳೆ, ಬಿ. ನಾಗೇಂದ್ರ ಅವರು ಪರಿಶಿಷ್ಟ ಪಂಗಡ ಕಲ್ಯಾಣ ಖಾತೆಯ ಸಚಿವರಾಗಿದ್ದರು.

ಬ್ಯಾಂಕ್ ಆಫ್ ಬರೋಡಾದ ಸಿದ್ದಯ್ಯ ರಸ್ತೆ ಶಾಖೆಯಲ್ಲಿನ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಖಾತೆಯಿಂದ ಎಸ್‌ಕೆಆರ್ ಇನ್‌ಫ್ರಾಸ್ಟ್ರಕ್ಚರ್ ಮತ್ತು ಗೋಲ್ಡನ್ ಎಸ್ಟಾಬ್ಲಿಷ್‌ಮೆಂಟ್ ಸಂಸ್ಥೆಗಳಿಗೆ ₹2.17 ಕೋಟಿ ಹಣ ವರ್ಗಾವಣೆಯಾಗಿತ್ತು. ಈ ಸಂಸ್ಥೆಗಳು ಬಿ. ನಾಗೇಂದ್ರ ಅವರ ಆಪ್ತರಾದ ನೆಕ್ಕಂಟಿ ನಾಗರಾಜ್ ಅವರಿಗೆ ಸೇರಿದ್ದಾಗಿವೆ. ಈ ಮೊತ್ತದಲ್ಲಿ ಸುಮಾರು ₹1.20 ಕೋಟಿಯಷ್ಟು ನಾಗೇಂದ್ರ ಅವರ ಸಹೋದರಿ, ಸೋದರ ಮಾವ ಮತ್ತು ಆಪ್ತ ಸಹಾಯಕ ಸೇರಿದಂತೆ ಅವರ ಸಹಚರರು ಹಾಗೂ ಸಂಬಂಧಿಕರ ಖಾತೆಗಳಿಗೆ ವರ್ಗವಾಗಿದೆ. ▶6

ವಾಲ್ಮೀಕಿ ಹಗರಣದ ನಂಟಿನ ಶಂಕೆ



ಬಳ್ಳಾರಿ ಮಹಾನಗರ ಪಾಲಿಕೆಯ 11ನೇ ವಾರ್ಡ್‌ನ ಬಿಜೆಪಿ ಸದಸ್ಯ ಗೋವಿಂದರಾಜು ಹಾಗೂ ಅವರ ತಂದೆ, ಮೊಟ್ಟೆ ವ್ಯಾಪಾರಿ ಕುಮಾರಸ್ವಾಮಿ ನಿವಾಸದಲ್ಲಿ ಕೇಂದ್ರ ತನಿಖಾ ದಳ (ಸಿಬಿಐ) ಅಧಿಕಾರಿಗಳು ಶೋಧ ನಡೆಸಿದರು.

ಗಾಂಧಿನಗರದ 2ನೇ ತಿರುವಿನಲ್ಲಿರುವ ಗೋವಿಂದರಾಜು ನಿವಾಸದಲ್ಲಿ ಅಧಿಕಾರಿಗಳು ಪರಿಶೀಲನೆ ನಡೆಸಿ, ದಾಖಲೆ ಪತ್ರಗಳನ್ನು ಸಂಗ್ರಹಿಸಿದರು.

ಗೋವಿಂದ ರಾಜು ಅವರು ಮನೆ ಖರೀದಿಗಾಗಿ ಹಗರಣದ ಆರೋಪಿ ಶಾಸಕ ಬಿ.ನಾಗೇಂದ್ರ, ನೆಕ್ಕಂಟಿ ನಾಗರಾಜ್ ಮೂಲಕ ವ್ಯವಹಾರ ನಡೆಸಿದ್ದರು. ಅದಕ್ಕೆ ವಾಲ್ಮೀಕಿ ನಿಗಮದ ಹಣ ಬಳಕೆಯಾಗಿರುವ ಆರೋಪ ಇದೆ.

'ಅಕ್ರಮವಿದ್ದರೆ ಎಸ್‌ಐಆರ್ ರದ್ದು'

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಸಮಯದಲ್ಲಿ ಕೇಂದ್ರ ಚುನಾವಣಾ ಆಯೋಗ ಅಳವಡಿಸಿಕೊಂಡ ವಿಧಾನದಲ್ಲಿ ಯಾವುದೇ ಅಕ್ರಮ ಕಂಡುಬಂದರೆ, ಸಂಪೂರ್ಣ ಪ್ರಕ್ರಿಯೆಯನ್ನೇ ರದ್ದುಗೊಳಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ಸೋಮವಾರ ಎಚ್ಚರಿಸಿದೆ.

ಬಿಹಾರದ ಎಸ್‌ಐಆರ್‌ನ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ಅಂತಿಮ ವಿಚಾರಣೆಯನ್ನು ಅಕ್ಟೋಬರ್ 7ರಂದು ನಡೆಸುವುದಾಗಿ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಜಾಯ್‌ಮಲ್ಯ ಬಾಗ್ಚಿ ಅವರ ಪೀಠ ತಿಳಿಸಿತು. ಈ ಪ್ರಕ್ರಿಯೆಯ ಕುರಿತು ಅರೆಬರೆ ಅಭಿಪ್ರಾಯಗಳನ್ನು ನೀಡುವುದಿಲ್ಲ ಎಂದೂ ಪೀಠ ಹೇಳಿತು. ▶11

ವಕೀಲರ ವಾದವೇನು?

ಎಸ್‌ಐಆರ್‌ನ ಸಂಪೂರ್ಣ ಪ್ರಕ್ರಿಯೆ ನಡೆಸಲು ಚುನಾವಣಾ ಆಯೋಗಕ್ಕೆ ಅವಕಾಶ ನೀಡಬೇಕು. ಪ್ರಕ್ರಿಯೆ ಪೂರ್ಣಗೊಂಡ ಬಳಿಕ ನ್ಯಾಯಾಲಯವು ಅದನ್ನು ಉತ್ತಮವಾಗಿ ಮೌಲ್ಯಮಾಪನ ಮಾಡಲು ಸಾಧ್ಯವಾಗುತ್ತದೆ

ರಾಕೇಶ್ ದ್ವಿವೇದಿ, ಚುನಾವಣಾ ಆಯೋಗದ ಪರ ವಕೀಲ

ಇತರ ರಾಜ್ಯಗಳಲ್ಲಿ ಎಸ್‌ಐಆರ್ ನಡೆಸಲು ಆಯೋಗವು ಪೂರ್ವಸಿದ್ಧತೆ ಆರಂಭಿಸಿದೆ. ಈ ಸಂಬಂಧ ಸೆಪ್ಟೆಂಬರ್ 10ರಂದು ಎಲ್ಲ ರಾಜ್ಯಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದೆ. ಇದಕ್ಕೆ ಅವಕಾಶ ನೀಡಬಾರದು

ಗೋಪಾಲ್ ಶಂಕರ ನಾರಾಯಣನ್, ಅರ್ಜಿದಾರರ ಪರ ವಕೀಲ

ಬಿಹಾರದಲ್ಲಿ ಅಕ್ಟೋಬರ್ ಮಧ್ಯಭಾಗದಲ್ಲಿ ಚುನಾವಣಾ ವೇಳಾಪಟ್ಟಿ ಘೋಷಣೆಯಾಗುವ ಸಾಧ್ಯತೆ ಇದೆ. ಅಕ್ಟೋಬರ್ 1ರಂದು ಮತದಾರರ ಪಟ್ಟಿ ಪ್ರಕಟವಾಗಲಿದೆ. ಅದಕ್ಕೂ ಮುನ್ನವೇ ಅರ್ಜಿಯ ವಿಚಾರಣೆ ನಡೆಸಬೇಕು

ವೃಂದಾ ಗ್ರೋವರ್, ಅರ್ಜಿದಾರರ ಪರ ವಕೀಲೆ

ಚಾಲನಾ ಪರವಾನಗಿಗಳನ್ನು ನಕಲಿ ಮಾಡಬಹುದು, ಪಡಿತರ ಚೀಟಿಗಳನ್ನು ನಕಲಿ ಮಾಡಬಹುದು. ಹಲವಾರು ದಾಖಲೆಗಳನ್ನು ನಕಲಿ ಮಾಡಬಹುದು. ಕಾನೂನು ಅನುಮತಿಸುವ ಮಟ್ಟಿಗೆ ಆಧಾರ್ ಅನ್ನು ಬಳಸಿಕೊಳ್ಳಬೇಕು.

- ನ್ಯಾಯಪೀಠ



ಎಸ್‌ಐಆರ್ ಸಂದರ್ಭದಲ್ಲಿ ಆಯೋಗವು ನಿಯಮಗಳನ್ನು ಉಲ್ಲಂಘಿಸಿದೆ. ವಾಸ್ತವಿಕವಾಗಿ ಈ ಪ್ರಕ್ರಿಯೆಯಲ್ಲಿ ಯಾವುದೇ ಪಾರದರ್ಶಕತೆ ಇಲ್ಲ

ಪ್ರಶಾಂತ್ ಭೂಷಣ್, ಹಿರಿಯ ವಕೀಲ

ವಿದೇಶಿಯರಿಗೂ ಆಧಾರ್ ಕಾರ್ಡ್ ನೀಡಲಾಗುತ್ತದೆ. ದಯವಿಟ್ಟು ಸೆಪ್ಟೆಂಬರ್ 8ರ ಆದೇಶ ಮಾರ್ಪಡಿಸಿ. ಇಲ್ಲದಿದ್ದರೆ ಹಾನಿಕಾರಕವಾಗುತ್ತದೆ

ಅಶ್ವಿನಿ ಕುಮಾರ್ ಉಪಾಧ್ಯಾಯ, ವಕೀಲ

ಕಾಡಿನಲ್ಲಿ ಶೋಧ ಕಾರ್ಯಕ್ಕೆ ಸಿದ್ಧತೆ

ಮಂಗಳೂರು: ಧರ್ಮಸ್ಥಳ ಬೆಳವಣಿಗೆ ಕುರಿತು ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ನೇತ್ರಾವತಿ ಸ್ನಾನಘಟ್ಟದ ಪಕ್ಕದ ಕಾಡಿನಲ್ಲಿ 'ನೆಲದ ಮೇಲೆಯೇ ಮೃತದೇಹಗಳ ಅವಶೇಷ ಸಿಕ್ಕಿವೆ' ಎನ್ನಲಾದ ಪ್ರದೇಶದಲ್ಲಿ ವ್ಯಾಪಕ ಶೋಧ ನಡೆಸಲು ಸಿದ್ಧತೆ ನಡೆಸಿದೆ.

ವಿವರ ▶5

ಚಿನಕುರುಳಿ ಪ್ರಕಾಶ್ ಶೆಟ್ಟಿ



ಎಚ್‌ಡಿಕೆ ವಿರುದ್ಧ ತನಿಖೆಗೆ 2 ವಾರ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಕೇತಗಾನಹಳ್ಳಿಯ ಸರ್ಕಾರಿ ಜಮೀನು ಒತ್ತುವರಿ ಆರೋಪಕ್ಕೆ ಸಂಬಂಧಿಸಿದಂತೆ ಎಸ್‌ಐಟಿ (ವಿಶೇಷ ತನಿಖಾ ತಂಡ) ತನಿಖೆಗೆ ಹೈಕೋರ್ಟ್ ವಿಭಾಗೀಯ ಪೀಠ ನೀಡಿದ್ದ ಅನುಮತಿ ಆದೇಶಕ್ಕೆ ಸುಪ್ರೀಂ ಕೋರ್ಟ್ ಎರಡು ವಾರಗಳ ತಡೆ ನೀಡಿದೆ.



ಕುಮಾರಸ್ವಾಮಿ

ಸೆಪ್ಟೆಂಬರ್ 8ರಂದು ವಿಭಾಗೀಯ ಪೀಠ ನೀಡಿದ ಆದೇಶಕ್ಕೆ ತಡೆಕೋರಿ ಕುಮಾರಸ್ವಾಮಿ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಪಂಕಜ್ ಮಿತ್ತಲ್ ಮತ್ತು ಪ್ರಸನ್ನ ವರಾಳೆ ಅವರಿದ್ದ ನ್ಯಾಯಪೀಠವು ಸೋಮವಾರ ವಿಚಾರಣೆ ನಡೆಸಿತು.

'ಎಚ್.ಡಿ.ಕುಮಾರಸ್ವಾಮಿ ಮತ್ತು ಅವರ ಸಂಬಂಧಿಕರು ಕೇತಗಾನಹಳ್ಳಿಯ ಸರ್ವೆ ನಂಬರ್ 8, 9, 10, 16, 17 ಮತ್ತು 79ರಲ್ಲಿ 14 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ವರದಿಯ ಅನುಸಾರ ಕ್ರಮ ಕೈಗೊಳ್ಳಬೇಕು ಎಂದು 2020ರಲ್ಲಿ ಹೈಕೋರ್ಟ್ ಆದೇಶಿಸಿತ್ತು. ಆದರೆ, ಈ ಆದೇಶವನ್ನು ಜಾರಿಗೊಳಿಸಿಲ್ಲ' ಎಂದು ಆರೋಪಿಸಿ ಸಮಾಜ ಪರಿವರ್ತನಾ ಸಮುದಾಯವು ರಾಜ್ಯ ಸರ್ಕಾರದ ವಿರುದ್ಧ ಹೈಕೋರ್ಟ್‌ನಲ್ಲಿ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿತ್ತು. ಈ ಬಗ್ಗೆ ತನಿಖೆ ನಡೆಸಲು ಹೈಕೋರ್ಟ್ ಸೂಚಿಸಿತ್ತು.

ಜಮೀನು ಒತ್ತುವರಿ ಆರೋಪ

14 ಎಕರೆ ಜಮೀನಿನ ಮಾಲೀಕತ್ವದ ಕುರಿತಂತೆ ವಿಚಾರಣೆ ನಡೆಸಲು ಐಎಎಸ್ ಅಧಿಕಾರಿ ಆಮ್ಲಾನ್ ಆದಿತ್ಯ ಬಿಸ್ವಾಸ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಲಾಗಿತ್ತು. ಎಸ್‌ಐಟಿ ರಚನೆ ಮತ್ತು ತಹಶೀಲ್ದಾರ್ ಹೊರಡಿಸಿದ ನೋಟಿಸ್‌ಗೆ ಹೈಕೋರ್ಟ್ ಏಕಸದಸ್ಯ ಪೀಠ ತಡೆ ನೀಡಿತ್ತು.

ಮಾಜಿ ಸಂಸದ ಪ್ರತಾಪ್ ಸಿಂಹ ಮತ್ತಿತರರು ಸಲ್ಲಿಸಿದ್ದ ಅರ್ಜಿ

ಬಾನುಗೆ ವಿರೋಧ: ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವ ಕ್ರಮವನ್ನು ಪ್ರಶ್ನಿಸಿ ಮಾಜಿ ಸಂಸದ ಪ್ರತಾಪ್ ಸಿಂಹ ಮತ್ತಿತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ಹೈಕೋರ್ಟ್ ವಜಾಗೊಳಿಸಿದೆ.

'ಬಾನು ಮುಷ್ತಾಕ್ ಅವರಿಗೆ ನೀಡಿರುವ ಆಹ್ವಾನವನ್ನು ಹಿಂಪಡೆಯಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಪ್ರತಾಪ ಸಿಂಹ, ಟಿ.ಗಿರೀಶ್ ಕುಮಾರ್, ಆರ್.ಸೌಮ್ಯಾ ಸಲ್ಲಿಸಿದ್ದ ಪ್ರತ್ಯೇಕ ಪಿಐಎಲ್‌ಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರತಾಪ್ ಸಿಂಹ ಪರ ಹೈಕೋರ್ಟ್ ವಕೀಲ ಎಸ್. ಸುದರ್ಶನ್ ಹಾಗೂ ಇತರರ ಪರ ರಂಗನಾಥ ರೆಡ್ಡಿ ವಾದ ಮಂಡಿಸಿ, 'ದಸರಾ ಹಿಂದೂ ಹಬ್ಬವಾಗಿದ್ದು, ಜಾತ್ಯತೀತ ಹಬ್ಬವಲ್ಲ. ಬಾನು ಮುಷ್ತಾಕ್ ಹಿಂದೂ ಸಂಪ್ರದಾಯ ಮತ್ತು ಕನ್ನಡ ವಿರೋಧಿ ಹೇಳಿಕೆ ನೀಡಿದ್ದಾರೆ. ದಸರಾ ಉದ್ಘಾಟನೆಗೆ ಆಯ್ಕೆಯಾದವರು ಚಾಮುಂಡೇಶ್ವರಿ ದೇವಾಲಯಕ್ಕೆ ಭೇಟಿ ನೀಡುವುದು ಶಿಷ್ಟಾಚಾರ. ಆದರೆ, ಅವರು ಇದನ್ನು ಪಾಲನೆ ಮಾಡಿಲ್ಲ. ಬಾನು ಮುಷ್ತಾಕ್ ಅವರಿಗೆ ಅರಿಶಿಣ- ಕುಂಕುಮದ ಮೇಲೆಯೇ ನಂಬಿಕೆ ಇಲ್ಲ' ಎಂದು ಪ್ರತಿಪಾದಿಸಿದರು.

ರಾಜ್ಯ ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರಲ್ಲದೆ, 'ಪ್ರತಾಪ್ ಸಿಂಹ ಸಂಸದರಾಗಿದ್ದಾಗ ಸಾಹಿತಿ ಕೆ.ಎಸ್.ನಿಸಾರ್ ಅಹ್ಮದ್ ಅವರನ್ನು ಆಹ್ವಾನಿಸಿ ಅವರಿಂದ ದಸರಾ ಉದ್ಘಾಟನೆ ಮಾಡಿಸಲಾಗಿತ್ತು. ಆಗ ಪ್ರತಾಪ್ ಸಿಂಹ ಆಕ್ಷೇಪ ವ್ಯಕ್ತ ಮಾಡಿರಲಿಲ್ಲ. ಅರ್ಜಿಯಲ್ಲಿ ಈ ವಿಚಾರವನ್ನು ಮುಚ್ಚಿಟ್ಟಿದ್ದಾರೆ. ಲೇಖಕಿಯೊಬ್ಬರನ್ನು ಹಿಂದೂ ವಿರೋಧಿ ಎನ್ನುವುದು ಸರಿಯಲ್ಲ. ಧರ್ಮದ ಆಧಾರದಲ್ಲಿ ತಾರತಮ್ಯಕ್ಕೆ ಅವಕಾಶ ನೀಡಬಾರದು. ಆದ್ದರಿಂದ, ಅರ್ಜಿಯನ್ನು ವಜಾ ಮಾಡಿ ಪ್ರತಾಪ್ ಸಿಂಹಗೆ ದಂಡ ವಿಧಿಸಬೇಕು' ಎಂದು ಕೋರಿದರು.

ಇದು ರಾಜ್ಯದ ಹಬ್ಬ. ಸರ್ಕಾರದ ನಿರ್ಧಾರ ಸಂವಿಧಾನದ 15ನೇ ವಿಧಿಗೆ ಪೂರಕವಾಗಿದೆ. ಬಾನು ಮುಷ್ತಾಕ್ ಬುಕರ್ ಪ್ರಶಸ್ತಿ ಪುರಸ್ಕೃತರು. ಹಾಗಾಗಿಯೇ, ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಲಾಗಿದೆ

ಕೆ.ಶಶಿಕಿರಣ ಶೆಟ್ಟಿ, ಅಡ್ವೊಕೇಟ್ ಜನರಲ್

ನ್ಯಾಯಾಲಯದ ವಿಶ್ವಾಸಾರ್ಹತೆಯನ್ನು ಪ್ರಶ್ನೆ ಮಾಡುವುದಿಲ್ಲ. ಜಾತ್ಯತೀತತೆ ಚೌಕಟ್ಟಿನಲ್ಲಿ ಪಿಐಎಲ್ ವಜಾ ಆಗಿದೆ. ನಾನು ವಾಕ್ ಸ್ವಾತಂತ್ರ್ಯ ಬಳಸಿಕೊಂಡು ಮಾತನಾಡುತ್ತಿದ್ದೇನೆ

ಪ್ರತಾಪ್ ಸಿಂಹ, ಮಾಜಿ ಸಂಸದ

'ಹಕ್ಕಿನ ಉಲ್ಲಂಘನೆಗೆ ಆಧಾರವಿಲ್ಲ'

'ಕಾರ್ಯಕ್ರಮದಲ್ಲಿ ಅನ್ಯಧರ್ಮದ ವ್ಯಕ್ತಿ ಭಾಗಿಯಾಗುವುದರಿಂದ ಅರ್ಜಿದಾರರ ಕಾನೂನಾತ್ಮಕ ಅಥವಾ ಸಾಂವಿಧಾನಿಕ ಹಕ್ಕುಗಳ ಉಲ್ಲಂಘನೆಯಾಗಿದೆ ಎಂಬುದಕ್ಕೆ ಯಾವುದೇ ಆಧಾರವಿಲ್ಲ' ಎಂಬ ಕಾರಣ ನೀಡಿದ ನ್ಯಾಯಪೀಠ ಎಲ್ಲ ಅರ್ಜಿಗಳನ್ನು ವಜಾಗೊಳಿಸಿ ಆದೇಶಿಸಿತು.



ಎರಡೂ ಕಡೆಯ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಸರ್ಕಾರದ ತೀರ್ಮಾನ ಸಾಂವಿಧಾನಿಕ ಮೌಲ್ಯಗಳಿಗೆ ವಿರುದ್ಧವಾಗಿದೆ ಎಂಬುದನ್ನು ಸಾಬೀತುಪಡಿಸುವಲ್ಲಿ ಅರ್ಜಿದಾರರು ವಿಫಲವಾಗಿದ್ದಾರೆ' ಎಂದೂ ಹೇಳಿತು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆಯಿದೆ

ಆರ್‌ಎಂಕೆವಿ ಸಿಲ್ಕ್ಸ್: 15 ರೇಷ್ಮೆ ಸೀರೆಗಳ ಬಿಡುಗಡೆ



ಚೆನ್ನೈ: ಈ ಹಬ್ಬದ ಋತುವಿನಾಗಿ ಆರ್‌ಎಂಕೆವಿ ಸಿಲ್ಕ್ಸ್ ಜಪಾನೀಸ್ ಕಲೆ ಮತ್ತು ಭಾರತೀಯ ಪರಂಪರೆಯ ಸ್ಫೂರ್ತಿಯನ್ನು ಆಧರಿಸಿದ ವಿಶೇಷ ಸೃಷ್ಟಿಗಳ ಸಕಿಕೊ ರಿವರ್ಸಿಬಲ್, ಕೊರ್ವ್ಯೆ ಜಪಾನ್ ಮತ್ತು ಮೌಂಟ್ ಫ್ಯೂಜಿ, ನೈಸರ್ಗಿಕ ಪೀಚ್ ಗ್ರೇಡಿಯಂಟ್, ಮೋಚಾ ಮೌಸ್ಸೆ, ವ್ಯಾನ್ ಗಾಗ್ ಲಿನೋ, ರಾಸಲೀಲಾ ರೇಷ್ಮೆ ಸೀರೆ, ಹಮ್ಮಾ ಲಿನೋ ವರ್ಣ, ನೈಸರ್ಗಿಕ ಸೆಲಂತಿಗೆ, ಮುಸ್ತಫಾಬ್ ನ್ಯಾಚುರಲ್, ಗ್ರೇಡಿಯಂಟ್ ವರ್ಣ, ಕೊಟ್ಟಿಕ ಕಟ್ಟಂ, ಕಾನರ್ ಮ್ಯಾಂಗೋ, ಕುಯಿಲ್ ಕನ್ ಕೊರ್ವ್ಯೆ, ಕುಮೊ ಕೊರ್ವ್ಯೆ ಇನ್ನಿತರ ರೇಷ್ಮೆ ಸೀರೆಗಳನ್ನು ಬಿಡುಗಡೆ ಮಾಡಿದೆ.

2025ರ ಸಾಲಿನಲ್ಲಿ ಆರ್‌ಎಂಕೆವಿ ವಿನ್ಯಾಸ ಸ್ಟುಡಿಯೋದಲ್ಲಿ ಮೂಡಿಬಂದ ಈ ವಿಶಿಷ್ಟ ಸೃಷ್ಟಿಗಳಲ್ಲಿ **ಸಕಿಕೊ ರಿವರ್ಸಿಬಲ್** ರೇಷ್ಮೆ ಸೀರೆಯು ಕೈಯಿಂದ ನೇಯ್ದ ಅದ್ಭುತಗಳಲ್ಲೊಂದಾಗಿದೆ. ಒಂದೇ ಸೀರೆಯಲ್ಲಿ ಎರಡು ಆಕರ್ಷಕ ನೋಟವನ್ನು ನೀಡುವ ಈ ಸೊಗಸಾದ ರೇಷ್ಮೆ ಸೃಷ್ಟಿಗಳು, ಒಂದು ಬದಿಯಲ್ಲಿ ಶ್ರೀಮಂತ ಹಸಿರು ಮತ್ತು ಇನ್ನೊಂದು ಬದಿಯಲ್ಲಿ ಬೆಚ್ಚಗಿನ ಸೂರ್ಯಾಸ್ತದ ಕಿತ್ತಳೆ ಬಣ್ಣವನ್ನು ಹೊಂದಿವೆ. ಪ್ರತಿಯೊಂದೂ ಸೀರೆಯೂ ಮಿನುಗುವ ಜರಿ, ಸೂಕ್ಷ್ಮವಾದ ಕಿಕ್ಕಿ ಹೂವಿನ ಲಕ್ಷಣಗಳು ಸೇರಿದಂತೆ ವಿಶೇಷ ಪಲ್ಲು ಮತ್ತು ಅಂಚನ್ನು ಹೊಂದಿದೆ.

ಕೊರ್ವ್ಯೆ ಜಪಾನ್: ಭಾರತೀಯ ಕರಕುಶಲತೆ ಮತ್ತು ಜಪಾನೀಸ್ ಕಲಾತ್ಮಕತೆಯ ಪ್ರಕಾಶಮಾನವಾದ ಸಮ್ಮಿಲನವಾಗಿರುವ ಕೊರ್ವ್ಯೆ ಜಪಾನ್ ರೇಷ್ಮೆ ಸೀರೆ ರಾಜಮನೆತನದ ಕಡುಗೆಂಪು ಬಾರ್ಡರ್ ಅನ್ನು ಶುದ್ಧ ಚಿನ್ನದ ಜರಿಯಲ್ಲಿ ಸಂಕೀರ್ಣವಾಗಿ ನೇಯಲಾಗಿದೆ. ಅದೃಷ್ಟ ಸಂಕೇತದ ಸಾಂಪ್ರದಾಯಿಕ ಜಪಾನೀಸ್ ಲಕ್ಷಣಗಳನ್ನು ಒಳಗೊಂಡಿದೆ. ರೋಮಾಂಚಕ ಕೆಂಪು-ಹಸಿರು ಪಲ್ಲು ಸೊಗಸಾದ ಬಳ್ಳಿಗಳಿಂದ ಸುತ್ತುವರೆದಿರುವ ಪ್ರಕಾಶಮಾನವಾದ ಹೂವಿನ ಪದಕವನ್ನು ಪ್ರದರ್ಶಿಸುತ್ತದೆ. ಸೀರೆ ಅಲೆಅಲೆ-ಹಸಿರು ಹನಬಿಷಿ ಹೂವಿನ ಬುಟ್ಟಗಳಿಂದ ಹರಡಿದೆ. ತಜ್ಞ ಕುಶಲಕರ್ಮಿಗಳಿಂದ ನೇಯ್ದ ಈ ಸೀರೆ ಸೊಬಗಿನ ಸಾಂಸ್ಕೃತಿಕ ಸಂಭ್ರಮ ಎನ್ನುವಂತಿದೆ.

ಮೌಂಟ್ ಫ್ಯೂಜಿ: ಈ ಸೊಗಸಾದ ಇಂಡಿಗೊ ರೇಷ್ಮೆ ಸೀರೆಯಲ್ಲಿ ಜಪಾನಿನ ಕಲಾತ್ಮಕತೆ ಮತ್ತು ಭಾರತೀಯ ಕೈಮಗ್ಗ ಸಂಪ್ರದಾಯದ ಅದ್ಭುತ ಮಿಶ್ರಣದ ಅನ್ವೇಷಣೆಯಾಗಿದೆ. ಸಕಿಕೊ ಜ್ಯಾಮಿತೀಯ ಲಕ್ಷಣಗಳಿಂದ ಕೈಯಿಂದ ನೇಯ್ದ ಈ ಮೇರುಕೃತಿ ಸಾಂಪ್ರದಾಯಿಕ ಚಿನ್ನದ ಜರಿ ಬಾರ್ಡರ್‌ನಲ್ಲಿ ಸಕುರಾ (ಚೆರ್ರಿ ಹೂವು) ಮತ್ತು ದಪ್ಪ ಅಸನೋಹಾ (ಸೆಣಬಿನ ಎಲೆ) ಮಾದರಿಗಳನ್ನು ಪ್ರದರ್ಶಿಸುತ್ತದೆ. ರೋಮಾಂಚಕ ಕಿತ್ತಳೆ ರೇಷ್ಮೆಯಿಂದ ಮೂಡಿಬಂದಿರುವ ಸೀರೆ, ಪಲ್ಲು ಉಸಿರುಕಟ್ಟುವ ದೃಶ್ಯಾವಳಿಯಿಂದ ಕೂಡಿದೆ. ಹೂಬಿಡುವ ಚೆರ್ರಿ ಮರಗಳಿಂದ ಚೌಕಟ್ಟು ಹಾಕಲಾದ ಪ್ರಶಾಂತ ಮೌಂಟ್ ಫ್ಯೂಜಿ, ಸೊಗಸಾದ ಪಗೋಡಾ ಮತ್ತು ದೂರದ ಟೋರಿ ಗೇಟ್. ಈ ಕಾಲಾತೀತ ಕಲಾಕೃತಿಯೊಂದಿಗೆ ಮೆರಗನ್ನು ಹೆಚ್ಚಿಸಿದೆ.

ನೈಸರ್ಗಿಕ ಪೀಚ್ ಗ್ರೇಡಿಯಂಟ್: ನೈಸರ್ಗಿಕವಾಗಿ ಡೈ ಮಾಡಿದ ಗ್ರೇಡಿಯಂಟ್ ರೇಷ್ಮೆ ಸೀರೆ ಆರು ಪೀಚ್ ಟೋನ್‌ಗಳು ಸೀರೆಯಾದ್ಯಂತ ಹರಿಯುತ್ತವೆ. ಪ್ರತಿಯೊಂದೂ ಉತ್ತಮವಾದ ಚಿನ್ನದ ಜರಿಯಲ್ಲಿ ವಿವರಿಸಲ್ಪಟ್ಟಿದೆ ಮತ್ತು ಸಣ್ಣ ಕಮಲದೊಂದಿಗೆ ಅರಳುತ್ತದೆ. ಇಂಡಿಗೊ ಮತ್ತು ಮಾರಿಗೋಲ್ಡ್ ಬಣ್ಣದಿಂದ ಕೂಡಿದ ರೋಮಾಂಚಕ ಹಸಿರು ಅಂಚು ಮತ್ತು ಪಲ್ಲು - ಮಿನುಗುವ ಜರಿಯಲ್ಲಿ ಸೂಕ್ಷ್ಮವಾದ ತರಂಗ ಲಕ್ಷಣಗಳನ್ನು ಹೊಂದಿವೆ.

ಮೋಚಾ ಮೌಸ್ಸೆ: ಆರ್‌ಎಂಕೆವಿಯ ವರ್ಷದ ಬಣ್ಣ ರೇಷ್ಮೆ ಸೀರೆಯಾದ ಮೋಚಾ ಮೌಸ್ಸೆನೊಂದಿಗೆ ಮಣ್ಣಿನ ಸೊಬಗನ್ನು ಅನುಭವಿಸಿ. ಈ ಶ್ರೀಮಂತ ಕಾಫಿ-ಕಂದು ಬಣ್ಣವನ್ನು ಶುದ್ಧ ವೀಳ್ಯದೆಲೆ ಮತ್ತು ಕ್ಯಾಟೆಚು ಡೈಯಿಂದ ಮಾಡಲಾಗಿದೆ. ಏಕತಾನತೆಯ ಕ್ಯಾನ್ವಾಸ್ ಅನ್ನು ಸೃಷ್ಟಿಸುತ್ತದೆ. ಹೊಳೆಯುವ ಬೆಳ್ಳಿ ಜರಿಯಲ್ಲಿ ನೇಯ್ದ ಆಕರ್ಷಕವಾದ ಟ್ಯಾಂಚೊ ಕ್ರೇನ್ ಮೋಟಿಫ್‌ಗಳು, ಚಾಚಿದ ರೆಕ್ಕೆಗಳು ಹಾಗೂ ಅಲೆ ಮಾದರಿಯ ಜರಿ ಬಾರ್ಡರ್ ಅದೃಷ್ಟದ ಸುಳಿವನ್ನು ನೀಡುತ್ತದೆ.

ವ್ಯಾನ್ ಗಾಗ್ ಲಿನೋ: ಈ RmKVಯ ಲಿನೋ ಚೆಕ್ಸ್ ರೇಷ್ಮೆ ಸೀರೆ - ವ್ಯಾನ್ ಗಾಗ್ ರವೆರಿಯನ್ನು ಇವರ ಡಿಸೈನ್ ಸ್ಟುಡಿಯೋದಲ್ಲಿ ವ್ಯಾನ್ ಗಾಗ್ ಅವರ ಕಲಾತ್ಮಕತೆಯಿಂದ ಪ್ರೇರಿತವಾದ ಧರಿಸಬಹುದಾದ ಮೇರುಕೃತಿಯ ಪರಿಕಲ್ಪನೆಯಲ್ಲಿ ಮಾಡಲಾಗಿದೆ. ಇದರ ಪ್ರಸಾಲ್ಮನ್-ಗುಲಾಬಿ ದೇಹವು ಚಿನ್ನದ ಜರಿ ಗಸಗಸೆ ಮತ್ತು ಎದ್ದುಕಾಣುವ ಮೆಜೆಂಟಾ ರೇಷ್ಮೆಯಲ್ಲಿ ವಿವರಿಸಿರುವ ಬಾದಾಮಿ ಹೂವುಗಳೊಂದಿಗೆ ಅರಳುತ್ತದೆ. ಸಂಸ್ಥೆಯ ಪೇಟೆಂಟ್ ಪಡೆದ ಲೆನೊ ತಂತ್ರವನ್ನು ಬಳಸಿ ನೇಯ್ದ ಈ ರೇಷ್ಮೆ ಸೀರೆಯು ಸಾಂಪ್ರದಾಯಿಕ ರೇಷ್ಮೆಗಿಂತ 40% ಹಗುರವಾಗಿದೆ ಮತ್ತು ವ್ಯಾನ್ ಗಾಗ್ ಅವರ 'ಫೀಲ್ಡ್ ಆಫ್ ಐರಿಸಸ್' ನಿಂದ ಸ್ಫೂರ್ತಿ ಪಡೆದ ಹರಿಯುವ ಪಲ್ಲುವನ್ನು ಚಲನೆಯ ವಸ್ತ್ರವಾಗಿ ಹೊಂದಿದೆ. ಈ ಸೀರೆಗಳು ಸೇರಿದಂತೆ ಇನ್ನೂ 9 ಸೀರೆಗಳನ್ನು ಬಿಡುಗಡೆಯಾಗಿವೆ.

ಶತಮಾನದ ಅನುಭವವುಳ್ಳ ಆರ್‌ಎಂಕೆವಿ ಸಿಲ್ಕ್ಸ್ ಹಂಸ ದಮಯಂತಿ ಚಿನ್ನಂಚಿರು ಕಿಲಿಯೆ, ದರ್ಬಾರ್ ಕೃಷ್ಣ, ಐಶ್ವರ್ಯ ಪೂಕಲ್ ಮತ್ತು ಕುರಲ್ ಓವಿಯಂ, ಗ್ರ್ಯಾಂಡ್ ರಿವರ್ಸಿಬಲ್ ಸೀರೆ, 50000-ಬಣ್ಣದ ಸೀರೆ, ವರ್ಣಜಾಲಂ ಶ್ರೇಣಿ, ನವೀನ ನೈಸರ್ಗಿಕ ರೇಷ್ಮೆ ಸೀರೆಗಳ ಪುನರುಜ್ಜೀವನ ಶ್ರೇಣಿ, ಲಿನೋ ಲೈಟ್ - ಉಸಿರಾಡುವ ಸೀರೆ ಮತ್ತು ಇನ್ನೂ ಅನೇಕ ಸೀರೆಗಳನ್ನು ಸೃಷ್ಟಿಸಿದೆ. ಚೆನ್ನೈನ ಟಿ.ನಗರ, ವಡಪಳನಿ ನೆಕ್ಸಸ್ ವಿಜಯ ಮಾಲ್ ಮತ್ತು ವೆಲಚೆರಿ ಫಿನಿಕ್ಸ್ ಮಾರ್ಕೆಟ್ ಸಿಟಿಯಲ್ಲಿ ಹಾಗೂ ತಿರುನಲ್ವೇಲಿ, ಕೊಯಮತ್ತೂರು ಮತ್ತು ಬೆಂಗಳೂರಿನಲ್ಲಿ ತನ್ನ ಶೋರೂಮ್‌ಗಳನ್ನು ಹೊಂದಿದೆ. ಮಾಹಿತಿಗೆ ಮೊ.9841936105 ಸಂಪರ್ಕಿಸಿ.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

ರಸ್ತೆ ಗುಂಡಿ ಮುಚ್ಚಲು ಸೂಚನೆ

ಅಧಿಕಾರಿಗಳಿಗೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಆದ್ಯತೆ ಮೇರೆಗೆ ರಸ್ತೆ ಗುಂಡಿಗಳನ್ನು ಮುಚ್ಚಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಸೂಚಿಸಿದರು.

ನಗರ ಪಾಲಿಕೆಗಳ ಅಧಿಕಾರಿಗಳು ಹಾಗೂ ಗುತ್ತಿಗೆದಾರರರೊಂದಿಗೆ ಸೋಮವಾರ ಸಭೆ ನಡೆಸಿದ ಅವರು, 'ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚಬೇಕು, ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು' ಎಂದು ಹೇಳಿದರು.

ನಗರದಲ್ಲಿ ₹694 ಕೋಟಿ ವೆಚ್ಚದಲ್ಲಿ 349 ಕಿ.ಮೀ. ಉದ್ದದ 182 ರಸ್ತೆಗಳಲ್ಲಿ ಬ್ಲಾಕ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿ ಪ್ರಗತಿಯಲ್ಲಿರುವ ಕಡೆ ರಸ್ತೆ ಮೇಲೆ ನೀರು ನಿಲ್ಲದಂತೆ ಡಾಂಬರೀಕರಣ ಮಾಡಬೇಕು. ಈ ಕಾಮಗಾರಿಯನ್ನು ನವೆಂಬರ್‌ನೊಳಗೆ ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

'401 ಕಿ.ಮೀ. ಉದ್ದದ 178 ರಸ್ತೆಗಳು ದೋಷಮುಕ್ತ ಅವಧಿಯಲ್ಲಿದ್ದು (ಡಿ.ಎಲ್.ಪಿ), ಆ ರಸ್ತೆಗಳಲ್ಲಿ ಬಿದ್ದಿರುವ ಗುಂಡಿ, ಮೇಲ್ಮೈ ಪದರ ಹಾಳಾಗಿದ್ದರೆ ಗುತ್ತಿಗೆದಾರರೇ ಅದನ್ನು ದುರಸ್ತಿಪಡಿಸಬೇಕು. ಕಾಲಮಿತಿಯಲ್ಲಿ ಗುಂಡಿ ಮುಚ್ಚದಿದ್ದರೆ ಪಾಲಿಕೆಯಿಂದಲೇ ಅದನ್ನು ಮುಚ್ಚಿ ಗುತ್ತಿಗೆದಾರರಿಗೆ ಬಿಡುಗಡೆ ಮಾಡುವ ಅನುದಾನದಲ್ಲಿ ಕಟಾವು ಮಾಡಿಕೊಳ್ಳಬೇಕು' ಎಂದರು.

'552 ಕಿ.ಮೀ ಉದ್ದದ 188 ರಸ್ತೆಗಳು ಡಿಎಲ್‌ಪಿ ಅವಧಿ ಪೂರ್ಣಗೊಂಡಿದ್ದು, ಅದರಲ್ಲಿ 435 ಕಿ.ಮೀ ಉದ್ದದ 126 ರಸ್ತೆಗಳು ಸುಸ್ಥಿತಿಯಲ್ಲಿವೆ. ಉಳಿದ 116 ಕಿ.ಮೀ. ಉದ್ದದ 62 ರಸ್ತೆಗಳಲ್ಲಿ ಆಯಾ ಪಾಲಿಕೆಗಳು ದುರಸ್ತಿ ಕಾರ್ಯ ಕೈಗೊಳ್ಳಬೇಕು' ಎಂದು ಹೇಳಿದರು.

'ರಸ್ತೆಗಳು ಸುಸ್ಥಿತಿಯಲ್ಲಿರಬೇಕು. ಈ ಸಂಬಂಧ ಆಯಾ ನಗರ ಪಾಲಿಕೆಗಳಲ್ಲಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಜೊತೆ ಸಭೆ ಏರ್ಪಡಿಸಿ ಇರುವ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಕಾಲಮಿತಿಯೊಳಗಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು' ಎಂದರು.

ನಗರದಲ್ಲಿ 46 ಕಿ.ಮೀ. ಉದ್ದದ 11 ಹೈಡೆನ್ಸಿಟಿ ಕಾರಿಡಾರ್‌ಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದ್ದು, ಸ್ಥಳೀಯವಾಗಿ ಇರುವ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಕಾಮಗಾರಿಗೆ ವೇಗ ನೀಡಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದರು.

ನಗರ ಪಾಲಿಕೆಗಳ ಆಯುಕ್ತರಾದ ರಾಜೇಂದ್ರ ಚೋಳನ್, ರಮೇಶ್ ಡಿ.ಎಸ್, ಪೊಮ್ಮಲ ಸುನಿಲ್ ಕುಮಾರ್, ರಮೇಶ್ ಕೆ.ಎನ್, ಡಾ. ರಾಜೇಂದ್ರ ಕೆ.ವಿ, ಹೆಚ್ಚುವರಿ ಆಯುಕ್ತರಾದ ಲತಾ ಆರ್, ಲೋಖಂಡೆ ಸ್ನೇಹಲ್ ಸುಧಾಕರ್, ದಿಗ್ವಿಜಯ್ ಬೋಡ್ಕೆ, ನವೀನ್ ಕುಮಾರ್ ರಾಜು ಉಪಸ್ಥಿತರಿದ್ದರು.

ಅಂಕಿ ಅಂಶಗಳು

1,648 ಕಿ.ಮೀ; ಜಿಬಿಎ ವ್ಯಾಪ್ತಿಯಲ್ಲಿರುವ ಪ್ರಮುಖ ರಸ್ತೆ

104 ಕಿ.ಮೀ 61 ರಸ್ತೆಗಳಲ್ಲಿ (2016ರಿಂದ 2024ರವರೆಗೆ) ವೈಟ್ ಟಾಪಿಂಗ್

143 ಕಿ.ಮೀ ₹1,700 ಕೋಟಿ ವೆಚ್ಚದಲ್ಲಿ 82 ರಸ್ತೆಗಳಲ್ಲಿ ವೈಟ್ ಟಾಪಿಂಗ್ ಪ್ರಗತಿ

ಚಿಕ್ಕಬೆಳ್ಳಂದೂರು ಕೆರೆ ಒತ್ತುವರಿ ತೆರವು

ಮಹದೇವಪುರ ವ್ಯಾಪ್ತಿಯಲ್ಲಿರುವ ಚಿಕ್ಕಬೆಳ್ಳಂದೂರು ಗ್ರಾಮದ ಸರ್ವೆ ಸಂಖ್ಯೆ-9ರಲ್ಲಿರುವ ಚಿಕ್ಕಬೆಳ್ಳಂದೂರು ಕೆರೆಯ ಒಟ್ಟು ವಿಸ್ತೀರ್ಣ 67 ಎಕರೆ 14 ಗುಂಟೆಯಾಗಿದೆ. ಈ ಕೆರೆಯಲ್ಲಿ ಮೂರು ಗುಂಟೆ ವಿಸ್ತೀರ್ಣದ ಒತ್ತುವರಿಯನ್ನು ತೆರವುಗೊಳಿಸಲಾಗಿದೆ ಎಂದು ಬೆಂಗಳೂರು ಪೂರ್ವ ನಗರ ಪಾಲಿಕೆ (ಬಿಡಬ್ಲ್ಯುಸಿಸಿ) ಆಯುಕ್ತ ಡಿ.ಎಸ್. ರಮೇಶ್ ತಿಳಿಸಿದರು.

ಕಂದಾಯ ಇಲಾಖೆಯು ಚಿಕ್ಕಬೆಳ್ಳಂದೂರು ಕೆರೆ ಪ್ರದೇಶದಲ್ಲಿನ ಒತ್ತುವರಿ ಜಾಗವನ್ನು ಗುರುತಿಸಿ, ಸರ್ವೆ ನಕ್ಷೆಯನ್ನು ನಗರ ಪಾಲಿಕೆಗೆ ನೀಡಿತ್ತು. ಅದರಂತೆ ನೋಟಿಸ್ ಮತ್ತು ಒತ್ತುವರಿ ತೆರವುಗೊಳಿಸಲು ಆದೇಶವನ್ನು ನೀಡಿದ್ದರೂ ಒತ್ತುವರಿದಾರರು ತೆರವು ಮಾಡಿರಲಿಲ್ಲ. ಕೆರೆ ಒತ್ತುವರಿ ಜಾಗವನ್ನು ಕಾರ್ಯಾಚರಣೆ ಮೂಲಕ ತೆರವುಗೊಳಿಸಿ ವಶಕ್ಕೆ ಪಡೆಯಲು ನಗರ ಪಾಲಿಕೆಯ ಮುಖ್ಯ ಎಂಜಿನಿಯರ್‌ಗೆ ಸೂಚಿಸಲಾಗಿತ್ತು.

ಚಿಕ್ಕಬೆಳ್ಳಂದೂರು ಕೆರೆಯಲ್ಲಿನ ಮೂರು ಗುಂಟೆ ಒತ್ತುವರಿಯನ್ನು ಸೋಮವಾರ ತೆರವುಗೊಳಿಸಲಾಯಿತು. ವಶಕ್ಕೆ ಪಡೆದಿರುವ ಪ್ರದೇಶಕ್ಕೆ ತಂತಿ ಬೇಲಿ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ರಮೇಶ್ ವಿವರಿಸಿದರು.

ಹೊತ್ತಿ ಉರಿದ ಬಿಎಂಟಿಸಿ ಬಸ್



ಹೊತ್ತಿ ಉರಿದ ಬಿಎಂಟಿಸಿ ಬಸ್

ಬೆಂಗಳೂರು: ನಗರದ ಎಚ್‌ಎಎಲ್ ಬಸ್ ನಿಲ್ದಾಣದ ಬಳಿ ಬಿಎಂಟಿಸಿ ಬಸ್‌ವೊಂದು ಸೋಮವಾರ ಬೆಳಿಗ್ಗೆ ಬೆಂಕಿಗೆ ಆಹುತಿಯಾಗಿದೆ.

ಬೆಳಿಗ್ಗೆ 5.30ರ ಸುಮಾರಿಗೆ ಮೆಜೆಸ್ಟಿಕ್‌ನಿಂದ ಕಾಡುಗೋಡಿಗೆ ಬಿಎಂಟಿಸಿ ಬಸ್ ತೆರಳುತ್ತಿತ್ತು. ಎಂಜಿನ್‌ನಲ್ಲಿ ಕಾಣಿಸಿಕೊಂಡ ಬೆಂಕಿಯು ಇಡೀ ಬಸ್‌ಗೆ ವ್ಯಾಪಿಸಿ ಹೊತ್ತಿ ಉರಿದಿದೆ. ತಕ್ಷಣವೇ ಎಚ್ಚೆತ್ತ ಚಾಲಕ ಬಸ್ ನಿಲ್ಲಿಸಿ, ಎಲ್ಲ ಪ್ರಯಾಣಿಕರನ್ನು ಕೆಳಕ್ಕೆ ಇಳಿಸಿದ್ದಾರೆ.

ಎಚ್‌ಎಎಲ್ ಅಗ್ನಿಶಾಮಕ ದಳ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದ್ದಾರೆ.

ಬಸ್ ಚಾಲಕ ಜಯಚಂದ್ರ ಮತ್ತು ನಿರ್ವಾಹಕ ಚೌಡಪ್ಪ ಅವರು ಸಮಯ ಪ್ರಜ್ಞೆಯಿಂದ ಎಲ್ಲ ಪ್ರಯಾಣಿಕರನ್ನು ಸುರಕ್ಷಿತವಾಗಿ ರಕ್ಷಿಸಿದ್ದಾರೆ. ಎಂಜಿನ್‌ನಲ್ಲಿ ಕಾಣಿಸಿಕೊಂಡ ಬೆಂಕಿ ಇಡೀ ಬಸ್‌ಗೆ ವ್ಯಾಪಿಸಿದೆ. ಯಾರಿಗೂ ಗಾಯವಾಗಿಲ್ಲ. ಬಸ್‌ನಲ್ಲಿ 40ಕ್ಕೂ ಹೆಚ್ಚು ಪ್ರಯಾಣಿಕರಿದ್ದರು ಎಂದು ಮೂಲಗಳು ತಿಳಿಸಿವೆ.

ಸಂಸದ ಡಾ. ಸಿ.ಎನ್. ಮಂಜುನಾಥ್‌ಗೆ ಸರ್‌ಎಂವಿ ಪ್ರಶಸ್ತಿ ಪ್ರದಾನ

'ಎಐ ತಂತ್ರಜ್ಞಾನ ಸದುಪಯೋಗಪಡಿಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಐ ತಂತ್ರಜ್ಞಾನದಿಂದ ಅನಾಹುತಗಳೇನು? ಎಷ್ಟು ಉದ್ಯೋಗ ಕಡಿತಗೊಳ್ಳಲಿವೆ ಎನ್ನುವ ಅನಗತ್ಯ ಭಯಕ್ಕೆ ಒಳಗಾಗುವುದು ಬೇಡ. ವೈದ್ಯಕೀಯ ಸೇರಿ ಹೆಚ್ಚಿನ ಕ್ಷೇತ್ರದಲ್ಲಿ ಬದಲಾವಣೆಗೆ ಅವಕಾಶವಾಗುತ್ತಿದ್ದು, ಇದನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಯುವ ಸಮುದಾಯವನ್ನು ಸಜ್ಜುಗೊಳಿಸಬೇಕು ಎಂದು ಸಂಸದ ಡಾ.ಸಿ.ಎನ್.ಮಂಜುನಾಥ್ ಸಲಹೆ ನೀಡಿದರು.

ನಗರದ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯಲ್ಲಿ ಸೋಮವಾರ ನಡೆದ ಸಂಸ್ಥಾಪಕರ ದಿನಾಚರಣೆಯಲ್ಲಿ ಸರ್.ಎಂ.ವಿ. ಸ್ಮಾರಕ ಪ್ರಶಸ್ತಿಯನ್ನು ಸ್ವೀಕರಿಸಿ ಅವರು ಮಾತನಾಡಿದರು.

'ಎಐ ತಂತ್ರಜ್ಞಾನ ಯಾವ ರೀತಿಯಲ್ಲಿ ವೈದ್ಯಕೀಯ ಕ್ಷೇತ್ರವನ್ನು ಆವರಿಸುತ್ತಿದೆ ಎಂದರೆ ನಮ್ಮ ಈಗಿನ ದೈಹಿಕ ಆರೋಗ್ಯ ಮಾತ್ರವಲ್ಲ. ಮುಂದಿನ 20 ವರ್ಷಗಳಲ್ಲಿ ಬರಬಹುದಾದ ರೋಗಗಳ ಮಾಹಿತಿಯನ್ನು ನೀಡುವ ಮಟ್ಟಿಗೆ ಬೆಳೆದಿದೆ. ಈ ರೀತಿ ಆತಂಕ ಹುಟ್ಟಿಸುವ ತಂತ್ರಜ್ಞಾನ ಬಳಸುವಾಗ ಎಚ್ಚರಿಕೆ ವಹಿಸಬೇಕು. ಅದಲ್ಲದೇ ಜೀವನಶೈಲಿಗೆ ಮಾರಕವಾಗುತ್ತಿರುವ ಸಾಮಾಜಿಕ ಮಾಧ್ಯಮಗಳ ಬಳಕೆಗೂ ನಿಯಂತ್ರಣ ಹೇರಿಕೊಳ್ಳಬೇಕು' ಎಂದು ನುಡಿದರು.

ನಿವೃತ್ತ ಐಎಎಸ್ ಅಧಿಕಾರಿ ಸಿ.ಸೋಮಶೇಖರ್ ಉಪನ್ಯಾಸ ನೀಡಿದರು. ರಾಜ್ಯಸಭಾ ಸದಸ್ಯ ಲಹರ್‌ಸಿಂಗ್ ಸಿರೋಯ್, ಒಕ್ಕೂಟದ ಅಧ್ಯಕ್ಷ ಎಂ.ಜಿ.ಬಾಲಕೃಷ್ಣ, ನಿಯೋಜಿತ ಅಧ್ಯಕ್ಷೆ ಉಮಾರೆಡ್ಡಿ, ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ಕೆ.ರಾಮಸ್ವಾಮಿ, ನಿಕಟಪೂರ್ವ ಅಧ್ಯಕ್ಷ ರಮೇಶಚಂದ್ರ ಲಹೋಟಿ, ಹಿರಿಯ ಉಪಾಧ್ಯಕ್ಷ ಟಿ.ಸಾಯಿರಾಂ ಪ್ರಸಾದ್ ಹಾಜರಿದ್ದರು.



ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ.ಸಿ.ಎನ್ ಮಂಜುನಾಥ್ ಅವರಿಗೆ ಸೋಮವಾರ 'ಸರ್ ಎಂ.ವಿ. ಸ್ಮಾರಕ ಪ್ರಶಸ್ತಿ'ಪ್ರದಾನ ಮಾಡಲಾಯಿತು ಪ್ರಜಾವಾಣಿ ಚಿತ್ರ

> **ವಿಜ್ಞಾನವನ್ನು ಬಳಸಿಕೊಳ್ಳುವುದು ಸಮಾಜದ ಪ್ರಗತಿಗೆ ಪೂರಕವಾಗಲಿದೆ ಎನ್ನುವುದಕ್ಕೆ ಶತಮಾನದ ಹಿಂದೆ ಸರ್ ಎಂವಿ ಮಾಡಿದ ಕೆಲಸಗಳೇ ಸಾಕ್ಷಿ**
> **ಡಾ.ನಿರ್ಮಲಾನಂದನಾಥ ಸ್ವಾಮೀಜಿ** ಪೀಠಾಧಿಪತಿ. ಆದಿಚುಂಚನಗಿರಿ ಮಠ

ಮಲಿನ ನೀರು ಸಂಸ್ಕರಿಸಿ

ಮಿತಿ ಮೀರಿದ ಪ್ರಗತಿಯಿಂದ ಬೆಂಗಳೂರಿನಂತಹ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಜನ ಅನಾರೋಗ್ಯವನ್ನು ತಂದುಕೊಳ್ಳುವಂತಾಗಿದೆ. ಕಸ ನಿರ್ವಹಣೆ, ಮಲಿನ ನೀರು ಸಂಸ್ಕರಣೆ ವೈಜ್ಞಾನಿಕವಾಗಿ ಆಗದೇ ಅಂತರ್ಜಲವೂ ಕಲುಷಿತಗೊಂಡು ತೆಂಗಿನ ನೀರು ಕೂಡ ಪರೋಕ್ಷವಾಗಿ ರೋಗಗಳನ್ನು ತರುತ್ತಿದೆ. ಚರಂಡಿ ಇಲ್ಲದೇ ರಸ್ತೆಗಳ ಸುಧಾರಣೆಯೂ ಆಗುತ್ತಿಲ್ಲ. ಆಡಳಿತದಲ್ಲಿರುವವರು ಈ ಮೂರು ವಿಷಯಗಳ ಕುರಿತು ಗಮನ ಹರಿಸಬೇಕು ಎಂದು ಡಾ.ಸಿ.ಎನ್.ಮಂಜುನಾಥ್ ಕಿವಿಮಾತು ಹೇಳಿದರು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಆಡುಗೋಡಿ ವಿದ್ಯುತ್ ಉಪಕೇಂದ್ರದಲ್ಲಿ ತುರ್ತು ನಿರ್ವಹಣೆ ಕೈಗೊಳ್ಳುವ ಕಾರಣ ಇದೇ 16ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಸ್ಥಳಗಳು: ಆಡುಗೋಡಿ, ಸಲಾಪುರಿಯಾ ಟವರ್, ಬಿಗ್ ಬಜಾರ್, ನಂಜಪ್ಪ ಲೇಔಟ್, ನ್ಯೂ ಮೈಕೊ ರಸ್ತೆ, ಚಿಕ್ಕ ಲಕ್ಷ್ಮೀ ಲೇಔಟ್, ಮಹಾಲಿಂಗೇಶ್ವರ ಬಡಾವಣೆ, ಬೆಂಗಳೂರು ಡೇರಿ, ಫೋರಾಮ್, ರಂಗದಾಸಪ್ಪ ಲೇಔಟ್, ಲಕ್ಕಸಂದ್ರ, ವಿಲ್ಸನ್ ಗಾರ್ಡನ್, ಚಿನ್ನಯ್ಯನ ಪಾಳ್ಯ, ಚಂದ್ರಪ್ಪ ನಗರ, ನಿಮ್ಹಾನ್ಸ್ ಅಡ್ಮಿನಿಸ್ಟ್ರೇಟಿವ್ ಬ್ಲಾಕ್, ಬಂಡೆ ಸ್ಲಂ, ಸುಣ್ಣದಕಲ್ಲು, ಬೃಂದಾವನ ಸ್ಲಂ, ಲಾಲ್ ಜಿ ನಗರ, ಶಾಮಣ್ಣ ಗಾರ್ಡನ್, ಎನ್‌ಡಿಆರ್‌ಐ, ಪೊಲೀಸ್ ವಸತಿ ಗೃಹಗಳು.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ರಾಜಾನುಕುಂಟೆ ಉಪಕೇಂದ್ರದ ವ್ಯಾಪ್ತಿಯಲ್ಲಿ ತುರ್ತು ನಿರ್ವಹಣೆ ಕೈಗೊಳ್ಳುವ ಕಾರಣ ಸೆ.17ರಂದು ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಸ್ಥಳಗಳು: ಹೊನ್ನೇನಹಳ್ಳಿ, ಸಿಂಗನಾಯಕನಹಳ್ಳಿ, ರಾಜಾನುಕುಂಟೆ, ಅಡ್ದೇವಿಶ್ವನಾಥಪುರ, ಮಾರಸಂದ್ರ, ಶ್ರೀರಾಮನಹಳ್ಳಿ, ನೆಲಕುಂಟೆ, ಹನಿಯೂರು, ಚೆಲ್ಲಹಳ್ಳಿ, ಕೆಎಂಎಫ್, ಬೈರಾಪುರ, ಬೂದಮನಹಳ್ಳಿ, ದಿಬ್ಬೂರು, ಕಾಕೋಲು, ಸೊನ್ನೇನಹಳ್ಳಿ. ಸೆಂಚುರಿ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಸ್ನೇಹಲ್ ಜೀವನೋಪಾಯ ಮಿಷನ್ ಎಂ.ಡಿ

ಬೆಂಗಳೂರು: ಹುದ್ದೆಯ ನಿರೀಕ್ಷೆಯಲ್ಲಿದ್ದ ಐಎಎಸ್ ಅಧಿಕಾರಿ ಸ್ನೇಹಲ್. ಆರ್ ಅವರಿಗೆ ರಾಷ್ಟ್ರೀಯ ಜೀವನೋಪಾಯ ನಿರ್ವಹಣೆ ಮಿಷನ್‌ನ ವ್ಯವಸ್ಥಾಪಕ ನಿರ್ದೇಶಕರ ಹುದ್ದೆ ನೀಡಲಾಗಿದೆ.

ಸೂರ್ಯನಗರದಲ್ಲಿ ಅಂತರರಾಷ್ಟ್ರೀಯ ಸ್ಟೇಡಿಯಂ

ಸುಮಾರು 100 ಎಕರೆ ಜಾಗದಲ್ಲಿ ಕ್ರೀಡಾ ಹಬ್ ನಿರ್ಮಾಣ
• ಗೃಹ ಮಂಡಳಿಯಿಂದ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ

• ಎ.ಎಂ.ಸುರೇಶ

ಬ್ರ್ಯಾಂಡ್ ಬೆಂಗಳೂರು

ಬೆಂಗಳೂರು: ಸೂರ್ಯನಗರದ ನಾಲ್ಕನೇ ಹಂತದಲ್ಲಿ (ಇಂಡಲವಾಡಿ) 80 ಸಾವಿರ ಆಸನಗಳ ಸಾಮರ್ಥ್ಯವಿರುವ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ಮತ್ತು ಕ್ರೀಡಾ ಸಂಕೀರ್ಣ ನಿರ್ಮಿಸಲು ಕರ್ನಾಟಕ ಗೃಹ ಮಂಡಳಿ ಮುಂದಾಗಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಮೂರು ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ.

ಸ್ಟೇಡಿಯಂ ನಿರ್ಮಾಣ ಸಂಬಂಧ ಗೃಹ ಮಂಡಳಿ ಸಿದ್ಧಪಡಿಸಿರುವ ಪ್ರಸ್ತಾವನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ತಾತ್ವಿಕ ಒಪ್ಪಿಗೆ ನೀಡಿದ್ದಾರೆ. ಸಚಿವ ಸಂಪುಟದ ಅನುಮೋದನೆ ದೊರೆತ ಬಳಿಕ ಟೆಂಡರ್ ಪ್ರಕ್ರಿಯೆ ಆರಂಭವಾಗಲಿದೆ.

ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಕಳೆದ ಜೂನ್‌ನಲ್ಲಿ ಕಾಲ್ತುಳಿತ ಸಂಭವಿಸಿದ ಬಳಿಕ ಎಚ್ಚೆತ್ತುಕೊಂಡಿರುವ ಸರ್ಕಾರ, ನಗರದ ಹೊರ ಭಾಗದಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಾಣಕ್ಕೆ ಉತ್ಸುಕವಾಗಿದೆ. ಗೃಹ ಮಂಡಳಿಯು ಈಗಾಗಲೇ ಲಭ್ಯವಿರುವ 75 ಎಕರೆ ಜಾಗದಲ್ಲಿ 50 ಸಾವಿರ ಆಸನಗಳ ಸಾಮರ್ಥ್ಯವುಳ್ಳ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗಿತ್ತು. ಆದರೆ, ಮುಖ್ಯಮಂತ್ರಿ ಅವರು ಇನ್ನೂ 25 ಎಕರೆ ಜಾಗವನ್ನು ಪಡೆದು ಒಟ್ಟು ಆಸನಗಳ ಸಾಮರ್ಥ್ಯವನ್ನು 80 ಸಾವಿರಕ್ಕೆ ಹೆಚ್ಚಿಸುವಂತೆ ಸೂಚಿಸಿದ್ದಾರೆ.

ಬೆಂಗಳೂರು ಅಂತರರಾಷ್ಟ್ರೀಯ ಮಟ್ಟದ ನಗರವಾಗಿದ್ದು, ಕ್ರಿಕೆಟ್ ವೀಕ್ಷಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಬರುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಆಸನಗಳ ಸಂಖ್ಯೆ ಹೆಚ್ಚಿಸುವುದು ಒಳ್ಳೆಯದು ಎಂಬ ಅಭಿಪ್ರಾಯ ಈಚೆಗೆ ನಡೆದ ಸಭೆಯಲ್ಲಿ ವ್ಯಕ್ತವಾಗಿದೆ. ಹೀಗಾಗಿ ಪರಿಷ್ಕರಿಸಿದ, ವಿಸ್ತೃತವಾದ ಯೋಜನಾ ವರದಿಯನ್ನು ಸಿದ್ಧಪಡಿಸಿ ಸಂಪುಟಕ್ಕೆ ಕಳುಹಿಸಲು ಮಂಡಳಿಯ ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ. ಕ್ರೀಡಾಂಗಣ ನಿರ್ಮಾಣದ ಜವಾಬ್ದಾರಿಯನ್ನು ಗೃಹ ಮಂಡಳಿ ವಹಿಸಿಕೊಳ್ಳಲಿದೆ. ಸುಮಾರು ₹2 ಸಾವಿರ ಕೋಟಿ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ. ಇದನ್ನು ಮಂಡಳಿಯೇ ಭರಿಸಲಿದ್ದು, ನಿರ್ಮಾಣದ ನಂತರ ಬರುವ ಆದಾಯ ಮಂಡಳಿಗೆ ಹೋಗಲಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ ಭಾರತದಲ್ಲಿ ಅತಿ ದೊಡ್ಡದಾಗಿದ್ದು, ಒಟ್ಟು 1,10,000 ಆಸನಗಳ ಸಾಮರ್ಥ್ಯ ಹೊಂದಿದೆ. ಸೂರ್ಯನಗರದಲ್ಲಿ ನಿರ್ಮಾಣವಾಗುವುದು ಭಾರತದ ಎರಡನೇ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣವಾಗಲಿದೆ. ಸದ್ಯ ನಗರದಲ್ಲಿ ಇರುವ ಚಿನ್ನಸ್ವಾಮಿ ಕ್ರೀಡಾಂಗಣ 36,000 ಆಸನಗಳ ಸಾಮರ್ಥ್ಯ ಹೊಂದಿದೆ.

‘ಭಾರತೀಯ ಕ್ರೀಡಾ ಪ್ರಾಧಿಕಾರ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಜೊತೆ ಮಾತುಕತೆ ನಡೆಸಿ, ಆ ಸಂಸ್ಥೆಗಳ ಸಲಹೆಗಳನ್ನು ಪಡೆಯಲಿದ್ದೇವೆ. ಮುಂದೆ ಯಾವುದೇ ರೀತಿಯ ತೊಂದರೆಗಳು ಬರಬಾರದು. ಹೀಗಾಗಿ ಅಗತ್ಯ ಸಿದ್ಧತೆ, ಎಲ್ಲರ ಅಭಿಪ್ರಾಯಗಳನ್ನು ಪಡೆದ ನಂತರವೇ ಇದಕ್ಕೆ ಅಂತಿಮ ರೂಪ ನೀಡಲಾಗುತ್ತದೆ’ ಎಂದು ಗೃಹ ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಯಾವೆಲ್ಲ ಕ್ರೀಡೆಗಳಿಗೆ ಅವಕಾಶ

ಹೊರಾಂಗಣ ಕ್ರೀಡೆಗಳು	ಒಳಾಂಗಣ ಕ್ರೀಡೆಗಳು
ಕ್ರಿಕೆಟ್	ಬ್ಯಾಡ್ಮಿಂಟನ್
ಹಾಕಿ	ಬ್ಯಾಸ್ಕೆಟ್‌ಬಾಲ್
ಅಥ್ಲೆಟಿಕ್ಸ್	ವಾಲಿಬಾಲ್
ಟೆನಿಸ್	ಟೇಬಲ್ ಟೆನಿಸ್
ಪಿಕಲ್‌ಬಾಲ್	ಜೂಡೊ
ಬ್ಯಾಸ್ಕೆಟ್‌ಬಾಲ್	ಕಬಡ್ಡಿ
ಇತರೆ	ವೇಟ್‌ಲಿಫ್ಟಿಂಗ್
	ಕೊಕ್ಕೊ
	ಫೆನ್ಸಿಂಗ್
	ಇಕ್ವೆಸ್ಟ್ರಿಯನ್

ಉದ್ದೇಶಿತ ಸ್ಟೇಡಿಯಂನಿಂದ ಪ್ರಮುಖ ಸ್ಥಳಗಳಿಗೆ ಇರುವ ಅಂತರ

47.9 ಕಿ.ಮೀ.	ಕೆಂಪೇಗೌಡ ಬಸ್ ನಿಲ್ದಾಣದಿಂದ
72.2 ಕಿ.ಮೀ.	ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ
11.2 ಕಿ.ಮೀ.	ಆನೇಕಲ್ ರೈಲು ನಿಲ್ದಾಣದಿಂದ
18.4 ಕಿ.ಮೀ.	ಬೊಮ್ಮಸಂದ್ರ ಮೆಟ್ರೊ ನಿಲ್ದಾಣದಿಂದ




ಉದ್ದೇಶಿತ ಅಂತರರಾಷ್ಟ್ರೀಯ ಕ್ರೀಡಾಂಗಣದ ನೀಲನಕ್ಷೆ

ಏನೆಲ್ಲ ಇರಲಿದೆ..

- ಆಟಗಾರರು, ತರಬೇತಿದಾರರಿಗೆ ವಸತಿ
- ವೈದ್ಯಕೀಯ ಕೇಂದ್ರ
- ಕ್ರೀಡಾ ವಿಜ್ಞಾನ ಕೇಂದ್ರ
- ಫಿಟ್ನೆಸ್ ಸೆಂಟರ್
- ಪೌಷ್ಟಿಕಾಂಶ ಕೇಂದ್ರ
- ಫಿಸಿಯೊಥೆರಪಿ ಕೇಂದ್ರ
- ಹೈಡ್ರೊಥೆರಪಿ ಕೇಂದ್ರ
- ಈಜುಕೊಳ
- ಸಭಾಂಗಣ
- ರೆಸ್ಟೋರೆಂಟ್
- ಪ್ರದರ್ಶನ ಕೇಂದ್ರ
- ಕ್ರೀಡಾ ಮಳಿಗೆಗಳು
- ಮಾರಾಟ ಮಳಿಗೆಗಳು
- ಸಮಾವೇಶ ಸಭಾಂಗಣ

ಕೊಲೆ ಆರೋಪಿ ದರ್ಶನ್ ಪರ ವಕೀಲರಿಂದ ದೂರು
‘ಕೋರ್ಟ್ ಸೂಚಿಸಿದ್ದರೂ ಸೌಕರ್ಯ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿ ಇರುವ ನಟ ದರ್ಶನ್ ಅವರಿಗೆ ಮೂಲಸೌಲಭ್ಯ ಕಲ್ಪಿಸುವಂತೆ ಕೋರ್ಟ್ ಸೂಚನೆ ನೀಡಿದ್ದರೂ ಜೈಲಿನ ಅಧಿಕಾರಿಗಳು ಯಾವುದೇ ಸೌಲಭ್ಯ ಕಲ್ಪಿಸುತ್ತಿಲ್ಲ ಎಂದು ಆರೋಪಿಸಿ ದರ್ಶನ್ ಪರ ವಕೀಲರು 57ನೇ ಸಿಸಿಎಚ್ ಕೋರ್ಟ್‌ಗೆ ಸೋಮವಾರ ಅರ್ಜಿ ಸಲ್ಲಿಸಿದರು.

‘ಹಾಸಿಗೆ, ದಿಂಬು ನೀಡುವಂತೆ ಆದೇಶಿಸಿದ್ದರೂ ಜೈಲಿನ ಅಧಿಕಾರಿಗಳು ಯಾವುದೇ ಸೌಕರ್ಯ ನೀಡಿಲ್ಲ. ತುಂಬಾ ಚಳಿಯಿದ್ದು, ಜೈಲಿನಲ್ಲಿ ದರ್ಶನ್‌ಗೆ ಕಷ್ಟವಾಗುತ್ತಿದೆ’ ಎಂದು ವಕೀಲರು ಹೇಳಿದರು. ಅರ್ಜಿ ಸ್ವೀಕರಿಸಿದ ನ್ಯಾಯಾಲಯವು ಮುಂದಿನ ವಿಚಾರಣೆಯನ್ನು ಸೆ.27ಕ್ಕೆ ಮುಂದೂಡಿತು.

‘ಕೋರ್ಟ್ ಆದೇಶದ ಪ್ರತಿಯನ್ನು ಜೈಲಿನ ಅಧಿಕಾರಿಗಳಿಗೆ ಇ-ಮೇಲ್ ಮಾಡಲಾಗಿದೆ. ಆದರೂ ದರ್ಶನ್‌ಗೆ ಅದೇ ನರಕ ಮುಂದುವರಿದಿದೆ. ಎರಡು-ಮೂರು ಬಾರಿ ಜೈಲಿಗೆ ಹೋಗಿ ವಿಚಾರಿಸಿದ್ದೀವಿ. ಆದರೂ ಯಾವುದೇ ಸೌಲಭ್ಯ ನೀಡಿಲ್ಲ’ ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

‘ಜೈಲಿನಲ್ಲಿ ಕನಿಷ್ಠ ಮೂಲಸೌಲಭ್ಯಗಳನ್ನೂ ನೀಡುತ್ತಿಲ್ಲ. ಬ್ಯಾರಕ್‌ನಿಂದ ಹೊರಗೆ ಬರುವುದಕ್ಕೂ ಬಿಡುತ್ತಿಲ್ಲ. ಮೈಮೇಲೆ ಬಿಸಿಲು ಬಿದ್ದು ಹಲವು ದಿನಗಳೇ ಆಗಿವೆ. ಕೈಯಲ್ಲಿ ಫಂಗಸ್ ಕಾಣಿಸಿಕೊಂಡಿದೆ (ಚರ್ಮದ ಅಲರ್ಜಿ). ಬೇರೆ ಯಾರಿಗೂ ಬೇಡ; ನನಗೆ ಮಾತ್ರ ವಿಷ ನೀಡಲಿ. ಈ ಸಂಬಂಧ ಕೋರ್ಟ್ ಆದೇಶ ನೀಡಲಿ...’ ಎಂದು ಸೆ.9ರಂದು ನಡೆದ ವಿಚಾರಣೆ ವೇಳೆ ದರ್ಶನ್ ಅವರು ನ್ಯಾಯಾಧೀಶರ ಎದುರು ಅಲವತ್ತುಕೊಂಡಿದ್ದರು. ಜೈಲಿನ ಕೈಪಿಡಿಯಂತೆ ಸೌಲಭ್ಯ ಕಲ್ಪಿಸಬಹುದು ಎಂದು ನ್ಯಾಯಾಲಯ ಹೇಳಿತ್ತು.

ಮುಖ್ಯಾಂಶಗಳು

- ಜೈಲಿನಲ್ಲಿ ದರ್ಶನ್‌ಗೆ ಕಷ್ಟವಾಗುತ್ತಿದೆ: ವಕೀಲರು
- ಸೆ.27ಕ್ಕೆ ವಿಚಾರಣೆ ಮುಂದೂಡಿದ ಕೋರ್ಟ್
- ನನಗೆ ವಿಷ ನೀಡಿ ಎಂದಿದ್ದ ದರ್ಶನ್


ದರ್ಶನ್

‘ಅಸಲು ದಾವೆಗೆ ಅರ್ಜಿ ಪೋಣಿಸದಿರಿ’

ಬೆಂಗಳೂರು: ‘ಸ್ಥಿರಾಸ್ತಿಗೆ ಸಂಬಂಧಿಸಿದ ಸಿವಿಲ್ ಮತ್ತು ನಿರ್ದಿಷ್ಟ ಪರಿಹಾರ ಕೋರಿಕೆಯ ವ್ಯಾಜ್ಯಗಳಲ್ಲಿ ಅಸಲು ದಾವೆಗಳ ವಿಚಾರಣೆ ಅಂತಿಮ ಚರಣದಲ್ಲಿದ್ದಾಗ ಉದ್ದೇಶಪೂರ್ವಕವಾಗಿ ಹೊಸ ಹೊಸ ಮನವಿ ಹೊಂದಿದ ಅರ್ಜಿಗಳನ್ನು ಪೋಣಿಸುವ ಮೂಲಕ ಮೂಲ ದಾವೆಗೆ ವಿಳಂಬ ಉಂಟು ಮಾಡುವ ನಡೆ ಸಲ್ಲ’ ಎಂದು ಹೈಕೋರ್ಟ್ ತೀವ್ರ ಕಿಡಿ ಕಾರಿದೆ.

ಸ್ಥಿರಾಸ್ತಿ ವ್ಯಾಜ್ಯಕ್ಕೆ ಸಂಬಂಧಿಸಿದ ಪ್ರಕರಣವೊಂದು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠದಲ್ಲಿ ಸೋಮವಾರ ವಿಚಾರಣೆಗೆ ನಿಗದಿಯಾಗಿತ್ತು. ಈ ವೇಳೆ ನ್ಯಾಯಮೂರ್ತಿಗಳು, ಅರ್ಜಿದಾರರು ದಶಕಗಳಷ್ಟು ಹಳೆಯದಾದ ಅಸಲು ದಾವೆಯನ್ನು ಇನ್ನೂ ಬಗೆಹರಿಸಿಕೊಳ್ಳದೇ ಇರುವ ಬಗ್ಗೆ ಕಿಡಿ ಕಾರಿದರು.

‘ಈ ರೀತಿಯಲ್ಲಿ ಹೊಸ ಬೇಡಿಕೆಯ ಮೂಲಕ ವಿಳಂಬ ಧೋರಣೆ ಅನುಸರಿಸುವ ನಿಮ್ಮ ನಡೆ ಸರಿಯಲ್ಲ. ನಿರ್ದಿಷ್ಟ ಪರಿಹಾರ ಕೋರಿಕೆ ಮತ್ತು ಅಸಲು ದಾವೆಗಳು ಈ ರೀತಿಯ ಮಧ್ಯಂತರ ಅಥವಾ ಹೊಸ ಹೊಸ ರಿಟ್ ಅರ್ಜಿಗಳ ಮೂಲಕ ಹೈಕೋರ್ಟ್ ಮೆಟ್ಟಿಲೇರಿದರೆ ವಿಚಾರಣಾ ನ್ಯಾಯಾಲಯಗಳಲ್ಲಿನ ದಾವೆಗಳು ಬಗೆಹರಿಯುವುದು ಯಾವ ಕಾಲಕ್ಕೆ’ ಎಂದು ಖಾರವಾಗಿ ಪ್ರಶ್ನಿಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಆದೇಶ ಹೊರಡಿಸಿ ವಿಚಾರಣೆ ಮುಂದೂಡಿತು.

ನಿವೇಶನದಲ್ಲಿ ಕಟ್ಟಡ ತ್ಯಾಜ್ಯ–ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆಗೆ (ಎಪಿಎಂಸಿ) ಹೊಂದಿಕೊಂಡಿರುವ ಖಾಲಿ ನಿವೇಶನದಲ್ಲಿ ಕಟ್ಟಡ ತ್ಯಾಜ್ಯವನ್ನು ಸಂಗ್ರಹಿಸಿ, ವಿಲೇವಾರಿ ಮಾಡಲಾಗುತ್ತಿದೆ. ಇದರಿಂದ ಇಡೀ ಪ್ರದೇಶಕ್ಕೆ ದೂಳಿನ ಮಜ್ಜನವಾಗುತ್ತಿದೆ. ಇದರ ಪಕ್ಕದಲ್ಲಿ ದಿನಬಳಕೆ ಉತ್ಪನ್ನಗಳನ್ನು ಮಾರಾಟ ಮಾಡುವ ಮಳಿಗೆಗಳಿದ್ದು, ವರ್ತಕರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ ಎಂದು ಕಿರಾಣಾ ಕಾಂಪ್ಲೆಕ್ಸ್ ವ್ಯಾಪಾರಿಗಳು ದೂರಿದರು.

‘ನಿತ್ಯ ಹತ್ತಾರು ಲೋಡ್ ಕಟ್ಟಡ ತ್ಯಾಜ್ಯವನ್ನು ಟ್ರಾಕ್ಟರ್‌ಗಳ ಮೂಲಕ ತೆಗೆದುಕೊಂಡು ಬಂದು ಇಲ್ಲಿ ಸಂಗ್ರಹಿಸಲಾಗುತ್ತಿದೆ. ಈ ತ್ಯಾಜ್ಯದಲ್ಲಿ ಇರುವ ಕಬ್ಬಿಣ ಸೇರಿದಂತೆ ಇತರೆ ವಸ್ತುಗಳನ್ನು ಬೇರೆ ಬೇರೆ ಮಾಡಿ, ಜೆಸಿಬಿಯ ಮೂಲಕ ಉಳಿದ ತ್ಯಾಜ್ಯವನ್ನು ಬೇರೆ ಕಡೆಗೆ ಸಾಗಿಸಲಾಗುತ್ತಿದೆ. ಇದರಿಂದ ಸಂಚಾರ ದಟ್ಟಣೆ ಆಗುತ್ತಿದ್ದು, ಎಪಿಎಂಸಿ ಯಾರ್ಡ್ ಒಳಗಡೆ ಹೋಗಲು ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ’ ಎಂದು ಕಿರಾಣಾ ಕಾಂಪ್ಲೆಕ್ಸ್‌ನ ವ್ಯಾಪಾರಿಗಳಾದ ನಾಗರಾಜ್ ಕಿಣಿ, ನಾಗರಾಜ್ ಹೇಳಿದರು.

‘ಖಾಲಿ ನಿವೇಶನದಲ್ಲಿ ಕಟ್ಟಡ ತ್ಯಾಜ್ಯವನ್ನು ವಿಲೇವಾರಿ ಮಾಡದಂತೆ ಹಲವಾರು ಬಾರಿ ಹೇಳಿದ್ದೇವೆ. ಈ ಬಗ್ಗೆ ನಿವೇಶನದ ಮಾಲೀಕರಿಗೆ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಆದ್ದರಿಂದ ಎಪಿಎಂಸಿ ಆವರಣದಲ್ಲಿರುವ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ಪೊಲೀಸರು ನಮ್ಮ ಮನವಿಗೆ ಸ್ಪಂದಿಸಿ, ನಿವೇಶನದ ಮಾಲೀಕರಿಗೆ ಇಲ್ಲಿ ಕಟ್ಟಡ ತ್ಯಾಜ್ಯ ಸುರಿಯದಂತೆ ಎಚ್ಚರಿಕೆ ನೀಡಿದ್ದಾರೆ’ ಎಂದು ಮಾಹಿತಿ ನೀಡಿದರು.


ಯಶವಂತಪುರ ಎಪಿಎಂಸಿ ಯಾರ್ಡ್ ಪಕ್ಕದ ಖಾಲಿ ನಿವೇಶನದಲ್ಲಿ ಕಟ್ಟಡ ತ್ಯಾಜ್ಯ ಸುರಿಯಲಾಗಿದೆ —ಪ್ರಜಾವಾಣಿ ಚಿತ್ರ

ವಿಲೇವಾರಿ ಅಗ್ರೇಸರ ನ್ಯಾ.ನಾಗಪ್ರಸನ್ನ

ಬೆಂಗಳೂರು: ರಾಜ್ಯ ಹೈಕೋರ್ಟ್ ಬೆಂಗಳೂರು ಪ್ರಧಾನಪೀಠ, ಧಾರವಾಡ ಮತ್ತು ಕಲಬುರಗಿ ಸೇರಿದಂತೆ ಒಟ್ಟು ಮೂರೂ ಪೀಠಗಳಲ್ಲಿನ ಹಾಲಿ 43 ನ್ಯಾಯಮೂರ್ತಿಗಳಲ್ಲಿ, ಪ್ರಕರಣಗಳ ವಿಲೇವಾರಿಯಲ್ಲಿ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಅಗ್ರೇಸರ ಎನಿಸಿದ್ದಾರೆ. ದೇಶದ ವಿವಿಧ ಹೈಕೋರ್ಟ್‌ಗಳ ನ್ಯಾಯಮೂರ್ತಿಗಳ ವಿಲೇವಾರಿ ವೇಗದಲ್ಲಿ ಅಗ್ರಪಂಕ್ತಿ ಕಾಪಾಡಿಕೊಂಡಿ ರುವ ಅವರು ಸೋಮವಾರ ಬೆಳಿಗ್ಗೆ 10.30ರಿಂದ ಸಂಜೆ 7.15ರವರೆಗೆ 535 ಅರ್ಜಿಗಳ ವಿಚಾರಣೆ ನಡೆಸಿದರು.

ರಿಟ್, ಕ್ರಿಮಿನಲ್, ಸಿವಿಲ್, ಕೌಟುಂಬಿಕ, ವಿವಿಧ ಪ್ರಾಧಿಕಾರಗಳೂ ಸೇರಿದಂತೆ ಹೊಸ ಮುಖ್ಯ ನ್ಯಾಯಮೂರ್ತಿಗಳು ಬಂದ ಮೇಲೆ ತೆರಿಗೆ ಪ್ರಕರಣಗಳನ್ನೂ ಇವರ ಹೆಗಲಿಗೆ ವರ್ಗಾಯಿಸಲಾಗಿದೆ. ಎಲ್ಲ ಪ್ರಕಾರಗಳಲ್ಲೂ ತೀಕ್ಷ್ಣ ಮತ್ತು ತೀವ್ರ ವೇಗದಲ್ಲಿ ವಿಲೇವಾರಿಯ ಚಾಣಾಕ್ಷತೆ ಹೊಂದಿರುವ ನಾಗಪ್ರಸನ್ನ ಸೋಮವಾರ ವಿಚಾರಣೆ ನಡೆಸಿದ 535 ಅರ್ಜಿಗಳಲ್ಲಿ 66 ಅರ್ಜಿಗಳನ್ನು ವಿಲೇವಾರಿ ಮಾಡಿದರು.

‘ಹಿಂದಿ ದಿವಸ್’ಗೆ ಕರವೇ ಪ್ರತಿಭಟನೆ

ಬೆಂಗಳೂರು: ಗಾಂಧಿನಗರದ ಖಾಸಗಿ ಹೋಟೆಲ್‌ನಲ್ಲಿ ರಾಜ್ಯ ಭಾಷಾ ಮಹಾ ಸಂಘ ಸೋಮವಾರ ಹಿಂದಿ ದಿವಸ್ ಆಚರಣೆ ಮಾಡುತ್ತಿರುವುದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಮಹಿಳಾ ಸದಸ್ಯರು ಪ್ರತಿಭಟನೆ ನಡೆಸಿದರು.

ವೇದಿಕೆಯ ಕಾರ್ಯಕರ್ತೆಯರು ಹೋಟೆಲ್‌ಗೆ ನುಗ್ಗಿ, ಬ್ಯಾನರ್ ಹರಿದು, ಶೀಲ್ಡ್ ಒಡೆದು ಹಾಕಿ ಗಲಾಟೆ ಮಾಡಿದರು. ಪೊಲೀಸರು ಬಂದು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಮಹಿಳಾ ಕಾರ್ಯಕರ್ತೆಯನ್ನು ವಶಕ್ಕೆ ಪಡೆದು, ಸಂಜೆ ಬಿಡುಗಡೆ ಮಾಡಿದರು.

ಪ್ರತಿಭಟನೆ ಮಾಡುತ್ತಿದ್ದ ಮಹಿಳೆಯರನ್ನು ಹೊರಹಾಕಲು ಪೊಲೀಸ್ ಸಿಬ್ಬಂದಿ ಹರಸಾಹಸಪಟ್ಟರು.

ವೇದಿಕೆಯ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಸಹನಾ ಶೇಖರ್, ಬೆಂಗಳೂರು ನಗರ ಮಹಿಳಾ ಘಟಕದ ಅಧ್ಯಕ್ಷೆ ಶ್ವೇತಾ ಮೋಹನ್ ಸೇರಿ ಹಲವರು ಭಾಗವಹಿಸಿದ್ದರು.

ಅಕ್ರಮ ಜಾಹೀರಾತು: ಪಿಐಎಲ್ ವಿಲೇವಾರಿ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಬೆಂಗಳೂರಿನಲ್ಲಿ ಅಕ್ರಮ ಜಾಹೀರಾತು, ಹೋರ್ಡಿಂಗ್ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಾಹೀರಾತುಗಳು ಬೈ-ಲಾ 2024ರ ಅಧಿಸೂಚನೆ ಜಾರಿಗೆ ತಂದಿರುವುದನ್ನು ಪರಿಗಣಿಸಿರುವ ಹೈಕೋರ್ಟ್, ಈ ಸಂಬಂಧ ದಾಖಲಾಗಿದ್ದ ಮೂರು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ವಿಲೇವಾರಿ ಮಾಡಿದೆ. ಈ ಕುರಿತಂತೆ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರು, ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಜಾಹೀರಾತುಗಳು ಬೈ-ಲಾ 2024ರ ಅಧಿಸೂಚನೆಗೆ ರಾಜ್ಯಪಾಲರು ಈಗಾಗಲೇ ಅಂಕಿತ ಹಾಕಿದ್ದಾರೆ. ಆಗಸ್ಟ್ 28ರಂದು ಅಧಿಸೂಚನೆ ಪ್ರಕಟಿಸಲಾಗಿದೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಅರ್ಜಿದಾರರ ಪರ ಹಿರಿಯ ವಕೀಲ ಜಿ.ಆರ್. ಮೋಹನ್ ಅವರು, ‘ಅಕ್ರಮ ಜಾಹೀರಾತು, ಹೋರ್ಡಿಂಗ್, ಫ್ಲೆಕ್ಸ್ ಅಳವಡಿಸುವವರ ವಿರುದ್ಧ ದಂಡನೀಯ ಕ್ರಮ ಕೈಗೊಳ್ಳಲು ಅವಕಾಶವಿರುವ ಬೈ-ಲಾದ 15ನೇ ನಿಯಮವನ್ನು ಜಾರಿಗೊಳಿಸಲು ಬಿಬಿಎಂಪಿ ಮುಖ್ಯ ಆಯುಕ್ತರು ಮತ್ತು ಬೆಂಗಳೂರು ಪೊಲೀಸ್ ಕಮಿಷನರ್‌ಗೆ ನಿರ್ದೇಶಿಸಿ ಅರ್ಜಿಗಳನ್ನು ವಿಲೇವಾರಿ ಮಾಡಬಹುದು’ ಎಂದರು. ಇದನ್ನು ಪರಿಗಣಿಸಿದ ನ್ಯಾಯಪೀಠ ಎಲ್ಲ ಅರ್ಜಿದಾರರ ಪರ ವಕೀಲರ ವಾದಗಳನ್ನು ದಾಖಲಿಸಿಕೊಂಡು ಅರ್ಜಿಗಳನ್ನು ವಿಲೇವಾರಿ ಮಾಡಿತು.

‘ಕರ್ನಾಟಕ ಸಾರ್ವಜನಿಕ ಸ್ಥಳಗಳ ವಿರೂಪ ನಿಷೇಧ ಕಾಯ್ದೆ–1982ರ ಅಡಿಯಲ್ಲಿ ಸೂಕ್ತ ನಿಯಮಗಳನ್ನು ರೂಪಿಸಿ ಅವುಗಳನ್ನು, ಬಿಬಿಎಂಪಿ ವ್ಯಾಪ್ತಿಯಲ್ಲಿ ಜಾರಿಗೊಳಿಸಲು ನಿರ್ದೇಶಿಸಬೇಕು’ ಎಂದು ಕೋರಿ ಬೆಂಗಳೂರಿನ ಮಾಯಿಗೇ ಗೌಡ; ಅಕ್ರಮ ಜಾಹೀರಾತು, ಹೋರ್ಡಿಂಗ್‌ಗಳ ಸಂಬಂಧ ಕೈಗೊಂಡಿರುವ ಕ್ರಮದ ಕುರಿತು ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿದ್ದ ಅರ್ಜಿ ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಅಳವಡಿಸಿರುವ ಅಕ್ರಮ ಜಾಹೀರಾತು, ಹೋರ್ಡಿಂಗ್, ಫ್ಲೆಕ್ಸ್‌ಗಳನ್ನು ತೆರವುಗೊಳಿಸಲು ನಿರ್ದೇಶಿಸಬೇಕು’ ಎಂದು ಕೋರಿ ರಾಜು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದ್ದರು.

ಪನೀರ್ ಸೇವನೆಯಿಂದ ದೇಹಕ್ಕೆ ಉತ್ತಮ ಪ್ರಮಾಣದಲ್ಲಿ ಕ್ಯಾಲೋರಿ ಸಿಗುವುದಲ್ಲದೆ, ತಕ್ಷಣಕ್ಕೆ ದೇಹಕ್ಕೆ ಬೇಕಿರುವ ಶಕ್ತಿಯನ್ನೂ ಒದಗಿಸುತ್ತದೆ



ಪಾರ್ಶ್ವವಾಯು ಪ್ರತಿ ಕ್ಷಣವೂ ಅಮೂಲ್ಯ!

ಪಾರ್ಶ್ವವಾಯುಪೀಡಿತ ರೋಗಿಯಲ್ಲಿ ಮಾತನಾಡಲು ತೊಂದರೆ ಅಥವಾ ಸಂಪೂರ್ಣ ಮಾತು ನಿಂತು ಹೋಗಬಹುದು. ಕೆಲವರಲ್ಲಿ ದೃಷ್ಟಿ ಮಸುಕಾಗಬಹುದು ಅಥವಾ ವಸ್ತುಗಳು ಎರಡೆರಡಾಗಿ ಕಾಣಿಸಿಕೊಳ್ಳಬಹುದು. ತೀವ್ರವಾದ ಪಾರ್ಶ್ವವಾಯು ಕೋಮಾಸ್ಥಿತಿಗೂ ತಳ್ಳಬಹುದು.

• ಡಾ. ಕುಶ್ವಂತ್ ಕೋಳಿಬೈಲು

ರಕ್ತನಾಳದೊಳಗೆ ರಕ್ತದ ಹೆಪ್ಪುಗಟ್ಟುವಿಕೆಯಿಂದ ಮಿದುಳಿಗೆ ರಕ್ತಸಂಚಾರ ಕಡಿತವಾಗಬಹುದು. ಕೆಲವೊಮ್ಮೆ ಮಿದುಳಿಗೆ ರಕ್ತ ಸಂಪರ್ಕ ಕಲ್ಪಿಸುವ ರಕ್ತನಾಳ ಒಡೆದು ಹೋಗಿ ರಕ್ತಸ್ರಾವವಾದಲ್ಲಿ ಮಿದುಳಿನ ನರಕೋಶಗಳಿಗೆ ರಕ್ತದ ಮೂಲಕ ಸಿಗುವ ಆಮ್ಲಜನಕದ ಕೊರತೆ ಉಂಟಾಗುತ್ತದೆ. ಮಿದುಳಿಗೆ ಉಂಟಾಗುವ ಈ ಸಮಸ್ಯೆಯನ್ನು ನಾವು 'ಪಾರ್ಶ್ವವಾಯು' (Stroke) ಎಂದು ಕರೆಯುತ್ತೇವೆ. ಇದು ಅತ್ಯಂತ ಗಂಭೀರ ಸಮಸ್ಯೆಯಾಗಿರುವುದರಿಂದ ತಕ್ಷಣ ಚಿಕಿತ್ಸೆ ಸಿಗದಿದ್ದಲ್ಲಿ ಜೀವಕ್ಕೆ ಮಾರಕವಾಗುವ ಅಪಾಯವಿರುತ್ತದೆ.

ಮಿದುಳಿನ ಯಾವ ಭಾಗಕ್ಕೆ ರಕ್ತಸಂಪರ್ಕದ ಕಡಿತವಾಗಿದೆಯೆಂಬ ಆಧಾರದ ಮೇಲೆ ಪಾರ್ಶ್ವವಾಯು ರೋಗದ ವಿಭಿನ್ನ ಲಕ್ಷಣಗಳು ರೋಗಿಯಲ್ಲಿ ಕಾಣಿಸಿಕೊಳ್ಳಬಹುದು. ಮಿದುಳಿನ ಪ್ರತಿಯೊಂದು ಭಾಗವು ದೇಹದ ವಿವಿಧ ಅಂಗಗಳ ಮೇಲೆ ಹಿಡಿತವನ್ನು ಹೊಂದಿರುತ್ತದೆ. ಮಾತು, ರುಚಿ, ಸ್ಪರ್ಶ, ಸ್ಮರಣೆ, ದೃಷ್ಟಿ ಮತ್ತು ಶ್ರವಣ ಸೇರಿದಂತೆ ಹಲವು ವಿಚಾರಗಳನ್ನು ಮಿದುಳಿನ ವಿವಿಧ ಭಾಗಗಳು ನಿಯಂತ್ರಿಸುತ್ತವೆ. ಸ್ಕ್ಯಾನಿಂಗ್ ಲಭ್ಯವಿಲ್ಲದ ಕಾಲಘಟ್ಟದಲ್ಲಿ ಹಳೆಯ ಕಾಲದ ನಿಪುಣ ವೈದ್ಯರು ರೋಗಿಯ ದೇಹವನ್ನು ಪರೀಕ್ಷೆ ಮಾಡಿ ಮಿದುಳಿನ ಇಂತಹ ನಿರ್ದಿಷ್ಟ ಭಾಗದಲ್ಲಿ ರಕ್ತಸಂಪರ್ಕ ಕಡಿತಗೊಂಡು ಪಾರ್ಶ್ವವಾಯು ಸಂಭವಿಸಿದೆಯೆಂದು ನಿಖರವಾಗಿ ಹೇಳುತ್ತಿದ್ದರು. ಪಾರ್ಶ್ವವಾಯು ಪೀಡಿತ ರೋಗಿಯಲ್ಲಿ ಮಾತನಾಡಲು ತೊಂದರೆ ಅಥವಾ ಸಂಪೂರ್ಣ ಮಾತು ನಿಂತು ಹೋಗಬಹುದು. ಕೆಲವರಲ್ಲಿ ದೃಷ್ಟಿ ಮಸುಕಾಗಬಹುದು ಅಥವಾ ವಸ್ತುಗಳು ಎರಡೆರಡಾಗಿ ಕಾಣಿಸಿಕೊಳ್ಳಬಹುದು. ತೀವ್ರವಾದ ಪಾರ್ಶ್ವವಾಯು ಕೋಮಾ ಸ್ಥಿತಿಗೂ ತಳ್ಳಬಹುದು. ಕೈ–ಕಾಲುಗಳ ಸ್ವಾಧೀನ ಕಳೆದುಕೊಳ್ಳುವುದು ಮತ್ತು ಮುಖದ ಸ್ನಾಯುಗಳು ಒಂದು ಭಾಗದಲ್ಲಿ ಸಡಿಲವಾಗುವ ಕಾರಣ ಮುಖ ಒಂದು ಕಡೆಗೆ ತಿರುಗಿಕೊಳ್ಳಬಹುದು. ವಾಂತಿ ಮತ್ತು ತಲೆನೋವು ಕೂಡ ಲಘುವಾಗಿ ಪಾರ್ಶ್ವವಾಯು ಬಂದಾಗ ಕಾಣಿಸಿಕೊಳ್ಳಬಹುದು.

ಮಿದುಳಿನ ರಕ್ತಸಂಪರ್ಕದ ಸಮಸ್ಯೆ ಸರಿಯಾಗುವ ತನಕ ಪಾರ್ಶ್ವವಾಯು ಇರುತ್ತದೆ. ರಕ್ತದ ಸಂಪರ್ಕ ಕಡಿತವಾಗಿರುವುದು ಸರಿಯಾಗದೆ ಆಮ್ಲಜನಕ ಕೊರತೆಯು ಹೆಚ್ಚು ಸಮಯ ಬಾಧಿಸಿದರೆ ಮಿದುಳಿನ ಕೋಶಗಳು ಸಾಯುತ್ತವೆ. ಒಂದು ಪ್ರದೇಶದಲ್ಲಿ ಸಾಕಷ್ಟು ಮಿದುಳಿನ ಕೋಶಗಳು ಸತ್ತರೆ, ಆಗ ದೇಹಕ್ಕೆ ಹಾನಿ ಶಾಶ್ವತವಾಗುತ್ತದೆ. ಇದು ಶಾಶ್ವತ ಅಂಗವೈಕಲ್ಯಕ್ಕೂ ಕಾರಣವಾಗಬಹುದು. ಮಿದುಳಿನೊಳಗೆ ರಕ್ತದ ಹರಿವನ್ನು ಪುನಃಸ್ಥಾಪಿಸುವುದರಿಂದ ಆ ಶಾಶ್ವತ ಹಾನಿಯನ್ನು ತಡೆಯಬಹುದು ಅಥವಾ ಅದರ ತೀವ್ರತೆಯನ್ನು ಕಡಿಮೆ ಮಾಡಬಹುದು.



ಅದಕ್ಕಾಗಿಯೇ ಪಾರ್ಶ್ವವಾಯು ಚಿಕಿತ್ಸೆಯಲ್ಲಿ ಸಮಯವು ನಿರ್ಣಾಯಕವಾಗಿದೆ. ಪಾರ್ಶ್ವವಾಯುವಿನ ಲಕ್ಷಣಗಳು ಕಾಣಿಸಿಕೊಂಡ ನಂತರದ ನಾಲ್ಕೂವರೆ ಗಂಟೆಗಳ ಅವಧಿಯನ್ನು 'Golden Hour' 'ಅತ್ಯಮೂಲ್ಯ ಅವಧಿ' ಎಂದು ಕರೆಯುತ್ತಾರೆ. ಆ ಅವಧಿಯಲ್ಲಿ ಸೂಕ್ತ ಚಿಕಿತ್ಸೆ ದೊರೆಯದಿದ್ದರೆ, ಮಿದುಳಿನ ನರಕೋಶಗಳು ಸಾಯಬಹುದು.

ಪಾರ್ಶ್ವವಾಯು ಸಂಭವಿಸುವ ಸಮಯದಲ್ಲಿ ಕೆಲವು ಮುನ್ನೆಚ್ಚರಿಕೆಯ ಲಕ್ಷಣಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ನಿಮ್ಮ ಪ್ರೀತಿಪಾತ್ರರಲ್ಲಿ ಪಾರ್ಶ್ವವಾಯುವಿನ ಎಚ್ಚರಿಕೆ ಚಿಹ್ನೆಗಳನ್ನು ಬೇಗ ಗುರುತಿಸಿದರೆ ತಕ್ಷಣ ವೈದ್ಯಕೀಯ ಚಿಕಿತ್ಸೆ ಪಡೆಯಬಹುದು. ಹಠಾತ್ ದೇಹದ ಸಮತೋಲನ ತಪ್ಪುವುದು, ದೃಷ್ಟಿ ಮಂಜಾಗುವುದು, ಮುಖ ಒಂದು ಕಡೆಗೆ ವಾಲುವುದು, ಮಾತು ತೊದಲುವುದು ಮತ್ತು ಕೈಕಾಲಿನ ಶಕ್ತಿ ಕುಂದಿದರೆ ಅವನ್ನು ಗಂಭೀರವಾಗಿ ಪರಿಗಣಿಸಿ, ಕೂಡಲೇ ವೈದ್ಯರನ್ನು ಸಂಪರ್ಕಿಸಬೇಕು.

ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಇರುವವರಲ್ಲಿ, ಧೂಮಪಾನದ ಅಭ್ಯಾಸವಿರುವವರಲ್ಲಿ ಮತ್ತು ಅನುವಂಶೀಯ ಕಾಯಿಲೆಗಳು ಇರುವವರಲ್ಲಿ ಪಾರ್ಶ್ವವಾಯು ಹೆಚ್ಚಾಗಿ ಕಂಡುಬರುತ್ತದೆ. ಭಾರತದ ದೊಡ್ಡ ನಗರಗಳಲ್ಲಿ ಮಾತ್ರ ನರರೋಗತಜ್ಞರು ಮತ್ತು ಮಿದುಳಿನ ಸಮಸ್ಯೆಗೆ ಶಸ್ತ್ರಚಿಕಿತ್ಸೆಯನ್ನು ಮಾಡಬಲ್ಲ ತಜ್ಞರು ಲಭ್ಯವಿರುತ್ತಾರೆ.

ಮಿದುಳಿನೊಳಗಿನ ಪರಿಸ್ಥಿತಿಯನ್ನು ಸಮರ್ಪಕವಾಗಿ ತಿಳಿಯಲು 'ಎಂ.ಆರ್.ಐ.' ಸ್ಕ್ಯಾನಿಂಗ್ ಕೂಡ ಗ್ರಾಮೀಣ ಭಾಗದಲ್ಲಿ ಲಭ್ಯವಿರುವುದಿಲ್ಲ. ಪಾರ್ಶ್ವವಾಯು ಕಾಯಿಲೆಗೆ ಸೂಕ್ತ ಸಮಯದಲ್ಲಿ ಸರಿಯಾದ ಚಿಕಿತ್ಸೆ ದೊರಕದಿದ್ದರೆ ಜೀವಹಾನಿ ಅಥವಾ ಅಂಗಾಂಗಗಳು ಶಾಶ್ವತವಾಗಿ ಊನವಾಗಬಹುದು. ತಡವಾಗಿ ಚಿಕಿತ್ಸೆ ದೊರಕಿದ ನಂತರ ದೇಹದ ಮಾಂಸಖಂಡಗಳಲ್ಲಿ ನಿಶ್ಶಕ್ತಿ ಕಂಡುಬರಬಹುದು. ಈ ಕಾರಣಗಳಿಂದಾಗಿ ಪಾರ್ಶ್ವವಾಯು ಪೀಡಿತ ಹೆಚ್ಚಿನ ರೋಗಿಗಳಿಗೆ ದೀರ್ಘಕಾಲದ ಫಿಸಿಯೋಥೆರಪಿಯ ಅಗತ್ಯವಿರುತ್ತದೆ.

ದೇಹದಲ್ಲಿ ಯಾವುದೇ ಅಸಹಜ ಸಮಸ್ಯೆಯ ಲಕ್ಷಣಗಳು ತೋರಿಕೊಂಡಾಗ ಅವನ್ನು ನಿರ್ಲಕ್ಷಿಸದೆ, ಕೂಡಲೇ ವೈದ್ಯರ ಸಲಹೆಯನ್ನು ಪಡೆಯಬೇಕು. ಹೀಗೆ ಮಾಡುವುದರಿಂದ ಮುಂದೆ ಆಗಬಹುದಾದ ತೊಂದರೆಗಳನ್ನು ತಪ್ಪಿಸಬಹುದು.

ಭಾರತದಲ್ಲಿ ಪ್ರತಿ ನಲವತ್ತು ಸೆಕೆಂಡುಗಳಿಗೆ ಒಬ್ಬ ವ್ಯಕ್ತಿಯು ಪಾರ್ಶ್ವವಾಯುವಿಗೆ ತುತ್ತಾಗುತ್ತಾನೆ. ದೇಶದಾದ್ಯಂತ ಪಾರ್ಶ್ವವಾಯುವಿಗೆ ತುತ್ತಾಗಿ ಸೂಕ್ತ ಸಮಯದಲ್ಲಿ ಚಿಕಿತ್ಸೆ ದೊರಕದ ಕಾರಣ ಹಾಸಿಗೆ ಹಿಡಿದಿರುವ ಅಥವಾ ಫಿಸಿಯೋಥೆರಪಿ ಪಡೆಯುತ್ತಿರುವವರ ಸಂಖ್ಯೆಯು ದೊಡ್ಡದಿದೆ.

ಪಾರ್ಶ್ವವಾಯುವಿಗೆ ಕೆಲವೇ ಗಂಟೆಗಳಲ್ಲಿ ಚಿಕಿತ್ಸೆ ನೀಡುವ ವ್ಯವಸ್ಥೆಗಳು ನಮ್ಮ ದೇಶದ ಗ್ರಾಮೀಣ ಭಾಗದಲ್ಲಿ ಇನ್ನೂ ಲಭ್ಯವಿಲ್ಲದಿರುವುದು ಆತಂಕದ ಸಂಗತಿಯಾಗಿದೆ. ❖

ಅತಿಯಾದ ಯೋಚನೆ ಒಳ್ಳೆಯದಲ್ಲ

• ರಘು ವಿ.

ನಾವೆಲ್ಲರೂ ಒಂದು ವಿಧದಲ್ಲಿ ಕರ್ಣರೇ! ರಣರಂಗದಲ್ಲಿ ಅವನ ಚಕ್ರ ಹೂತಂತೆ ನಮ್ಮ ಮನದ ಚಕ್ರವೂ ಆಗಾಗ ಸಿಕ್ಕಿಬೀಳುತ್ತದೆ. ಅತಿಯಾದ ಆಲೋಚನೆಯ ಕೆಸರೇ ಇದಕ್ಕೆ ಕಾರಣ. ಜೀವನದ ಪಯಣದಲ್ಲಿ 'ಹೀಗಾಯಿತಲ್ಲ' ಎಂಬ ಭಯ ಮತ್ತು 'ಏನಾಗಬಹುದು' ಎಂಬ ಆತಂಕ ನಮ್ಮನ್ನು ಮುಂದುವರೆಯದಂತೆ ನಿಲ್ಲಿಸುತ್ತದೆ. ಅದೇ ಅತಿ ಯೋಚನೆ ಅಥವಾ 'ಓವರ್ ಥಿಂಕಿಂಗ್'. ಸಮಸ್ಯೆಗೆ ಪರಿಹಾರ ಹುಡುಕುವ ಬದಲು, 'ಹಾಗಾಗಿದ್ದರೆ', 'ಇನ್ನೊಮ್ಮೆ ಹೀಗಾದರೆ' ಮತ್ತು 'ಹೀಗೆ ಮಾಡಬಹುದಾಗಿತ್ತು' ಎಂಬ ಅನಂತಚಕ್ರದಲ್ಲಿ ಸಿಕ್ಕಿ, ನಾವು ಗೊಂದಲದ ಆಳಕ್ಕೆ ಇಳಿಯುತ್ತೇವೆ. ಸೂಕ್ಷ್ಮವಾಗಿ ಯೋಚಿಸುವುದು ಒಳ್ಳೆಯ ಗುಣವಾದರೂ, ಅತಿಯಾದ ಯೋಚನೆ ನಮ್ಮ ಮಾನಸಿಕ ಶಕ್ತಿಯನ್ನು ಹೀರಿ, ಜೀವನದ ಸಂತೋಷಗಳಿಂದ ನಮ್ಮನ್ನು ವಂಚಿತರನ್ನಾಗಿಸುತ್ತದೆ. ಹೂತ ಮನದ ಚಕ್ರವನ್ನು ಎತ್ತುವ ಬಗೆ ಹೇಗೆ?



ಅತಿಯಾದ ಆಲೋಚನೆ ಚಕ್ರವು ನಮ್ಮ ಮಾನಸಿಕ ಶಕ್ತಿಯನ್ನು ಸಂಪೂರ್ಣವಾಗಿ ಸೋಸಿ ಬಿಡುತ್ತದೆ. ದೇಹವು ದಣಿದಿರದಿದ್ದರೂ, ಕೇವಲ ಯೋಚಿಸುತ್ತ ಕುಳಿತಾಗ ಸುಸ್ತಾಗುವುದು ಈ ಕಾರಣದಿಂದಲೇ. ಆಗ ವ್ಯಕ್ತಿಯ ಸೃಜನಶೀಲತೆ ಸೊರಗುತ್ತದೆ. ಸಮಸ್ಯೆಯ ಪರಿಹಾರಕ್ಕೆ ಬೇಕಾದ ಶಕ್ತಿ, ಉಪಯೋಗವಿಲ್ಲದ ಕಳವಳಗಳಲ್ಲಿ ವ್ಯಯವಾಗುತ್ತದೆ. ಇದು ದೀರ್ಘಕಾಲ ಮುಂದುವರಿದರೆ ಮಾನಸಿಕ ಆಯಾಸ ಮತ್ತು ಮನೋರೋಗಕ್ಕೂ ಕಾರಣವಾಗುತ್ತದೆ. ಇದರಿಂದಾಗಿ ಅನಗತ್ಯ ಒತ್ತಡ ಮೂಡುತ್ತದೆ.

ಅತಿ ಆಲೋಚನೆಯ ಪರಿಣಾಮವೆಂದರೆ 'ವಿಶ್ಲೇಷಣಾ ಪಕ್ಷಾಘಾತ' (Analysis Paralysis). ಚಿಕ್ಕದಾದ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಾಗದೆ, ಅವಕಾಶಗಳು ನಮ್ಮ ಕೈಬಿಟ್ಟು ಹೋಗುತ್ತವೆ. ಸಣ್ಣ ಸಮಸ್ಯೆಯನ್ನು ಪರ್ವತದಷ್ಟು ದೊಡ್ಡದಾಗಿ ಕಾಣಿಸುವ ಈ ಅಭ್ಯಾಸ, ಆತ್ಮವಿಶ್ವಾಸವನ್ನೂ ಕುಗ್ಗಿಸುತ್ತದೆ. ನಮ್ಮ ಸ್ವಂತ ಸಾಮರ್ಥ್ಯದ ಬಗ್ಗೆ ಸಂದೇಹ ಮೂಡಿಸುತ್ತದೆ. 'ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ' - ಮನಸ್ಸೇ ಮನುಷ್ಯರಿಗೆ ಬಂಧನ ಮತ್ತು ಮೋಕ್ಷಕ್ಕೆ ಕಾರಣ. ಯಾವ ಹೆಜ್ಜೆಯ ಬಳಿಕ ಯಾವ ಹೆಜ್ಜೆ ಮುಂದೆ ಬರುತ್ತದೆ ಎಂಬ ಅತಿ ಯೋಚನೆಯಿಂದ ಮುಂದಡಿಯಿಡಲಾಗದ ಸಹಸ್ರಪದಿಯಂತೆ ನಾವು ಚಿಂತೆಯ ಕೊಳ್ಳದಲ್ಲಿ ಬೀಳುತ್ತೇವೆ. ಅತಿ ಯೋಚನೆ ಮಾಡುವವರಿಗೆ ರಾತ್ರಿಗಳು ಅತ್ಯಂತ ಕಠಿಣವಾಗುತ್ತವೆ. ನಿದ್ರಾಹೀನತೆ ಉಂಟಾಗಿ ಶರೀರ ಮತ್ತು ಮನಸ್ಸುಗಳನ್ನು ದುರ್ಬಲಗೊಳಿಸುತ್ತದೆ. ಕಾರ್ಯಕ್ಕೆ ಬೇಕಾದ ಶಕ್ತಿ, ಯೋಚನೆಗೇ ವ್ಯಯವಾಗುತ್ತದೆ. ಇದರಿಂದ ನಮ್ಮೊಂದಿಗೆ ಇರುವವರ ಜೊತೆಗಿನ ಸಂಬಂಧಗಳ ಮೇಲೂ ಪರಿಣಾಮವಾಗುತ್ತದೆ.

ಅತಿ ಯೋಚನೆಯ ಅತ್ಯಂತ ಹಾನಿಕಾರಕ ಪರಿಣಾಮವೆಂದರೆ, ಅದು ನಮ್ಮ 'ವರ್ತಮಾನ'ವನ್ನು ಕದಿಯುತ್ತದೆ. ಇದಕ್ಕೆ ಉತ್ತಮ ಉದಾಹರಣೆ; ಪ್ರವಾಸಕ್ಕೆ ಹೋದ ನಾವು ಆ ಕ್ಷಣದ ಸುಂದರ ಅನುಭವವನ್ನು ಆಸ್ವಾದಿಸುವ ಬದಲು ಅದನ್ನು ನಮ್ಮ ಕ್ಯಾಮೆರಾಗಳಲ್ಲಿ ಸೆರೆ ಹಿಡಿದು ನಮ್ಮ ದಾಖಲೆಗೆ ಉಳಿಸಿಕೊಳ್ಳುವ, ಇತರರ ಜೊತೆ ಹಂಚಿಕೊಳ್ಳುವ ಕಾತರದಲ್ಲಿ ಇರುವುದು. ಆಗ ಆ ಕ್ಷಣದ ಅನುಭೂತಿಯಿಂದ ನಾವು ವಂಚಿತರಾಗುತ್ತೇವೆ. ಮಸಾಲೆದೋಸೆಯನ್ನು ತಿನ್ನಲು ಕುಳಿತಾಗ ಕೈಜಿಡ್ಡಾಗುವುದೆಂದು ಚಿಂತಿಸಬಾರದು! ಭವಿಷ್ಯದ ಚಿಂತೆ ಅಥವಾ ಭೂತಕಾಲದ ಪಶ್ಚಾತ್ತಾಪದಲ್ಲಿ ಸಿಲುಕಿ, ಇಂದಿನ ಸುಂದರ ಕ್ಷಣಗಳನ್ನು ಕಳೆದುಕೊಳ್ಳಬಾರದು. ಮಗುವಿನ ನಗೆ, ಪ್ರಕೃತಿಯ ಸೌಂದರ್ಯ, ಶಾಂತಿಯುತ ಊಟ – ಇಂಥವನ್ನು ಅನುಭವಿಸುವುದನ್ನು ಕಲಿಯಬೇಕು; ಇಲ್ಲದಿದ್ದರೆ ಬದುಕು ಭಾರವಾಗಿಬಿಡುತ್ತದೆ.

ಅತಿಯಾದ ಆಲೋಚನೆಯನ್ನು ಹೀಗೆ ನಿಯಂತ್ರಿಸಬಹುದು

1. ಮನಸ್ಸನ್ನು ಪ್ರಸ್ತುತಕ್ಕೆ ತರುವ ಸತತ ಅಭ್ಯಾಸ ಮಾಡಬೇಕು. ಸುತ್ತುವ ಮನಸ್ಸು ತನ್ನ ಹರಿವಿನಲ್ಲಿ ನಮ್ಮನ್ನು ಸೆಳೆದುಕೊಂಡು ಹೋಗದಂತೆ ಅದಕ್ಕೆ ಚೌಕಟ್ಟು ಕಟ್ಟಬೇಕು. ಆದರೆ ಹೇಳಿದಷ್ಟು ಸುಲಭವಲ್ಲ ಅದು. ಕ್ಷಣಕ್ಷಣವೂ ಹಾರುವ ಮನಸ್ಸನ್ನು ಹಿಡಿಯಲು ಬಲವಾದ ಸಂಕಲ್ಪವೇ ಬೇಕು.
2. ನಾವು ತಳೆಯ ಬೇಕಾದ ನಿರ್ಧಾರಗಳಿಗೆ ಅವಧಿಯನ್ನು ನಿಗದಿ ಮಾಡಿಕೊಳ್ಳಬೇಕು. ಅಂದರೆ ಯಾವುದಾದರೊಂದು ವಿಷಯದಲ್ಲಿ ನಿರ್ಧಾರ ಕೈಗೊಳ್ಳಬೇಕಾದರೆ ಅದನ್ನು ಇಂತಿಷ್ಟು ದಿನಗಳಲ್ಲಿ, ಗಂಟೆಗಳಲ್ಲಿ ಕೈಗೊಳ್ಳುತ್ತೇನೆ ಎಂದು ನಿರ್ಧರಿಸಿ ಅಂತೆಯೇ ನಡೆದುಕೊಳ್ಳಬೇಕು.
3. ಆಲೋಚನೆಗಳನ್ನು ಬರೆದಿಡುವುದು ಕೂಡ ಒಂದು ಉತ್ತಮ ಉಪಾಯ. ಅಟ್ಟದ ಮೇಲಿನ ಕಳ್ಳನನ್ನು ಹಿಡಿದಂತೆ ಇದು. ಯಾವಾಗ ನಾವು ಆಲೋಚನೆಗಳನ್ನು ಬರೆದಿಡಲು ಆರಂಭಿಸುತ್ತೇವೋ ಆಗ, ಅವು ಹೆಚ್ಚು ಸ್ಪಷ್ಟಗೊಳ್ಳುತ್ತ, ಅನವಶ್ಯಕ ಆಲೋಚನೆಗಳು ಕಂಬಿಕೀಳುತ್ತವೆ.
4. ದೈಹಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳುವುದು. ವ್ಯಾಯಾಮದಿಂದ ಅನೇಕ ಪ್ರಯೋಜನಗಳುಂಟು. ಮೈ ಬೆವರುವಂತೆ ಪ್ರತಿನಿತ್ಯ ವ್ಯಾಯಾಮ ಮಾಡಿದಾಗ ಮನಸ್ಸು ತನ್ನಿಂತಾನೆ ಹಗುರಾಗುತ್ತದೆ. ದೇಹ ಗಟ್ಟಿಗೊಂಡಾಗ ಮನಸ್ಸೂ ಗಟ್ಟಿಯಾಗುತ್ತದೆ.
5. ಪ್ರತಿಯೊಬ್ಬರಿಗೂ ವಿಶ್ವಾಸಾರ್ಹ ಸ್ನೇಹಿತರು, ಬಂಧುಗಳು ಇರುತ್ತಾರೆ. ಅವರೊಂದಿಗೆ ಮಾತನಾಡಿ ಅತಿ ಆಲೋಚನೆಯಿಂದ ಪಾರಾಗಬಹುದು.

ಬದುಕೆಂಬುದು ಅತಿ ಆಲೋಚನೆಯ ವೃತ್ತದಲ್ಲಿ ತಿರುತಿರುಗಿ ದಣಿಯುವ ಲೊಳಲೊಟ್ಟೆಯಲ್ಲ. ಅದು ಪ್ರತಿ ಕ್ಷಣದ ಆನಂದವನ್ನು ಆಸ್ವಾದಿಸುವ ಅಸ್ತಿತ್ವ. ಆದುದರಿಂದ ಅತಿ ಆಲೋಚನೆಯನ್ನು ಬದಿಗಿಟ್ಟು ಜೀವನವನ್ನು ಆನಂದಿಸೋಣ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಗಣಿತ

ಅಪವರ್ತನ ವಿಧಾನದಿಂದ ಒಂದು ವರ್ಗ ಸಮೀಕರಣವನ್ನು ಬಿಡಿಸುವುದು

ಅಪವರ್ತನ ವಿಧಾನದಿಂದ $2x^2 - 5x + 3=0$ ಸಮೀಕರಣದ ಮೂಲಗಳನ್ನು ಕಂಡುಹಿಡಿಯಿರಿ.

ಪರಿಹಾರ:– ಮೊದಲು ಮಧ್ಯಪದ $-5x$ ನ್ನು $-2x - 3x$ ಎಂಬುದಾಗಿ ವಿಭಜಿಸೋಣ. [ಏಕೆಂದರೆ $(-2x)\times(-3x) = 6x^2 = (2x^2)\times 3$]

$$\therefore 2x^2 - 5x + 3 = 2x^2 - 2x - 3x + 3$$
$$= 2x(x-1) - 3(x-1)$$
$$= (2x-3)(x-1)$$

ಈಗ, $2x^2 - 5x + 3 = 0$ ಯನ್ನು $(2x-3)(x-1) = 0$ ಎಂದು ಬರೆಯಬಹುದು. ಹೀಗೆ, $2x^2 - 5x + 3 = 0$ ಇದರ 'x' ನ ಬೆಲೆಗಳು ಮತ್ತು $(2x-3)(x-1) = 0$ ಇದರ 'x' ನ ಬೆಲೆಗಳು ಒಂದೇ ಆಗಿವೆ.

ಅಂದರೆ $2x - 3 = 0$ ಅಥವಾ $x - 1 = 0$

$x = 3/2$ ಅಥವಾ $x = 1$

$\therefore$ $x = 3/2$ ಮತ್ತು $x = 1$ ಇವು ದತ್ತ ಸಮೀಕರಣದ ಪರಿಹಾರಗಳಾಗಿವೆ.

ಅಥವಾ 1 ಮತ್ತು $3/2$ ಇವು $2x^2 - 5x + 3 = 0$ ಸಮೀಕರಣದ ಮೂಲಗಳಾಗಿವೆ.

2) $6x^2 - x - 2 = 0$ ಸಮೀಕರಣದ ಮೂಲಗಳನ್ನು ಕಂಡುಹಿಡಿಯಿರಿ.

ಪರಿಹಾರ $6x^2 - x - 2 = 6x^2 + 3x - 4x - 2$
$$= 3x(2x+1) - 2(2x+1)$$
$$= (3x-2)(2x+1)$$

$(3x-2)(2x+1) = 0$ ಈ ಸಮೀಕರಣದ 'x'ದ ಬೆಲೆಗಳು $6x^2 - x - 2 = 0$ ಇದರ ಮೂಲಗಳಾಗಿವೆ.

$\therefore$ $3x - 2 = 0$ ಅಥವಾ $2x + 1 = 0$

$x = 2/3$ ಅಥವಾ $x = -1/2$

ಆದ್ದರಿಂದ, $6x^2 - x - 2 = 0$ ಇದರ ಮೂಲಗಳು $2/3$ ಮತ್ತು $-1/2$

ಅಭ್ಯಾಸ 4.2

1. ಅಪವರ್ತನ ವಿಧಾನದಿಂದ ಕೆಳಗಿನ ವರ್ಗ ಸಮೀಕರಣಗಳ ಮೂಲಗಳನ್ನು ಕಂಡುಹಿಡಿಯಿರಿ.

(i) $x^2 - 3x - 10 = 0$ (ii) $2x^2 + x - 6 = 0$

(iii) $\sqrt{2}x^2 + 7x + 5\sqrt{2} = 0$

(iv) $2x^2 - x + 1/8 = 0$ (v) $100x^2 - 20x + 1 = 0$

ಪರಿಹಾರ:– (i) $x^2 - 3x - 10 = 0$
$$x^2 - 5x + 2x - 10 = 0$$
$$x(x-5) + 2(x-5) = 0$$
$$(x-5)(x+2) = 0$$
$x - 5 = 0$ ಅಥವಾ $x + 2$

$x = 5$ ಅಥವಾ $x = -2$

$x^2 - 3x - 10 = 0$ ವರ್ಗ ಸಮೀಕರಣದ ಮೂಲ 5 ಮತ್ತು -2

(ii) $2x^2 + x - 6 = 0$
$$2x^2 + x - 6 = 0$$
$$2x^2 + 4x - 3x - 6 = 0$$
$$2x(x+2) - 3(x+2) = 0$$
$$(x+2)(2x-3) = 0$$
$x + 2 = 0$ ಅಥವಾ $2x - 3 = 0$

$x = -2$ ಅಥವಾ $x = 3/2$

$2x^2 + x - 6 = 0$ ವರ್ಗ ಸಮೀಕರಣದ' ಮೂಲ -2 ಮತ್ತು $3/2$

(iii) $\sqrt{2}x^2 + 7x + 5\sqrt{2} = 0$
$$\sqrt{2}x^2 + 2x + 5x + 5\sqrt{2} = 0$$
$$\sqrt{2}x(x+\sqrt{2}) + 5(x+\sqrt{2}) = 0$$
$$(x+\sqrt{2})(\sqrt{2}x+5) = 0$$
$$(x+\sqrt{2})(\sqrt{2}x+5) = 0$$
$$x+\sqrt{2} = 0 \text{ or } \sqrt{2}x + 5 = 0$$
$$x = -\sqrt{2} \text{ or } x = \frac{-5}{\sqrt{2}}$$
$$x = -\sqrt{2}\ .\ \frac{-5}{\sqrt{2}}$$

$\sqrt{2}x^2 + 7x + 5\sqrt{2} = 0$ ವರ್ಗ ಸಮೀಕರಣದ ಮೂಲ $-\sqrt{2}$ ಮತ್ತು $\frac{-5}{\sqrt{2}}$

(iv) $2x^2 - x + 1/8 = 0$
$$2x^2 - x + \frac{1}{8} = 0$$
$$2x^2 - \frac{1}{2}x - \frac{1}{2}x + \frac{1}{8} = 0$$
$$x\left(2x - \frac{1}{2}\right) - \frac{1}{4}\left(2x - \frac{1}{2}\right) = 0$$
$$\left(2x - \frac{1}{2}\right)\left(x - \frac{1}{4}\right) = 0$$
$$2x - \frac{1}{2} = 0 \text{ or } x - \frac{1}{4} = 0$$
$$x = 1/4 \text{ or } x = \frac{1}{4}$$
$$x = \frac{1}{4}, \frac{1}{4}$$

$2x^2 - x + 1/8 = 0$ ವರ್ಗ ಸಮೀಕರಣದ ಮೂಲ $\frac{1}{4}$ ಮತ್ತು $\frac{1}{4}$

(v) $100x^2 - 20x + 1 = 0$
$$100x^2 - 10x - 10x + 1 = 0$$
$$10x(10x-1) - 1(10x-1) = 0$$
$10x - 1 = 0$ ಅಥವಾ $10x - 1 = 0$

$x = 1/10$ ಅಥವಾ $x = 1/10$

$x = 1/10,\ 1/10$

$100x^2 - 20x + 1 = 0$ ವರ್ಗ ಸಮೀಕರಣದ ಮೂಲ $1/10$ ಮತ್ತು $1/10$

3) ಎರಡು ಸಂಖ್ಯೆಗಳ ಮೊತ್ತ 27 ಮತ್ತು ಗುಣಲಬ್ಧ 182 ಆದರೆ ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

(ಮುಂದುವರಿಯುವುದು)

PHYSICS

Chapter – 2

ELECTROSTATIC POTENTIAL AND CAPACITANCE

23. Write a note on the Common Potential.

Ans:-

Total charge on both the capacitors after sharing

$$q' = C_1 V + C_2 V = (C_1 + C_2)V$$

Since no charge is lost or gained during sharing, electric charge is conserved.

That is, total charge before sharing = total charge after sharing

$$C_1 V_1 + C_2 V_2 = (C_1 + C_2)V$$
$$\text{(or)} \quad V = \frac{C_1V_1 + C_2V_2}{C_1 + C_2}$$

24. A capacitor of capacitance 1μF charged to a potential of 100V is connected in parallel to another capacitor of 2μF charged to a potential of 50V. Calculate the common potential.

Soln:- Given, $C_1 = 1\mu F = 1 \times 10^{-6}$ F, $V_1 = 100$ V

$C_2 = 2\mu F = 2 \times 10^{-6}$ F, $V_2 = 50$ V

$$\text{Using } V = \frac{C_1V_1 + C_2V_2}{C_1 + C_2},$$
$$\text{we get, } V = \frac{1\times10^{-6}\times100 + 2\times10^{-6}\times50}{1\times10^{-6} + 2\times10^{-6}}$$
$$= \frac{200\times10^{-6}}{3\times10^{-6}} = 66.67\text{ V}$$

25. A 600 pF capacitor is charged by a 200 V supply. It is then disconnected from the supply and is connected to another uncharged 600 pF capacitor. How much electrostatic energy is lost in the process?

Soln:- Given, $V_1 = 200$ V

$C_1 = C_2 = 600\text{ pF} = 600 \times 10^{-12} = 6 \times 10^{-10}$ F,

Energy stored in the capacitor before sharing,

$$U_i = \frac{1}{2}C_1V_1^2$$
$$= \frac{1}{2}\times6\times10^{-10}\times4\times10^4 = 12\times10^{-6}\text{ J}$$

When both are connected, common potential,

$$V = \frac{C_1V_1 + C_2V_2}{C_1 + C_2}$$
$$= \frac{6\times10^{-10}\times200 + 0}{12\times10^{-10}} = 100\text{V}$$

Energy stored after sharing charge between two capacitors,

$$U_f = \frac{1}{2}(C_1 + C_2)V^2$$
$$= \frac{1}{2}\times12\times10^{-10}\times10^4 = 6\times10^{-6}\text{ J}$$


Therefore, loss in electrostatic energy

$$= U_i - U_f = 6 \times 10^{-6}\text{ J.}$$

26. Write a note on dielectrics and dielectric material.

Ans:- The non-conducting materials in which equal and opposite induced charges are produced on their opposite faces on the application of electric field are called dielectrics.

A non-conducting material(insulators) can be called as a ***dielectric.*** ***Eg:-*** dry air and dry wood are dielectrics.



Insulating substances can be non-polar and polar depending upon the type of their atoms/molecules. Polar molecules immediately align themselves when electric field is applied but there is no additional dipole moment created because the molecules are already polar. An appreciable layers of positive charges and negative charges are created on the opposite faces of the substance. Such insulators when used as a medium in capacitors can increase the capacitance of the capacitor. Precisely such materials are called as **dielectrics. Eg:-** Air, H_2 gas, glass, mica, paraffin wax, transformer oil etc.


Purpose of the dielectric : is to increase the capacitance of a capacitor while keeping the two conducting plates of the capacitor insulated from each other.

Note: Water has polar molecules and transformer oil has non-polar molecules so transformer oil is a better dielectric

27. Write a note on the Electric Polarization

Ans:- ***Electric Polarization -***

Polarization of a dielectric is the process of inducing equal and opposite charges on the two opposite faces of the dielectric on the application of electric field.



Consider two parallel conducting plates (equally and oppositely charged) separated by a certain distance and having vacuum/air between the plates.

Let $\vec{E_o}$ be the intensity of electric field between the plates. If $+\sigma$ be the surface charge density of positive plate and $-\sigma$ be the surface charge density of -ve plate, then magnitude of applied electric field between the plates is - *(Contd)*

ತಂಗುದಾಣವಿಲ್ಲದೆ ಪರದಾಟ

ಬೂದಿಗೆರೆ ಕ್ರಾಸ್: ಆಂಧ್ರ, ತಮಿಳುನಾಡು, ಕರ್ನಾಟಕದ ನಗರಗಳಿಗೆ ಸಂಪರ್ಕ ಕೊಂಡಿ

• ಶಿವರಾಜ್ ಮೌರ್ಯ



ಬೂದಿಗೆರೆ ಕ್ರಾಸ್ ಬಳಿ ಬಸ್ ತಂಗುದಾಣವಿಲ್ಲದೆ ಪ್ರಯಾಣಿಕರು ಮರವನ್ನು ಆಶ್ರಯಿಸಿರುವುದು



ಪ್ರಶಾಂತ್



ವರುಣ್



ಸುಪ್ರಿಯ

ಕೆ.ಆರ್.ಪುರ: ಒಂದೆಡೆ ವೈಟ್‌ಫೀಲ್ಡ್‌ನ ಐಟಿಬಿಟಿಗೆ ಇನ್ನೊಂದೆಡೆ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ, ಅತಿ ಹೆಚ್ಚು ಪ್ರಯಾಣಿಕರಿರುವ ಬೂದಿಗೆರೆ ಕ್ರಾಸ್ ಬಳಿ ಬಸ್ ತಂಗುದಾಣವಿಲ್ಲದೆ ನಾಗರಿಕರು ಮರಗಳನ್ನು ಆಶ್ರಯಿಸುವಂತಾಗಿದೆ.

ಮಹದೇವಪುರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಬೂದಿಗೆರೆ ಕ್ರಾಸ್, ರಾಷ್ಟ್ರೀಯ ಹೆದ್ದಾರಿ 75ಕ್ಕೆ ಹೊಂದಿಕೊಂಡಿದೆ. ಇದು ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ ರಾಜ್ಯದ ಪ್ರಮುಖ ನಗರಗಳಿಗೆ ಸಾರಿಗೆ ವ್ಯವಸ್ಥೆಯ ಪ್ರಮುಖ ಕೊಂಡಿಯಾಗಿದೆ. ಹೆದ್ದಾರಿಗೆ ಹೊಂದಿಕೊಂಡಂತೆ ಬೂದಿಗೆರೆ ಕ್ರಾಸ್ ಬಸ್ ನಿಲ್ದಾಣವಿದ್ದು ಜನಸಂದಣಿ ಹೆಚ್ಚಿರುವ ಪ್ರದೇಶವೂ ಆಗಿದೆ.

ಬೂದಿಗೆರೆ ಕ್ರಾಸ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೆಚ್ಚು ಜನಸಾಂದ್ರತೆಯನ್ನು ಹೊಂದಿದ್ದು, ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಅವಲಂಬಿಸಿದ್ದಾರೆ. ಆದರೆ ಕೆಲ ವರ್ಷಗಳಿಂದ ಬಸ್ ತಂಗುದಾಣವಿಲ್ಲದೆ ತೊಂದರೆ ಅನುಭವಿಸುತ್ತಿದ್ದೇವೆ ಎಂದು ಖಾಸಗಿ ಉದ್ಯೋಗಿ ಸುಪ್ರಿಯ ಹೇಳಿದರು.

ಬೂದಿಗೆರೆ ಕ್ರಾಸ್ ನಿಂದ ಸ್ಥಳೀಯ ಗ್ರಾಮಗಳಾದ ಮಂಡೂರು, ಹಂಚರಹಳ್ಳಿ ಕಟ್ಟಿಗೆನಹಳ್ಳಿ, ಜ್ಯೋತಿಪುರ, ಬೊಮ್ಮನಹಳ್ಳಿ, ನಿಂಬೆಕಾಯಿಪುರ ಊರುಗಳಿಗೆ ಇಲ್ಲಿಂದಲೇ ತೆರಳಬೇಕಿದೆ.ಇಲ್ಲಿಗೆ ಬಂದು ಹೋಗುವ ಹೊರ ರಾಜ್ಯದ ಪ್ರಯಾಣಿಕರ ಸಂಖ್ಯೆಯೂ ಹೆಚ್ಚಾಗಿದೆ.

‘ಬೂದಿಗೆರೆ ಕ್ರಾಸ್ ಬಳಿ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಜನಸಂದಣಿ ಹೆಚ್ಚಾಗಿರುವ ಪ್ರದೇಶವಾಗಿದೆ. ಸಾರಿಗೆ ಇಲಾಖೆ ಅಧಿಕಾರಿಗಳಾಗಲಿ ಅಥವಾ ಜನಪ್ರತಿನಿಧಿಯಾಗಲಿ ಬಸ್ ತಂಗುದಾಣ ನಿರ್ಮಾಣಕ್ಕೆ ಮುಂದಾಗಿಲ್ಲ’ ಎಂದು ಸ್ಥಳೀಯ ಕಾಂಗ್ರೆಸ್ ಮುಖಂಡ ಬಿದರಹಳ್ಳಿ ವರುಣ್ ದೂರಿದರು.

‘ಮಳೆ, ಚಳಿ, ಗಾಳಿಗೆ ಮರಗಳನ್ನೆ ಆಶ್ರಯಿಸಿ ಪ್ರಯಾಣಿಕರು ನಿಲ್ಲಬೇಕಿದೆ. ಇದು ಜನರಿಗೆ ಹೆಚ್ಚು ತ್ರಾಸದಾಯಕವಾಗಿದೆ. ಈ ಭಾಗದಲ್ಲಿ ಅಂತರ ರಾಷ್ಟ್ರೀಯ ವಿಮಾನದ ಜೊತೆಗೆ ಐಟಿಬಿಟಿ ಹೊಂದಿರುವ ಪ್ರದೇಶ ಇದಾಗಿರುವುದರಿಂದ ತಂಗುದಾಣ ನಿರ್ಮಾಣ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ’ ಎಂದು ಬಿದರಹಳ್ಳಿ ಹೋಬಳಿಯ ಪಂಚ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಪ್ರಶಾಂತ್ ಹೇಳಿದರು.

ಚಿಟಿಕೆ ಸುದ್ದಿ

‘ಶಿವಾಜಿನಗರ ಮೆಟ್ರೊ: ಹೆಸರು ಬದಲಿಸಬೇಡಿ’

ಬೆಂಗಳೂರು: ‘ಶಿವಾಜಿನಗರದ ಮೆಟ್ರೊ ನಿಲ್ದಾಣದ ಹೆಸರನ್ನು ಸೇಂಟ್ ಮೇರಿ ಬೆಸಿಲಿಕಾ ಎಂಬುದಾಗಿ ಬದಲಾಯಿಸಬಾರದು’ ಎಂದು ಕರ್ನಾಟಕ ಕ್ಷತ್ರಿಯ ಮರಾಠ ಮಹಾ ಒಕ್ಕೂಟದ ಅಧ್ಯಕ್ಷ ವಿ.ಎಸ್. ಶಾಮಸುಂದರರಾವ್ ಗಾಯಕವಾಡ್, ವಿಧಾನ ಪರಿಷತ್ ಸದಸ್ಯ ಎಂ.ಜಿ. ಮುಳೆ ಆಗ್ರಹಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಿವಾಜಿನಗರದ ಮೆಟ್ರೊ ನಿಲ್ದಾಣಕ್ಕೆ ಸೇಂಟ್ ಬೆಸಿಲಿಕಾ ಎಂದು ನಾಮಕರಣ ಮಾಡುವ ಇಚ್ಛೆ ವ್ಯಕ್ತಪಡಿಸಿರುವುದು ಸರಿಯಲ್ಲ. ಇದು ಶಿವಾಜಿ ಮಹಾರಾಜರ ಅಭಿಮಾನಿಗಳಲ್ಲಿ ಬೇಸರ ಮೂಡಿಸಿದೆ. ಶಿವಾಜಿ ಮಹಾರಾಜರಿಗೂ ಬೆಂಗಳೂರಿಗೂ ಐತಿಹಾಸಿಕ ನಂಟಿದೆ. ಬೆಂಗಳೂರಿನ ಕೇಂದ್ರ ಭಾಗದಲ್ಲಿರುವ ಈ ಕ್ಷೇತ್ರವನ್ನು ಸಾರ್ವಜನಿಕರು ಶಿವಾಜಿನಗರ ಎಂದೇ ಗುರುತಿಸುತ್ತಾರೆ. ಆದ್ದರಿಂದ ಶಿವಾಜಿನಗರ ಮೆಟ್ರೊ ನಿಲ್ದಾಣವೆಂದು ನಾಮಕರಣ ಮಾಡಬೇಕು’ ಎಂದು ಒತ್ತಾಯಿಸಿದರು.

‘ಕುಂದು ಕೊರತೆ ನಿವಾರಿಸಲು ಸಮಿತಿ ರಚನೆ’

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆ ನಡೆಸುವ ಸಂದರ್ಭದಲ್ಲಿ ಬರುವ ಅಡೆತಡೆಗಳು ಹಾಗೂ ಕುಂದು ಕೊರತೆಗಳನ್ನು ನಿವಾರಿಸಲು ಸಮಿತಿಯನ್ನು ರಚಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಪ್ರಕಾಶ್ ರಾಜ್, ‘ರಾಜ್ಯ ಸರ್ಕಾರ ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆ ನಡೆಸುತ್ತಿರುವುದು ಸ್ವಾಗತಾರ್ಹ. ಸಮೀಕ್ಷೆಗೆ ಒಳಪಡುವವರ ಹಾಗೂ ಸಂಬಂಧಪಟ್ಟ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಒಕ್ಕೂಟದಿಂದ ಸಮಿತಿ ರಚಿಸಲಾಗಿದೆ. ಇದರಲ್ಲಿ ನಾನು ಸೇರಿದಂತೆ ಮಾಳವಿಕಾ, ಅಬಿದಾ ಬೇಗಂ, ಮಾಯಾ ಎಸ್.ಆರ್. ನಾಯಕ್, ಪೃಥ್ವಿ ಇದ್ದಾರೆ. ಈ ಸಮೀಕ್ಷೆ ನಡೆಸಲು ಸಮುದಾಯದ ವ್ಯಕ್ತಿಗಳನ್ನು ನೇಮಿಸಬೇಕು’ ಎಂದು ಆಗ್ರಹಿಸಿದರು.



ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ ನಟಿ ತಾರಾ ಅನೂರಾಧ ಅವರು ನಟ ಅಂಬರೀಷ್ ಅವರಿಗೆ ಮರಣೋತ್ತರವಾಗಿ ‘ಕರ್ನಾಟಕ ರತ್ನ’ ಪ್ರಶಸ್ತಿ ನೀಡುವಂತೆ ಮನವಿ ಸಲ್ಲಿಸಿದರು

ಮೆಟ್ರೊ ನಿಲ್ದಾಣಕ್ಕೆ ಯುಎಇ ಕೇಬಲ್

ಬೆಂಗಳೂರು: ಕೇಬಲ್ ತಯಾರಿಕೆಗೆ ಹೆಸರಾಗಿರುವ ಸಂಯುಕ್ತ ಅರಬ್ ಸಂಸ್ಥಾನದ ಸರ್ಕಾರಿ ಸ್ವಾಮ್ಯದ ಕಂಪನಿ ಡುಕ್ಯಾಬ್ ಗ್ರೂಪ್ ನಮ್ಮ ಮೆಟ್ರೊ ಸೇರಿ ರಾಜ್ಯದ ಹಲವು ಯೋಜನೆಗಳಲ್ಲಿ ಭಾಗಿಯಾಗಲು ಮಾತುಕತೆ ನಡೆಸಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಅಲ್ಲದೇ, ಬೆಂಗಳೂರು ಉಪನಗರ ರೈಲು ಯೋಜನೆ ಮತ್ತು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2 ಕ್ಕೆ ಕೇಬಲ್ ಒದಗಿಸಲು ಆಸಕ್ತಿ ತೋರಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಡುಕ್ಯಾಬ್ ಗ್ರೂಪ್ ರಾಜ್ಯದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಗೆ ಮುಂದೆ ಬಂದಿದೆ. ಈ ಸಂಬಂಧ ಕಂಪನಿಯ ಜತೆ ಸದ್ಯದಲ್ಲೇ ಮತ್ತೊಂದು ಸುತ್ತಿನ ಮಾತುಕತೆ ನಡೆಸಲಾಗುವುದು ಎಂದು ಅವರು, ಡುಕ್ಯಾಬ್ ಗ್ರೂಪ್ ನಿಯೋಗದ ಜತೆ ಮಾತುಕತೆಯ ಬಳಿಕ ತಿಳಿಸಿದರು.

ನಿಯೋಗದಲ್ಲಿ ಕಂಪನಿಯ ಆಡಳಿತ ಮಂಡಳಿ ಸದಸ್ಯ ಚಾರ್ಲ್ಸ್ ಎಡ್ವರ್ಡ್ ಮೆಲಾಗುಯ್, ಮೆಶಾಯ್ ಅಲ್ ನಕ್ಬಿ, ಅಧ್ಯಕ್ಷ ಮಹಮದ್ ಮೀರನ್ ಸಾಹೇಬ್, ಅತೀಕ್ ಅನ್ಸಾರಿ ಮತ್ತು ಭಾರತದ ವ್ಯವಹಾರಗಳ ಮುಖ್ಯಸ್ಥ ರಿಜು ಮ್ಯಾಥ್ಯೂ ಇದ್ದರು. ರಾಜ್ಯದ ನೂತನ ಕೈಗಾರಿಕಾ ನೀತಿಗಳಲ್ಲಿರುವ ಅಂಶಗಳು ಮತ್ತು ಉದ್ಯಮಗಳಿಗೆ ಸಿಗುವ ಸೌಲಭ್ಯಗಳನ್ನು ಸಚಿವರು ನಿಯೋಗಕ್ಕೆ ವಿವರಿಸಿದರು.

'ರಾಜ್ಯವು ಕಳೆದ ಸಾಲಿನಲ್ಲಿ ₹50 ಸಾವಿರ ಕೋಟಿ ವಿದೇಶಿ ನೇರ ಹೂಡಿಕೆ ಆಕರ್ಷಿಸಿ, ಗರಿಷ್ಠ ಸ್ಥಾನದಲ್ಲಿರುವ ವಿಚಾರ ಡುಕ್ಯಾಬ್ ಕಂಪನಿಗೂ ತಿಳಿದಿದೆ. ನಮ್ಮಲ್ಲಿನ ಮೂಲ ಸೌಕರ್ಯ ಮತ್ತು ಇಂಧನ ಯೋಜನೆಗಳ ಭಾಗವಾಗಲು ಒಲವು ಹೊಂದಿದೆ. ಕಂಪನಿಯು ಹೂಡಿಕೆ ಮುಂದಾದರೆ ಅಗತ್ಯ ಭೂಮಿ ಒದಗಿಸಲು ಯಾವ ತೊಂದರೆಯೂ ಇಲ್ಲ' ಎಂದು ಪಾಟೀಲ ತಿಳಿಸಿದರು. ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ ಇದ್ದರು.

‘ಬಿಆರ್‌ಎಲ್ ಕವನಗಳಲ್ಲಿ ಜೀವನಪ್ರೀತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕವಿ ಬಿ.ಆರ್.ಲಕ್ಷ್ಮಣ ರಾವ್ ಅವರ ಕವನಗಳಲ್ಲಿ ಲವಲವಿಕೆ, ತುಂಟತನವಷ್ಟೇ ಇಲ್ಲ. ಅದರ ಮಧ್ಯೆಯೇ ಬದುಕಿನ ಗಾಂಭೀರ್ಯ, ಜೀವನಪ್ರೀತಿ ಅಡಕವಾಗಿದೆ’ ಎಂದು ವಿಮರ್ಶಕ ಎಚ್.ಎಸ್.ಸತ್ಯನಾರಾಯಣ ಅಭಿಪ್ರಾಯಪಟ್ಟರು.

ಸಪ್ನಾ ಬುಕ್ ಹೌಸ್, ಸಂಗೀತಧಾಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಬಿ.ಆರ್.ಲಕ್ಷ್ಮಣರಾವ್ ಅವರ ‘ವಿಪುಲ ರೂಪಧಾರಿಣಿ’ ಕವನ ಸಂಕಲನ ಮತ್ತು ‘ಕೊಂಚ ಸಮಯ ಬೇಕು’ ದೃಶ್ಯಗೀತೆಗಳನ್ನು ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

‘ಅವರ ಕವನಗಳಲ್ಲಿ ಜೀವನಪ್ರೀತಿ ಉಕ್ಕಿಹರಿಯುತ್ತದೆ. ಲಕ್ಷ್ಮಣರಾಯರ ಕವನಗಳಲ್ಲಿನ ಪ್ರೇಮಿಗಳು ಯಾವುದೋ ಕಿನ್ನರ ಲೋಕದಿಂದ ಇಳಿದುಬಂದವರಲ್ಲ. ಬದಲಿಗೆ ನಮ್ಮ ನಡುವಿನ ಬದುಕಿನಲ್ಲಿಯೇ ಇರುವ, ನಮ್ಮಂತೆಯೇ ಬದುಕಿರುವ ಜೋಡಿಗಳು. ಕೊಂಚ ತುಂಟತನದ ಜತೆಗೆ ಗಾಢವಾದ ವಿಷಾದವನ್ನು ಒಳಗೊಂಡ ಒಂದು ವಿಶಾಲ ಆವರಣವನ್ನು ಅವರ ಕಾವ್ಯದಲ್ಲಿ ಕಾಣಬಹುದು’ ಎಂದರು. ಪತ್ರಕರ್ತ ಚ.ಹ.ರಘುನಾಥ್, ‘ಲಕ್ಷ್ಮಣ ರಾಯರ ಕವನಗಳಲ್ಲಿನ ತುಂಟತನವನ್ನಷ್ಟೇ ಸಂಭ್ರಮಿಸಲಾಗುತ್ತಿದೆ. ಆದರೆ, ಅವುಗಳಲ್ಲಿ ಅಡಕವಾಗಿರುವ ಜೀವನ ಪ್ರೀತಿ ಮತ್ತು ಗಾಂಭೀರ್ಯವನ್ನು, ಮಧ್ಯಮವರ್ಗದ ವಿವೇಕವನ್ನು ಕಡೆಗಣಿಸಲಾಗುತ್ತಿದೆ’ ಎಂದರು.


ನಗರದಲ್ಲಿ ಇಂದು

‘ಹಿಂದೂ ಜಾತಿಗಳ ನಡುವೆ ಕ್ರೈಸ್ತರನ್ನು ನುಗ್ಗಿಸುವ ಹುನ್ನಾರ’ ದುಂಡು ಮೇಜಿನ ಸಭೆ: ಆಯೋಜನೆ: ಸಾಮಾಜಿಕ ನ್ಯಾಯ ಜಾಗೃತಿ ವೇದಿಕೆ, ಸ್ಥಳ: ಹೋಟೆಲ್ ಕ್ಯಾಪಿಟಲ್, ರಾಜಭವನ ರಸ್ತೆ, ಬೆಳಿಗ್ಗೆ 10.30

‘ಧರ್ಮಸ್ಥಳ ಸುತ್ತಲಿನ ಅತ್ಯಾಚಾರ, ಹತ್ಯೆ ಪ್ರಕರಣಗಳಲ್ಲಿ ನೊಂದವರೊಂದಿಗೆ ನಾವು-ನೀವು’ ಸಾರ್ವಜನಿಕ ಸಂವಾದ ಮತ್ತು ಆಂದೋಲನಕ್ಕೆ ಚಾಲನೆ: ಭಾಗವಹಿಸುವವರು: ಆರ್. ಪ್ರತಿಭಾ, ಆರ್. ಸುನಂದಮ್ಮ, ಮಲ್ಲಿಗೆ ಸಿರಿಮನೆ, ಅಕ್ಕೈ ಪದ್ಮಶಾಲಿ, ಅಮ್ಮುಲು, ಮಂಗಳಾ, ಚಂಪಾವತಿ, ಕೆ.ಎಸ್. ವಿಮಲಾ, ದು. ಸರಸ್ವತಿ, ಎ.ಜ್ಯೋತಿ, ಮಧುಭೂಷಣ್, ಆಯೋಜನೆ: ಕೊಂದವರು ಯಾರು? ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11.30

ಪೌರಾಣಿಕ ಗೀತ ಗಾಯನ ಶಿಬಿರದ ಸಮಾರೋಪ ಸಮಾರಂಭ: ಅತಿಥಿಗಳು: ಕೆ.ವಿ. ನಾಗರಾಜಮೂರ್ತಿ, ಬಿ.ಸಿ. ನಾಗೇಂದ್ರ ಕುಮಾರ್, ಪದ ದೇವರಾಜ್, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಪದ, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಮಧ್ಯಾಹ್ನ 12.30

ಎಂಜಿನಿಯರ್ಸ್ ದಿನದ ಅಂಗವಾಗಿ ವಿಚಾರಸಂಕಿರಣ: ಭಾಗವಹಿಸುವವರು: ಜಿ.ಎಸ್. ಶ್ರೀನಿವಾಸ್ ರೆಡ್ಡಿ, ಅಶ್ವತ್ಥ್ ಎಂ.ಯು., ಗಾಳಿಸ್ವಾಮಿ, ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್, ಕುಮಾರಸ್ವಾಮಿ ಲೇಔಟ್, ಸಂಜೆ 4.30



ಚಿರಂಜೀವ್ ಸಿಂಘ್

ಸಂಸ್ಥಾಪಕರ ದಿನಾಚರಣೆ, ‘ಸಾವಿತ್ರಮ್ಮ-ಪ್ರೊ.ಎಂ.ವಿ. ಸೀತಾರಾಮಯ್ಯ ಸಾಂಸ್ಕೃತಿಕ ಸಂಘಟಕ’ ಪ್ರಶಸ್ತಿ ಪ್ರದಾನ: ಚಿರಂಜೀವ್ ಸಿಂಘ್, ಪ್ರಶಸ್ತಿ ಸ್ವೀಕರಿಸುವವರು: ಶ್ರೀನಿವಾಸ್ ಜಿ. ಕಪ್ಪಣ್ಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ವಿನೋದ್ ಕೆ.ಎಲ್. ಅವರ ‘ತುಪಾಕಿಯ ಪಿಸುಮಾತು’ ಪುಸ್ತಕ ಬಿಡುಗಡೆ: ಧರಣಿದೇವಿ ಮಾಲಗತ್ತಿ, ಅತಿಥಿ: ಎಸ್. ಮಹೇಂದರ್, ಅಧ್ಯಕ್ಷತೆ: ಗಂಗಾಧರ ಬಿ., ಪುಸ್ತಕದ ಕುರಿತು: ಪ್ರಕಾಶ್ ರಾಜ್ ಮೇಹು, ಆಯೋಜನೆ: ಕೋ ಪ್ರಕಾಶನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 6

ಸಾಹಿತ್ಯಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಜಿಬಿಎನ 13 ಎಂಜಿನಿಯರ್‌ಗಳಿಗೆ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಗೌರವ

‘ಸರ್ ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ’ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಂಜಿನಿಯರ್‌ಗಳು ಸಮರ್ಪಕವಾಗಿ ಕೆಲಸ ಮಾಡಿದರೆ ನಾಗರಿಕರಿಂದ ತಾನಾಗಿಯೇ ಮೆಚ್ಚುಗೆ ಸಿಗಲಿದೆ’ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಭಿಪ್ರಾಯಪಟ್ಟರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸರ್ ಎಂ. ವಿಶ್ವೇಶ್ವರಯ್ಯ ಜಯಂತಿ ಪ್ರಯುಕ್ತ ಸೋಮವಾರ ಆಯೋಜಿಸಿದ್ದ ಎಂಜಿನಿಯರ್ ದಿನಾಚರಣೆ ಹಾಗೂ ಸರ್ ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಮಾತುಗಳು ಬರುತ್ತವೆ, ಅದರ ಕಡೆ ಗಮನಹರಿಸಬಾರದು. ಒತ್ತಡದಲ್ಲಿಯೂ ಎಂಜಿನಿಯರ್‌ಗಳು ಉತ್ತಮವಾಗಿ ಕೆಲಸ ಮಾಡುತ್ತಾರೆ. ನಾವು ಚೆನ್ನಾಗಿ ಕೆಲಸ ಮಾಡಿದರೆ ನಮ್ಮ ಕೆಲಸವೇ ಮಾತನಾಡುತ್ತದೆ. ಉತ್ತಮ ನಗರ ನಿರ್ಮಾಣಕ್ಕೆ ಎಂಜಿನಿಯರ್‌ಗಳ ಶ್ರಮ ಹೆಚ್ಚಿದ್ದು, ಅವರನ್ನು ಗುರುತಿಸಲಾಗುತ್ತಿದೆ’ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಎನ್. ಮಂಜುನಾಥ್ ಪ್ರಸಾದ್ ಮಾತನಾಡಿ, ‘ಎಂಜಿನಿಯರ್‌ಗಳ ಸತತ ಪರಿಶ್ರಮ, ಬುದ್ಧಿವಂತಿಕೆಯಿಂದ ಬೆಂಗಳೂರು ನಗರ ಉತ್ತಮವಾಗಿ ಬೆಳೆದುನಿಂತಿದೆ. ವಿಶ್ವೇಶ್ವರಯ್ಯ ಅವರ ಆದರ್ಶಗಳನ್ನು ಎಂಜಿನಿಯರ್‌ಗಳು ಅಳವಡಿಸಿಕೊಳ್ಳಬೇಕು’ ಎಂದು ಹೇಳಿದರು.

ನಿವೃತ್ತ ಮುಖ್ಯ ಎಂಜಿನಿಯರ್ ಕೆ.ಟಿ.ನಾಗರಾಜ್ ಮಾತನಾಡಿ, ‘ವಿಶ್ವೇಶ್ವರಯ್ಯ ಅವರ ತತ್ವಗಳನ್ನು ನಾವು ಪಾಲನೆ ಮಾಡಬೇಕು. ಪ್ರತಿಭಾನ್ವಿತ ಎಂಜಿನಿಯರ್‌ಗಳು ದೇಶವನ್ನು ಕಟ್ಟಬಲ್ಲರು ಎಂಬುದಕ್ಕೆ ವಿಶ್ವೇಶ್ವರಯ್ಯ ಅವರು ಮಾದರಿ’ ಎಂದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ-ಪಾಲಿಕೆಗಳ ಅಧಿಕಾರಿ-ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಅಮೃತ್ ರಾಜ್, ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ರಮೇಶ್ ಸಂಗಾ, ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ ಉಪಸ್ಥಿತರಿದ್ದರು.



ಗ್ರೇಟರ್ ಬೆಂಗಳೂರು ಪ್ರಾಧಿಕಾರ ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸರ್ ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು

ಪ್ರಶಸ್ತಿ ಪುರಸ್ಕೃತರು: ಮುಖ್ಯ ಎಂಜಿನಿಯರ್‌ಗಳಾದ ಲೋಕೇಶ್, ವಿಜಯ್ ಕುಮಾರ್ ಹರಿದಾಸ್, ಎಸ್.ಪಿ. ರಂಗನಾಥ್, ನಗರ ಯೋಜನೆ ಹೆಚ್ಚುವರಿ ನಿರ್ದೇಶಕ ಬಿ.ಎನ್. ಗಿರೀಶ್, ಕಾರ್ಯಪಾಲಕ ಎಂಜಿನಿಯರ್‌ಗಳಾದ ಸುಧಾಕರ್, ಎಂ.ಪಿ. ಬಾಲಾಜಿ, ಜೆ. ನಿತ್ಯಾ, ರವಿಕುಮಾರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳಾದ ಎಚ್.ಕೆ. ತಿಪ್ಪೇಶ್, ಎಂ. ಫರ್ಜಾನಾ, ಎಂ.ಎಸ್. ರೇಖಾ, ಕೆ. ಮಂಜೇಗೌಡ, ಸಹಾಯಕ ಎಂಜಿನಿಯರ್ ರಾಕೇಶ್ ಯಾದವ್.

ಡ್ರಗ್ಸ್ ಸೇವನೆ: 8 ಗ್ರಾಹಕರ ಸೆರೆ

ಪೊಲೀಸರ ದಾಳಿ ವೇಳೆ ಪಬ್‌ನಲ್ಲಿದ್ದ 180 ಮಂದಿ– ಮಾದಕ ವಸ್ತುಗಳ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಮನೆ ಮೈದಾನ ಬಳಿಯ ಪೆಬಲ್ ಬಾರ್ ಮೇಲೆ ದಾಳಿ ನಡೆಸಿದ ಸದಾಶಿವನಗರ ಠಾಣೆಯ ಪೊಲೀಸರು, ಡ್ರಗ್ಸ್ ಸೇವಿಸುತ್ತಿದ್ದ ಎಂಟು ಮಂದಿಯನ್ನು ಬಂಧಿಸಿದ್ದಾರೆ.

ಶನಿವಾರ ತಡರಾತ್ರಿ ಪಬ್ ಬಾರ್ ಮೇಲೆ ದಾಳಿ ನಡೆಸಿದಾಗ 180ಕ್ಕೂ ಹೆಚ್ಚು ಮಂದಿ ಸ್ಥಳದಲ್ಲಿದ್ದರು. ಭಾನುವಾರ ಬೆಳಗಿನ ಜಾವದವರೆಗೂ ಕಾರ್ಯಾಚರಣೆ ನಡೆಸಲಾಯಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಡ್ರಗ್ಸ್ ಸೇವಿಸಿದ್ದ ಆರೋಪದ ಮೇರೆಗೆ 16 ಮಂದಿಯನ್ನು ವಶಕ್ಕೆ ಪಡೆದು ತಪಾಸಣೆಗೆ ಒಳಪಡಿಸಲಾಯಿತು. ಅದರಲ್ಲಿ ಎಂಟು ಮಂದಿ ಡ್ರಗ್ಸ್ ತೆಗೆದುಕೊಂಡಿರುವುದು ದೃಢಪಟ್ಟಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಆರೋಪಿಗಳು ಎಲ್ಲರೂ 25ರಿಂದ 35 ವರ್ಷದೊಳಗಿನವರು ಎಂದು ಪೊಲೀಸರು ಹೇಳಿದರು.

ಇಬ್ಬರ ಬಂಧನ: ಎಂಡಿಎಂಎ ಹಾಗೂ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ರಾಮಮೂರ್ತಿನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕಿನ ಕರೀಮ್ ಹಾಗೂ ಅದೇ ತಾಲ್ಲೂಕಿನ ಕೊಡಿಪಾಡಿ ಗ್ರಾಮದ ಮೊಹಮ್ಮದ್ ಅಪ್ನಾನ್ ಬಂಧಿತರು.

ಬಂಧಿತರಿಂದ ₹80 ಸಾವಿರ ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ಡ್ರಗ್ಸ್ ಸೇವನೆ– 16 ಮಂದಿ ವಶಕ್ಕೆ
- ಆರೋಪಿಗಳು 25ರಿಂದ 35 ವರ್ಷದ ಒಳಗಿನವರು
- ಇಬ್ಬರು ಆರೋಪಿಗಳ ಬಂಧನ

ಅಪರಾಧ ಸುದ್ದಿ


ಆರೋಪಿಗಳಿಂದ ವಶಕ್ಕೆ ಪಡೆದ ಡ್ರಗ್ಸ್ ಅನ್ನು ರಾಮಮೂರ್ತಿನಗರ ಠಾಣೆಯ ಪೊಲೀಸರು ಪರಿಶೀಲಿಸಿದರು

ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಚಿನ್ನಾಭರಣ ದೋಚಿದ ಕಳ್ಳರು

ಬೆಂಗಳೂರು: ಹೊಸಕೆರೆಹಳ್ಳಿ ಬಳಿಯ ಈಶ್ವರಿನಗರದಲ್ಲಿ ಇಬ್ಬರು ಮಹಿಳೆಯರನ್ನು ಮಾರಕಾಸ್ತ್ರಗಳಿಂದ ಬೆದರಿಸಿ 54 ಗ್ರಾಂ ಚಿನ್ನಾಭರಣವನ್ನು ದೋಚಿ ದುಷ್ಕರ್ಮಿಗಳು ಪರಾರಿ ಆಗಿದ್ದಾರೆ.

ವರಲಕ್ಷ್ಮಿ ಹಾಗೂ ಅವರ ಸ್ನೇಹಿತೆ ಬಿ.ಎಂ.ಉಷಾ ಅವರು ಗಿರಿನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸೆ.13ರಂದು ಈ ಘಟನೆ ನಡೆದಿದೆ.

ಚಿನ್ನದ ಸರ ಕಸಿದುಕೊಳ್ಳುವ ಸಂದರ್ಭದಲ್ಲಿ ಪ್ರತಿರೋಧ ತೋರಿದ ವರಲಕ್ಷ್ಮಿ ಎಂಬುವವರ ಕೈಗೆ ಆರೋಪಿಗಳು ಲಾಂಗ್‌ನಿಂದ ಹೊಡೆದು ಗಾಯಗೊಳಿಸಿದ್ದಾರೆ. ವರಲಕ್ಷ್ಮಿ ಅವರ ಬಲಗೈನ ಬೆರಳು ತುಂಡಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಋಷಿಕೇಶ ನಗರದ ನಿವಾಸಿಗಳಾದ ಉಷಾ ಮತ್ತು ವರಲಕ್ಷ್ಮಿ ಅವರು ಈಶ್ವರಿನಗರದಲ್ಲಿ ಗಣೇಶಮೂರ್ತಿ ಪ್ರತಿಷ್ಠಾಪಿಸಿದ್ದ ಸ್ಥಳದಲ್ಲಿ ನಡೆಯುತ್ತಿದ್ದ ರಸಮಂಜರಿ ಕಾರ್ಯಕ್ರಮ ವೀಕ್ಷಿಸಲು ತೆರಳಿದ್ದರು. ಆಗ ಇಬ್ಬರು ದುಷ್ಕರ್ಮಿಗಳು ಅವರನ್ನು ಬೈಕ್‌ನಲ್ಲಿ ಹಿಂಬಾಲಿಸಿಕೊಂಡು ಹೋಗಿ ಅಡ್ಡಗಟ್ಟಿ, ಲಾಂಗ್‌ನಿಂದ ಬೆದರಿಸಿ ಉಷಾ ಅವರ 9 ಗ್ರಾಂ ಚಿನ್ನದ ಸರ ಕಿತ್ತುಕೊಂಡಿದ್ದಾರೆ. ನಂತರ, ವರಲಕ್ಷ್ಮಿ ಅವರ ಸರ ಕಿತ್ತುಕೊಳ್ಳಲು ಯತ್ನಿಸಿದ್ದರು. ಇದಕ್ಕೆ ವರಲಕ್ಷ್ಮಿ ಅವರು ಪ್ರತಿರೋಧ ತೋರಿದಾಗ ದುಷ್ಕರ್ಮಿಗಳು ಅವರ ಬಲಗೈಗೆ ಮಾರಕಾಸ್ತ್ರದಿಂದ ಹೊಡೆದು 45 ಗ್ರಾಂ ಚಿನ್ನದ ಸರ ದೋಚಿ ಪರಾರಿ ಆಗಿದ್ದಾರೆ ಎಂದು ಪೊಲೀಸರು ಹೇಳಿದರು.

ಅಮೃತಹಳ್ಳಿ ಠಾಣೆ ಪೊಲೀಸರಿಂದ ಕಾರ್ಯಾಚರಣೆ

ಯುವತಿಗೆ ಲೈಂಗಿಕ ಕಿರುಕುಳ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಘಾತದಲ್ಲಿ ಗಾಯಗೊಂಡಿದ್ದ ನಾಯಿಯನ್ನು ರಕ್ಷಿಸುತ್ತಿದ್ದ ವೇಳೆ ಯುವತಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪಿಯನ್ನು ಅಮೃತಹಳ್ಳಿ ಠಾಣೆ ಪೊಲೀಸರು ಭಾನುವಾರ ರಾತ್ರಿ ಬಂಧಿಸಿದ್ದಾರೆ.


ಮಂಜುನಾಥ್

ಮಂಜುನಾಥ್ ಬಂಧಿತ ಆರೋಪಿ.

ಸೆ.7ರಂದು ರಾತ್ರಿ 11.50ರ ಸುಮಾರಿಗೆ ಜಕ್ಕೂರು ರಸ್ತೆಯಲ್ಲಿ ಈ ಘಟನೆ ನಡೆದಿತ್ತು. ಯುವತಿ ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ಸ್ನೇಹಿತನೊಂದಿಗೆ ಕಾರಿನಲ್ಲಿ ಯುವತಿ ತೆರಳುತ್ತಿದ್ದರು. ಜಕ್ಕೂರು ಮುಖ್ಯರಸ್ತೆಯಲ್ಲಿ ಅಪಘಾತಕ್ಕೊಳಗಾಗಿ ನಾಯಿಯೊಂದು ನರಳುತ್ತಿತ್ತು. ನಾಯಿಯನ್ನು ಕಂಡು ಕಾರು ನಿಲುಗಡೆ ಮಾಡುವಂತೆ ಸ್ನೇಹಿತನಿಗೆ ಯುವತಿ ಹೇಳಿದ್ದರು. ರಸ್ತೆಯ ಬದಿಗೆ ಕಾರು ನಿಲುಗಡೆ ಮಾಡಿದ ಬಳಿಕ ನಾಯಿ ರಕ್ಷಿಸಲು ಮುಂದಾಗಿದ್ದರು. ನಾಯಿಯನ್ನು ಎತ್ತಿಕೊಂಡು ರಸ್ತೆ ದಾಟುತ್ತಿದ್ದ ಸಂದರ್ಭದಲ್ಲಿ ಬೈಕ್‌ನಲ್ಲಿ ಬಂದಿದ್ದ ಆರೋಪಿ ಯುವತಿಯನ್ನು ಸ್ಪರ್ಶಿಸಿ, ಅಸಭ್ಯವಾಗಿ ವರ್ತಿಸಿದ್ದ. ಯುವತಿ ಕಿರುಚಿಕೊಂಡಾಗ ಬೈಕ್‌ನಲ್ಲಿ ಆರೋಪಿ ಮುಂದೆ ಸಾಗಿದ್ದ. ನಂತರ, ಸಮೀಪದ ಪೆಟ್ರೋಲ್ ಬಂಕ್ ಬಳಿ ಯುವತಿ ನಿಂತಿದ್ದರು. ಅಲ್ಲಿಗೂ ಬಂದಿದ್ದ ಆರೋಪಿ, ಎರಡನೇ ಬಾರಿ ಅದೇ ರೀತಿಯಲ್ಲಿ ಕೃತ್ಯ ಎಸಗಿದ್ದ’ ಎಂದು ಪೊಲೀಸರು ಹೇಳಿದರು.

ಆರೋಪಿ ಹಿಡಿಯಲು ಪ್ರಯತ್ನ: ‘ಯುವತಿ ಹಾಗೂ ಆಕೆಯ ಸ್ನೇಹಿತ ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿದ್ದರು. ಆರೋಪಿಯನ್ನು ಹಿಡಿಯುವ ಭರದಲ್ಲಿ ಇಬ್ಬರೂ ಆಯತಪ್ಪಿ ರಸ್ತೆಗೆ ಬಿದ್ದಿದ್ದರು. ಆಗ ಆರೋಪಿ ತಪ್ಪಿಸಿಕೊಂಡು ಪರಾರಿಯಾಗಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಮೃತಹಳ್ಳಿ ಪೊಲೀಸ್ ಠಾಣೆಗೆ ಯುವತಿ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಕಾಲೇಜು ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ

ಬೆಂಗಳೂರು: ಕಾಲೇಜು ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದಡಿ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ರ‍್ಯಾಪಿಡೊ ಆಟೊ ಚಾಲಕನ ವಿರುದ್ಧ ಎಫ್‌ಐಆರ್ ದಾಖಲಾಗಿದೆ. 19 ವರ್ಷದ ವಿದ್ಯಾರ್ಥಿನಿ ದೂರು ನೀಡಿದ್ದಾರೆ.

ಲೈಂಗಿಕ ಕಿರುಕುಳ ನೀಡಿದ್ದ ಚಾಲಕ ಹನುಮಂತಪ್ಪ ಎಚ್.ತಳವಾರ್ ಎಂಬುದು ಗೊತ್ತಾಗಿದೆ. ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ ಮುಂದಿನ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪೊಲೀಸರು ಹೇಳಿದರು.

ಸಂತ್ರಸ್ತೆ ಸೆ.8ರಂದು ಸಂಜೆ ಕುಮಾರಸ್ವಾಮಿ ಲೇಔಟ್‌ನ ಕಾಲೇಜಿನಿಂದ ಮನೆಗೆ ಹೋಗಲು ಆ್ಯಪ್‌ನಲ್ಲಿ ರ‍್ಯಾಪಿಡೊ ಆಟೊ ಬುಕ್ ಮಾಡಿದ್ದರು. ಬಳಿಕ, ವಿದ್ಯಾರ್ಥಿನಿಯನ್ನು ಜೆ.ಪಿ.ನಗರದ ಏಳನೇ ಹಂತದ ನಟರಾಜ ಲೇಔಟ್‌ನ ಮನೆ ಬಳಿ ಕರೆದುಕೊಂಡು ಬಂದಿದ್ದ ಆಟೊ ಚಾಲಕ, ವಿದ್ಯಾರ್ಥಿನಿಯನ್ನು ಹೊಗಳಿದ್ದ. ‘ನೀವು ನಟಿಯಂತೆ ಕಾಣಿಸುತ್ತೀರಿ’ ಎಂದು ಹೇಳಿದ್ದ. ‘ನೀವು ಏಕೆ ಮೌನವಾಗಿದ್ದೀರಿ. ನಿಮಗೆ ಜ್ವರವಿದೆಯಾ’ ಎಂದು ಪ್ರಶ್ನಿಸಿದ್ದ.

‘ಆಟೊ ಚಾಲಕನ ವರ್ತನೆಯನ್ನು ಪ್ರಶ್ನಿಸಿದೆ. ಅದಾದ ಮೇಲೆ ಆತ, ಮೈ-ಕೈ ಮುಟ್ಟಿ ಲೈಂಗಿಕ ಕಿರುಕುಳ ನೀಡಿದ್ದಾನೆ. ಗಾಬರಿಯಿಂದ ಚಾಲಕನನ್ನು ದೂರ ತಳ್ಳಿ ಮನೆಗೆ ಹೋಗಿದ್ದೆ’ ಎಂದು ವಿದ್ಯಾರ್ಥಿನಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ವೃದ್ಧೆಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನ

ಬೆಂಗಳೂರು: ಹಣಕಾಸು ವಿಚಾರವಾಗಿ ವೃದ್ಧೆಗೆ ಕಾರು ಚಾಲಕನೊಬ್ಬ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿರುವ ಘಟನೆ ಬನಶಂಕರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಗುರುರಾಜ್ ಲೇಔಟ್‌ನ ನಿವಾಸಿ ಕನಕಪುಷ್ಪ (62) ಅವರು ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಕಾರು ಚಾಲಕ ಮಡಿವಾಳಪ್ಪ ಭಾನುವಾರ ರಾತ್ರಿ ಕನಕಪುಷ್ಪ ಅವರ ಮನೆಯ ಬಳಿಗೆ ತೆರಳಿದ್ದ. ಆಗ ಹಣಕಾಸು ವಿಚಾರಕ್ಕೆ ಇಬ್ಬರ ನಡುವೆ ಗಲಾಟೆ ನಡೆದಿತ್ತು. ಜಗಳವು ವಿಕೋಪಕ್ಕೆ ಹೋದಾಗ ಆರೋಪಿ ಮಡಿವಾಳಪ್ಪ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ್ದಾನೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ವೃದ್ಧೆಯನ್ನು ಕಂಡ ಅಕ್ಕಪಕ್ಕದ ಮನೆಯ ನಿವಾಸಿಗಳು, ಆಸ್ಪತ್ರೆಗೆ ದಾಖಲಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಕನಕಪುಷ್ಪ ಅವರ ಕುಟುಂಬಸ್ಥರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಾದಚಾರಿಗಳ ಮೇಲೆ ಟ್ರಕ್ ಹರಿದು ಇಬ್ಬರು ಸಾವು

ಇಂದೋರ್ (ಪಿಟಿಐ): ಇಲ್ಲಿನ ಏರೋಡ್ರೋಮ್ ರಸ್ತೆಯಲ್ಲಿ ಸೋಮವಾರ ರಾತ್ರಿ ವೇಳೆ ನಿಯಂತ್ರಣ ತಪ್ಪಿದ ಟ್ರಕ್‌ವೊಂದು ಹಲವು ಪಾದಚಾರಿಗಳ ಮೇಲೆ ಹರಿದು ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, 11 ಮಂದಿ ಗಾಯಗೊಂಡಿದ್ದಾರೆ.

‘ಕೆಲವು ವಾಹನಗಳಿಗೆ ಡಿಕ್ಕಿ ಹೊಡೆದ ಕಾರಣ ಟ್ರಕ್‌ಗೆ ಬೆಂಕಿ ಹತ್ತಿಕೊಂಡಿದೆ. ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಹೆಚ್ಚುವರಿ ಆಯುಕ್ತ ಅಮಿತ್ ಸಿಂಗ್ ತಿಳಿಸಿದ್ದಾರೆ.

‘ಸಣ್ಣಪುಟ್ಟ ಗಾಯಗಳಾದ ಮೂರರಿಂದ ನಾಲ್ವರಿಗೆ ಚಿಕಿತ್ಸೆ ನೀಡಿ, ಮನೆಗೆ ಕಳುಹಿಸಲಾಗಿದೆ’ ಎಂದು ಆಯುಕ್ತ ಸಂತೋಷ್ ಕುಮಾರ್ ಸಿಂಗ್ ವಿವರಿಸಿದ್ದಾರೆ.

ಘಟನೆ ಕುರಿತು ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ. ಗೃಹ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯನ್ನು ಸ್ಥಳಕ್ಕೆ ಭೇಟಿ ನೀಡುವಂತೆ ಸೂಚನೆ ನೀಡಿದ್ದಾರೆ.

ಪರ್ಯಾವರಣ-2025 ಕಾರ್ಯಾಗಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ ಎಂ. ವಿಶ್ವೇಶ್ವರಯ್ಯ ಅವರ ಜನ್ಮದಿನದ ಅಂಗವಾಗಿ ಬೆಂಗಳೂರಿನ ಇಂಡಿಯನ್ ಅಕಾಡೆಮಿ ಆಫ್ ಎಂಜಿನಿಯರಿಂಗ್ (ಐಎನ್‌ಎಇ) ಚಾಪ್ಟರ್ ಹಾಗೂ ಗೋಕುಲ ಎಜುಕೇಷನ್ ಫೌಂಡೇಷನ್ ವತಿಯಿಂದ ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ‘ಪರಿಸರ ಮತ್ತು ಹಸಿರು ಶಕ್ತಿ– ಪರ್ಯಾವರಣ– 2025’ ಕಾರ್ಯಾಗಾರ ಆಯೋಜಿಸಲಾಗಿತ್ತು.

‘ಸಣ್ಣಮಟ್ಟದ ವೈಯಕ್ತಿಕ ಪ್ರಯತ್ನಗಳು ಸಹ ಸುಸ್ಥಿರ ಅಭಿವೃದ್ಧಿಗೆ ಗಮನಾರ್ಹವಾಗಿ ಕೊಡುಗೆ ನೀಡಬಹುದು’ ಎಂದು ಹೇಳಿದ ಗೋಕುಲ ಎಜುಕೇಷನ್ ಫೌಂಡೇಷನ್ ಅಧ್ಯಕ್ಷ ಎಂ.ಆರ್. ಸೀತಾರಾಂ, ಪರಿಸರ ಸಂರಕ್ಷಣೆಗಾಗಿ ರಾಮಯ್ಯ ಸಮೂಹ ಸಂಸ್ಥೆಗಳು ಕೈಗೊಂಡ ವಿವಿಧ ಉಪಕ್ರಮಗಳನ್ನು ವಿವರಿಸಿದರು.

ರಕ್ಷಣಾ ಸಚಿವರ ಮಾಜಿ ವೈಜ್ಞಾನಿಕ ಸಲಹೆಗಾರ ಡಾ.ವಿ.ಕೆ.ಆತ್ರೆ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಗೋಕುಲ ಎಜುಕೇಷನ್ ಫೌಂಡೇಷನ್ ಅಧ್ಯಕ್ಷ ಎಂ.ಆರ್. ಸೀತಾರಾಂ ಅಧ್ಯಕ್ಷತೆ ವಹಿಸಿದ್ದರು. ಐಎನ್‌ಎಇ, ಬೆಂಗಳೂರು ಚಾಪ್ಟರ್ ಅಧ್ಯಕ್ಷ ಪ್ರೊ. ಗೋಪಾಲಕೃಷ್ಣನ್ ಮತ್ತು ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಂಶುಪಾಲ ಡಾ. ಎನ್. ವಿ.ಆರ್. ನಾಯ್ಡು ಭಾಗವಹಿಸಿದ್ದರು.

ಐಐಎಸ್‌ಸಿ ಪ್ರಾಧ್ಯಾಪಕರಾದ ಪ್ರೊ. ಪಿ. ಎನ್. ವಿನಯ್ ಚಂದ್ರನ್, ಪ್ರೊ.ಶ್ರೀಶಾ ರಾವ್ ಮಾತನಾಡಿದರು.

ಬೆಂಗಳೂರಿನ ಏಳು ಎಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಂದ 28 ಮೌಖಿಕ ಮತ್ತು ಪೋಸ್ಟರ್ ಪ್ರಸ್ತುತಿಗಳು ನಡೆದವು. ಮೌಖಿಕ ಮತ್ತು ಪೋಸ್ಟರ್ ಪ್ರಸ್ತುತಿ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಒಟ್ಟು ನಾಲ್ಕು ನಗದು ಬಹುಮಾನಗಳನ್ನು ನೀಡಲಾಯಿತು.


ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ‘ಪರ್ಯಾವರಣ 2025’ಯನ್ನು ಎಂ.ಆರ್. ಸೀತಾರಾಂ ಉದ್ಘಾಟಿಸಿದರು

ಜನರ ಸೇವಕರಾಗಿ ಕರ್ತವ್ಯ ನಿರ್ವಹಿಸಿದಾಗ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಸಾಧ್ಯ

ಜಾಗೃತರಾಗಿ ಕೆಲಸ ಮಾಡಿ: ಲೋಕಾಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರದಲ್ಲಿ ನಮಗೆ ಸಿಕ್ಕಿದ ಕೆಲಸ ವಿಶೇಷಾಧಿಕಾರ ಅಲ್ಲ. ಅದು ನಮ್ಮ ಕರ್ತವ್ಯ ಎಂದು ಭಾವಿಸಿ ಜಾಗೃತರಾಗಿ ಕೆಲಸ ಮಾಡಬೇಕು. ಏನು ಮಾಡಿದರೂ ನಡೆಯುತ್ತದೆ ಎಂಬ ಭಾವನೆಯನ್ನು ನೌಕರರು ಬಿಡಬೇಕು ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಹೇಳಿದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಜಾಗೃತಿ ಸಪ್ತಾಹ- 2025ರ ಅಂಗವಾಗಿ ಮಂಡಳಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

‘ಸರ್ಕಾರಿ ನೌಕರರಿಗೆ ಸರ್ಕಾರವು ವೇತನ ನೀಡುತ್ತದೆ. ಈ ವೇತನಕ್ಕೆ ಬೇಕಾದ ಹಣವನ್ನು ವಿವಿಧ ರೂಪದಲ್ಲಿ ಪಡೆಯುತ್ತದೆ. ಕೆಲಸ ಮಾಡುವಾಗ ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಜನರ ಸೇವಕರಾಗಿ ಕರ್ತವ್ಯ ನಿರ್ವಹಿಸಬೇಕು. ಅಂತಹ ಸಂದರ್ಭದಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಸಾಧ್ಯವಾಗುತ್ತದೆ ಎಂದರು.

‘ಪ್ರತಿಯೊಬ್ಬರಲ್ಲೂ ವಿಶೇಷವಾದ ಶಕ್ತಿ ಇರುತ್ತದೆ. ಇದನ್ನು ನಾವೇ ಆಗಾಗ ಎಚ್ಚರಿಸಿಕೊಂಡರೆ ಅಂದುಕೊಂಡ ಕೆಲಸವನ್ನು ಶ್ರೇಷ್ಠತೆಯೊಂದಿಗೆ ಸಾಧಿಸಲು ಸಾಧ್ಯವಾಗುತ್ತದೆ. ಅಲ್ಲದೇ ಸೂಕ್ತ ಗುರಿಯೊಂದಿಗೆ ಕೆಲಸ ಮಾಡಿದರೆ ಶ್ರೇಷ್ಠ ರಾಷ್ಟ್ರ ನಿರ್ಮಾಣ ಮಾಡಬಹುದು ಎಂದರು.

ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಮಾತನಾಡಿ, ‘ನಗರದ 1.40 ಕೋಟಿ ಜನರಿಗೆ ನೀರು ಪೂರೈಸಲು ಜಲಮಂಡಳಿ ಅಧಿಕಾರಿಗಳು ಮತ್ತು ಸಿಬ್ಬಂದಿ ಅತ್ಯುತ್ತಮ ಕೆಲಸ ಮಾಡುತ್ತಿದ್ದಾರೆ. ಇದರ ಪರಿಣಾಮ ಹಲವು ಪ್ರಶಸ್ತಿಗಳು ಮಂಡಳಿಗೆ ಬಂದಿವೆ. ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮುಂದುವರಿಸಿಕೊಂಡು ಹೋಗಲು ಸಲಹೆ ನೀಡಬೇಕು’ ಎಂದು ಕೋರಿದರು.



ಬೆಂಗಳೂರು ಜಲಮಂಡಳಿಯ ಜಾಗೃತಿ ಸಪ್ತಾಹದಲ್ಲಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಅವರನ್ನು ಅಧ್ಯಕ್ಷ ರಾಮ ಪ್ರಸಾತ್ ಮನೋಹರ್ ಗೌರವಿಸಿದರು

ಚಿಟಿಕೆ ಸುದ್ದಿ

ಪ್ರಚೋದನೆಯೇ ಬಿಜೆಪಿ ಉದ್ದೇಶ: ಪ್ರಿಯಾಂಕ್ ಖರ್ಗೆ

ಕಲಬುರಗಿ: 'ನಾಲ್ಕು ದಿನ ಧರ್ಮಸ್ಥಳ ಚಲೋ, ಇನ್ನು 4 ದಿನ ಚಾಮುಂಡೇಶ್ವರಿ ಚಲೋ ಎಂದು ಮೆರವಣಿಗೆ ನಡೆಸುವ ಬಿಜೆಪಿಯವರು ಯುವಜನರನ್ನು ಇನ್ನೊಂದು ಕೋಮಿನವರ ವಿರುದ್ಧ ಹಿಂಸೆಗೆ ಪ್ರಚೋದಿಸಿ, ರಾಜ್ಯವನ್ನು ಉತ್ತರ ಪ್ರದೇಶ, ಬಿಹಾರ ಮಾಡಲು ಹೊರಟಿದ್ದಾರೆಯೇ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಇಲ್ಲಿ ಹರಿಹಾಯ್ದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡುತ್ತಾ, 'ಧರ್ಮಸ್ಥಳದ ಪಾವಿತ್ರ್ಯಕ್ಕೆ ಧಕ್ಕೆ ಆಗುತ್ತಿದೆ ಎಂದು ಹುಯಿಲೆಬ್ಬಿಸಿ 'ಧರ್ಮಸ್ಥಳ ಚಲೋ' ನಡೆಸಿದ ಬಿಜೆಪಿಯವರು, ಮತ್ತೊಂದೆಡೆ ಕೊಲೆಯಾದ ಸೌಜನ್ಯಾ ಕುಟುಂಬ ಸದಸ್ಯರನ್ನೂ ಭೇಟಿ ಮಾಡಿದರು. ಯಾವುದೇ ಒಂದು ವಿಚಾರವನ್ನು ಅವರು ಕೊನೆ ಮುಟ್ಟಿಸಿದ್ದಾರೆಯೇ' ಎಂದು ಪ್ರಶ್ನಿಸಿದರು.

'ಭಾರತ ತಂಡ ಪಾಕ್ ಜೊತೆಗೆ ಕ್ರಿಕೆಟ್ ಆಟದ ಮೂಲಕ ಮೋದಿ ಅವರದು ಎಂಥಾ ದೇಶಭಕ್ತಿ ಎಂದು ಗೊತ್ತಾಗಿದೆ. ಮೋಟಾಭಾಯಿಗೆ (ಅಮಿತ್ ಶಾ) ಕರೆ ಮಾಡಿ, ಅವರ ಪುತ್ರ, ಐಸಿಸಿ ಅಧ್ಯಕ್ಷ ಜಯ್ ಶಾಗೆ ಬುದ್ಧಿ ಹೇಳಿಸಿ ಮ್ಯಾಚ್ ನಿಲ್ಲಿಸಬಹುದಿತ್ತಲ್ಲವೇ?' ಎಂದರು.

'ಬಿಜೆಪಿಯಿಂದ ಬೆಂಕಿ ಹಚ್ಚುವ ಕೆಲಸ'

ಚಾಮರಾಜನಗರ: 'ಗಲಭೆ ನಡೆದರೆ ಎಲ್ಲ ಧರ್ಮದವರನ್ನು ಒಗ್ಗೂಡಿಸಿ ಶಾಂತಿ ಸ್ಥಾಪಿಸುವ ಬದಲಾಗಿ ಬಿಜೆಪಿ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದೆ' ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಟೀಕಿಸಿದರು.

ಸೋಮವಾರ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿ, 'ದಸರಾ ಉದ್ಘಾಟನೆ ಕುರಿತು ಬಿಜೆಪಿ ಕೂಗುಮಾರಿಯಂತೆ ಅರಚುತ್ತಿದೆ. ಈ ಹಿಂದೆ ಹಿಂದೆ ಮಿರ್ಜಾ ಇಸ್ಮಾಯಿಲ್, ಕವಿ ನಿಸಾರ್ ಅಹಮದ್ ದಸರಾ ಉದ್ಘಾಟಿಸಿರುವ ಇತಿಹಾಸ ಇದೆ' ಎಂದರು.

'ಬಿಜೆಪಿಯಲ್ಲಿ ಅಸ್ತಿತ್ವಕ್ಕಾಗಿ ಕಸರತ್ತು'


ಮಡಿಕೇರಿ: 'ರಾಜ್ಯ ಬಿಜೆಪಿಯಲ್ಲಿ ಗುಂಪುಗಾರಿಕೆ ಇದ್ದು, ಅಸ್ತಿತ್ವ ಉಳಿಸಿಕೊಳ್ಳಲು ಪ್ರತಿ ಗುಂಪು ಗೊಂದಲ ಸೃಷ್ಟಿಸುತ್ತಿದೆ' ಎಂದು ಸಚಿವ ಎನ್.ಎಸ್.ಭೋಸರಾಜು ಇಲ್ಲಿ ಟೀಕಿಸಿದರು.

'ಪಕ್ಷದಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ಬಾನು ಮುಷ್ತಾಕ್ ಅವರಿಗೆ ದಸರಾ ಉದ್ಘಾಟನೆಗೆ ಆಹ್ವಾನ ಪ್ರಶ್ನಿಸಿ ಪ್ರತಾಪ ಸಿಂಹ ಪಿಐಎಲ್ ಸಲ್ಲಿಸಿದ್ದರು' ಎಂದರು.

'ಬದಲಾವಣೆ ಕಾಲ ಸನ್ನಿಹಿತ'

ಎಲ್ಲರನ್ನೂ ಒಗ್ಗೂಡಿಸಲು ಸಮಾವೇಶದ ನೇತೃತ್ವ: ದಿಂಗಾಲೇಶ್ವರ ಸ್ವಾಮೀಜಿ

ಪ್ರಜಾವಾಣಿ ವಾರ್ತೆ



ದಿಂಗಾಲೇಶ್ವರ ಸ್ವಾಮೀಜಿ

ಹುಬ್ಬಳ್ಳಿ: 'ಎಲ್ಲರನ್ನೂ ಒಂದು ಗೂಡಿಸಲು ನೇತೃತ್ವ ವಹಿಸಿಕೊಂಡಿರುವೆ. ಬದಲಾವಣೆಗೆ ಕಾಲ ಸನ್ನಿಹಿತವಾಗಿದೆ. ಕಾಲವೇ ಹಂತಹಂತವಾಗಿ ಎಲ್ಲರನ್ನೂ ಒಂದುಗೂಡಿಸುತ್ತದೆ' ಎಂದು ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

ಜಾಗತಿಕ ಲಿಂಗಾಯತ ಮಹಾಸಭಾ ಕಾರ್ಯದರ್ಶಿ ಎಸ್.ಎಂ.ಜಾಮದಾರ ಅವರ ಹೇಳಿಕೆಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, 'ಪಂಚ ಪೀಠಾಧಿಪತಿಗಳು ಮತ್ತು ಲಿಂಗಾಯತ ಧರ್ಮ ಪ್ರತಿಪಾದಕರು ಬದಲಾಗಬೇಕು ಎಂಬುದು ನಮ್ಮ ನಿಲುವು' ಎಂದರು.

'ಬಾಳೆಹೊನ್ನೂರಿನ ರಂಭಾಪುರಿ ಮಠದ ಶ್ರೀಗಳು ಇದೇ ಮೊದಲಿಗೆ ತಮ್ಮ ದಸರಾ ದರ್ಬಾರ್‌ನಲ್ಲಿ ಬಸವಣ್ಣ ಅವರ ಚಿತ್ರ ಇರಿಸಿಕೊಂಡಿದ್ದಾರೆ. ಇದು ಮೊದಲ ಬದಲಾವಣೆ. ದಿನ ಕಳೆದಂತೆ ಬಸವಣ್ಣ, ರೇಣುಕಾಚಾರ್ಯರ ಭಕ್ತರು ಒಂದಾಗುತ್ತಾರೆ. ಪಂಚಪೀಠಗಳು, ವಿರಕ್ತ ಪೀಠಗಳೂ ಒಂದಾಗುತ್ತವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಮಾವೇಶದ ತಯಾರಿ: ಸೆ.19ರಂದು ಹುಬ್ಬಳ್ಳಿಯಲ್ಲಿ 'ವೀರಶೈವ ಲಿಂಗಾಯತ ಏಕತಾ ಸಮಾವೇಶ' ನಡೆಯಲಿದೆ. ಸಮಾವೇಶದಲ್ಲಿ ವಿವಿಧೆಡೆಯಿಂದ ಸಾವಿರಾರು ಜನರು ಹಾಗೂ ವಿವಿಧ ಮಠಾಧೀಶರು ಪಾಲ್ಗೊಳ್ಳುವರು' ಎಂದು ಹೇಳಿದರು.

ಜಾತಿ ಸಮೀಕ್ಷೆ ವೇಳೆ ಧರ್ಮದ ಕಾಲಂನಲ್ಲಿ ವೀರಶೈವ ಲಿಂಗಾಯತರು, ಹಿಂದೂ ಎಂದೇ ಬರೆಯಿಸಿ
ಅರವಿಂದ ಬೆಲ್ಲದ, ಬಿಜೆಪಿ ಮುಖಂಡ

ಒಗ್ಗಟ್ಟಿಗಾಗಿ ಸಮಾವೇಶ: ಈಶ್ವರ ಖಂಡ್ರೆ

ಹುಬ್ಬಳ್ಳಿ: 'ಸಮಾಜ ಒಗ್ಗೂಡಿಸಲು ಹುಬ್ಬಳ್ಳಿಯಲ್ಲಿ ಸೆ.19ರಂದು ವೀರಶೈವ ಲಿಂಗಾಯತ ಏಕತಾ ಸಮಾವೇಶ ಏರ್ಪಡಿಸಲಾಗಿದೆ. ಯಾರ ವಿರೋಧಕ್ಕೋ, ಪರ್ಯಾಯ ಕಂಡುಕೊಳ್ಳಲು ಅಲ್ಲ' ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದರು.

'ಸಮಾಜದಲ್ಲಿ ವೀರಶೈವ ಲಿಂಗಾಯತರು ಸ್ವಾಭಿಮಾನಿಗಳು, ಸ್ವಾವಲಂಬಿ ಮತ್ತು ಬಲಾಢ್ಯರಾಗಿ ಬದುಕಬೇಕು. ಸಮಾಜದ ಇತರೆ ಎಲ್ಲರೂ ಬೆಳೆಯಲು ಇದರಿಂದ ಸಾಧ್ಯ' ಎಂದು ಸೋಮವಾರ ಅವರು ಅಭಿಪ್ರಾಯಪಟ್ಟರು.

'ಸಮಾಜದ ವಿಷಯದಲ್ಲಿ ಅನಗತ್ಯ ಗೊಂದಲ ಮೂಡಿಸಬಾರದು. ವಿಚಾರವಂತರು, ಸ್ವಾಮೀಜಿಗಳು ಅರ್ಥ ಮಾಡಿಕೊಳ್ಳಬೇಕು' ಎಂದು ಕೋರಿದರು.

ಪ್ರತ್ಯೇಕ ಧರ್ಮ ಸಿಗಲ್ಲ: ಚರಂತಿಮಠ

ಬಾಗಲಕೋಟೆ: 'ಹೊಸ ಧರ್ಮ ಕೊಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಇಲ್ಲ. ಯಾರಿಗೂ ಪ್ರತ್ಯೇಕ ಧರ್ಮ ಸಿಗುವುದಿಲ್ಲ' ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಹೇಳಿದರು.

'ದೇಶದ ಸ್ವಾತಂತ್ರ್ಯ ನಂತರ ಹೊಸ ಧರ್ಮಕ್ಕೆ ಮಾನ್ಯತೆ ಸಿಕ್ಕಿಲ್ಲ. ಪ್ರತ್ಯೇಕ ಧರ್ಮ ಹೊಂದಿರುವ ಸಿಖ್ಖರು ಈಗ ಪ್ರತ್ಯೇಕ ರಾಷ್ಟ್ರ ಕೇಳುತ್ತಿದ್ದಾರೆ. ದೇಶದ ಒಗ್ಗಟ್ಟಿಗೆ ಹೊಸ ಧರ್ಮದ ಅವಶ್ಯಕತೆ ಇಲ್ಲ' ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಕೇಂದ್ರ ಸರ್ಕಾರ ಜಾತಿ ಸಮೀಕ್ಷೆ ಮಾಡಲಿದೆ. ವೀರಶೈವ, ಲಿಂಗಾಯತ ಎರಡೂ ಒಂದೇ. ರಾಜ್ಯ ಸರ್ಕಾರ ಜಾತಿ ಸಮೀಕ್ಷೆ ಹೆಸರಿನಲ್ಲಿ ಗೊಂದಲ ಹುಟ್ಟುಹಾಕುತ್ತಿದೆ' ಎಂದರು.

ಸಂಭ್ರಮದ ವಿಟ್ಲಪಿಂಡಿ ಉತ್ಸವ

ಕೃಷ್ಣಮಠದಲ್ಲಿ ಸೌರ ಶ್ರೀಕೃಷ್ಣ ಜನ್ಮಾಷ್ಟಮಿಯ ವಿಜೃಂಭಣೆ

ಪ್ರಜಾವಾಣಿ ವಾರ್ತೆ

ಉಡುಪಿ: ಸೌರ ಶ್ರೀಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ ಉಡುಪಿಯ ಕೃಷ್ಣಮಠದಲ್ಲಿ ಸೋಮವಾರ ವಿಟ್ಲಪಿಂಡಿ ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು.

ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಸ್ವಾಮೀಜಿ ಕೃಷ್ಣನ ಮೃಣ್ಮಯ (ಮಣ್ಣಿನ) ಮೂರ್ತಿಗೆ ಷೋಡಷೋಪಚಾರ ಪೂಜೆ ಮಾಡಿ, ನಂತರ ಮಹಾಪೂಜೆ ನೆರವೇರಿಸಿದರು. ಮಧ್ಯಾಹ್ನ ಮೃಣ್ಮಯ ಉತ್ಸವ ಮೂರ್ತಿಯನ್ನು ಚಿನ್ನದ ಪಲ್ಲಕ್ಕಿಯಲ್ಲಿ ಕೂರಿಸಿ, ರಥಬೀದಿಗೆ ತರಲಾಯಿತು. ಬಳಿಕ ಸ್ವರ್ಣ ರಥದಲ್ಲಿರಿಸಲಾಯಿತು.

ಅದಕ್ಕೂ ಮುನ್ನ ಅನಂತೇಶ್ವರ ಮತ್ತು ಚಂದ್ರೇಶ್ವರ ದೇವಾಲಯಗಳ ಉತ್ಸವ ಮೂರ್ತಿಗಳನ್ನು ನವರತ್ನ ರಥದಲ್ಲಿರಿಸಲಾಗಿತ್ತು. ಪರ್ಯಾಯ ಶ್ರೀಪಾದರು ಆರತಿ ಬೆಳಗಿ ರಥೋತ್ಸವಕ್ಕೆ ಚಾಲನೆ ನೀಡಿದರು. ಇದೇ ವೇಳೆ ಗೊಲ್ಲ ವೇಷಧಾರಿಗಳು ರಥಬೀದಿಯ ಗುರ್ಜಿಗಳಲ್ಲಿ ಕಟ್ಟಿದ್ದ ಮೊಸರು ಕುಡಿಕೆಗಳನ್ನು ಒಡೆದರು.

ಮೆರವಣಿಗೆಯಲ್ಲಿ ಜನಪದ ಹುಲಿವೇಷಗಳು ಹಾಗೂ ಇತರ ವೇಷಗಳು ಗಮನ ಸೆಳೆದವು.



ಉಡುಪಿಯ ಕೃಷ್ಣ ಮಠದ ರಥಬೀದಿಯಲ್ಲಿ ಸೋಮವಾರ ನಡೆದ ವಿಟ್ಲಪಿಂಡಿ ಮಹೋತ್ಸವದ ವೇಳೆ ಗೋವಳ ವೇಷಧಾರಿಗಳು ಮೊಸರು ಕುಡಿಕೆ ಒಡೆದರು

ಸಾವಿರಾರು ಭಕ್ತರು ರಥೋತ್ಸವಕ್ಕೆ ಸಾಕ್ಷಿಯಾದರು. ಅದಮಾರು ಮಠಾಧೀಶ ವಿಶ್ವಪ್ರಿಯತೀರ್ಥ ಸ್ವಾಮೀಜಿ ರಥೋತ್ಸವದಲ್ಲಿ ಪಾಲ್ಗೊಂಡರು.

ಮೆರವಣಿಗೆ ನಡುವೆ ಪುತ್ತಿಗೆ ಶ್ರೀಗಳು ರಥಬೀದಿಯಲ್ಲಿ ಭಕ್ತರತ್ತ ಪ್ರಸಾದ ರೂಪದಲ್ಲಿ ಉಂಡೆ, ಚಕ್ಕುಲಿ ಎಸೆದರು. 'ಗೋವಿಂದ' ಎನ್ನುತ್ತ ಭಕ್ತರು ಅದನ್ನು ಹಿಡಿಯಲು ಯತ್ನಿಸಿದರು.

ಮೆರವಣಿಗೆ ಬಳಿಕ ಮೃಣ್ಮಯ ಮೂರ್ತಿಯನ್ನು ಮಧ್ವಸರೋವರದಲ್ಲಿ ಜಲಸ್ತಂಭನಗೊಳಿಸಲಾಯಿತು. ಬಳಿಕ ಕೃಷ್ಣ ಮಠದ ರಾಜಾಂಗಣದಲ್ಲಿ ಹುಲಿವೇಷ ಸ್ಪರ್ಧೆ ನಡೆಯಿತು.

ಮುಖ್ಯಾಂಶಗಳು

- ಚಿನ್ನದ ಪಲ್ಲಕ್ಕಿಯಲ್ಲಿ ಮೃಣ್ಮಯ ಮೂರ್ತಿಯ ಮೆರವಣಿಗೆ
- ಷೋಡಷೋಪಚಾರ ಪೂಜೆ ಸಲ್ಲಿಸಿದ ಸುಗುಣೇಂದ್ರ ತೀರ್ಥ ಸ್ವಾಮೀಜಿ
- ಮಧ್ವಸರೋವರದಲ್ಲಿ ಕೃಷ್ಣನ ಮೂರ್ತಿಯ ಜಲಸ್ಥಂಭನ

ಅರಣ್ಯ ಇಲಾಖೆ, ಎಸ್‌ಐಟಿ ಅಧಿಕಾರಿಗಳ ಸಮಾಲೋಚನೆ

ಕಾಡಿನಲ್ಲಿ ಮತ್ತೆ ಶೋಧ ನಡೆಸಲು ಸಿದ್ಧತೆ

ಧರ್ಮಸ್ಥಳ ಬೆಳವಣಿಗೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಬೆಳವಣಿಗೆ ಕುರಿತು ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ನೇತ್ರಾವತಿ ಸ್ನಾನಘಟ್ಟದ ಪಕ್ಕದ ಕಾಡಿನಲ್ಲಿ 'ನೆಲದ ಮೇಲೆಯೇ ಮೃತದೇಹಗಳ ಅವಶೇಷ ಸಿಕ್ಕಿವೆ' ಎನ್ನಲಾದ ಪ್ರದೇಶದಲ್ಲಿ ವ್ಯಾಪಕ ಶೋಧ ನಡೆಸಲು ಸಿದ್ಧತೆ ನಡೆಸಿದೆ.

ಸಾಕ್ಷಿ ದೂರುದಾರ ಪೊಲೀಸರಿಗೆ ತಂದೊಪ್ಪಿಸಿದ್ದ ತಲೆಬುರುಡೆಯನ್ನು ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಪಕ್ಕ ಬಂಗ್ಲೆಗುಡ್ಡೆಯ ಕಾಡಿನಿಂದ ಹೊರತೆಗೆಯಲಾಗಿತ್ತು.

ತಲೆಬುರುಡೆ ಇದ್ದ ಆ ಜಾಗವನ್ನು ತೋರಿಸಿದ್ದ ಧರ್ಮಸ್ಥಳ ಗ್ರಾಮದ ಪಾಂಗಾಳದ ವಿಠಲ ಗೌಡ ಅವರನ್ನು ಎಸ್‌ಐಟಿ ಅಧಿಕಾರಿಗಳು ಈಚೆಗೆ ಸ್ಥಳಕ್ಕೆ ಕರೆದೊಯ್ದು ಮಹಜರು ನಡೆಸಿದ್ದರು. ಆ ಜಾಗವು ಅರಣ್ಯ ಇಲಾಖೆಯ ಬೆಳ್ತಂಗಡಿ ವಲಯದ ವ್ಯಾಪ್ತಿಯಲ್ಲಿದೆ. ಆ ಸ್ಥಳದ ಮಹಜರು ನಡೆದ ಬಳಿಕ ವಿಠಲ ಗೌಡ ಅವರು ಮಾತನಾಡಿದ್ದ ದೃಶ್ಯಗಳಿದ್ದ ವಿಡಿಯೊವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

'ಬುರುಡೆ ಸಿಕ್ಕಿದ್ದ ಸ್ಥಳದ ಮಹಜರಿಗೆ ತೆರಳಿದ್ದಾಗ ಕಾಡಿನಲ್ಲಿ ಒಂದು ಕಡೆ ಮೂರು ಮೃತದೇಹಗಳ ಹಾಗೂ ಇನ್ನೊಂದು ಕಡೆ ಎಂಟು ಮೃತದೇಹಗಳಿಗೆ ಸಂಬಂಧಿಸಿದ ಅವಶೇಷಗಳು ಕಾಣಿಸಿದ್ದವು. ಮಹಜರಿನ ಸಂದರ್ಭದಲ್ಲಿ ಎಸ್‌ಐಟಿ ಅಧಿಕಾರಿಗಳೂ ಅವುಗಳನ್ನು ನೋಡಿದ್ದಾರೆ' ಎಂದು ಆ ವಿಡಿಯೊದಲ್ಲಿ ಅವರು ತಿಳಿಸಿದ್ದರು.

ಎಸ್‌ಐಟಿ ಅಧಿಕಾರಿಗಳು ಅರಣ್ಯ ಇಲಾಖೆಯ ಬೆಳ್ತಂಗಡಿ ವಲಯದ ಕೆಲ ಅಧಿಕಾರಿಗಳನ್ನು ಬೆಳ್ತಂಗಡಿ ಕಚೇರಿಗೆ ಸೋಮವಾರ ಕರೆಸಿಕೊಂಡು ಚರ್ಚಿಸಿದ್ದಾರೆ.

'ಸಾಕ್ಷಿ ದೂರುದಾರ ತಂದೊಪ್ಪಿಸಿರುವ ತಲೆಬುರುಡೆಯನ್ನು ಹೊರತೆಗೆದ ಕಾಡಿನಲ್ಲಿ ಮತ್ತಷ್ಟು ಶೋಧ ನಡೆಸಬೇಕಿದೆ. ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದ್ದೇವೆ' ಎಂದು ಎಸ್‌ಐಟಿ ಮೂಲಗಳು 'ಪ್ರಜಾವಾಣಿ'ಗೆ ಮಾಹಿತಿ ನೀಡಿವೆ.

ಮಾಹಿತಿಗೆ ಹೈಕೋರ್ಟ್ ತಾಕೀತು

ಬೆಂಗಳೂರು: 'ಧರ್ಮಸ್ಥಳ ಗ್ರಾಮದಲ್ಲಿ ನಾವು ಗುರುತಿಸಿರುವ ಸ್ಥಳಗಳಲ್ಲಿ ಕೂಡಲೇ ಅಗೆಯಲು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ನಿರ್ದೇಶನ ನೀಡಬೇಕು' ಎಂದು ಕೋರಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಮಾಹಿತಿ ಒದಗಿಸಲು ಹೈಕೋರ್ಟ್ ರಾಜ್ಯ ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಿದೆ.

ಈ ಕುರಿತಂತೆ ಧರ್ಮಸ್ಥಳ ಗ್ರಾಮದ ಪಾಂಗಾಳ ಮನೆಯ ನಿವಾಸಿ ಪಾಂಡುರಂಗ ಗೌಡ (38) ಮತ್ತು ತುಕಾರಾಂ ಗೌಡ (48) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ವಿಡಿಯೊ ಕಾನ್ಫರೆನ್ಸ್ ಮುಖಾಂತರ ಅರ್ಜಿದಾರರ ಪರ ಹಾಜರಾದ ದೆಹಲಿ ಹೈಕೋರ್ಟ್ ವಕೀಲ ದೀಪಕ್ ಖೋಸ್ಲಾ, 'ಅರ್ಜಿದಾರರು ಎಸ್‌ಐಟಿಗೆ ಕಳೆದ ತಿಂಗಳ 29ರಂದು ಅರ್ಜಿ ಸಲ್ಲಿಸಿದ್ದು, ಧರ್ಮಸ್ಥಳದಲ್ಲಿ ನೂರಾರು ಅನಾಮಧೇಯ ಶವಗಳನ್ನು ಅಕ್ರಮವಾಗಿ ದಫನ್ ಮಾಡಿರುವ ಬಗ್ಗೆ ಸ್ಥಳಗಳನ್ನು ಗುರುತಿಸಿದ್ದಾರೆ. ಈ ಸ್ಥಳಗಳಲ್ಲಿ ಕೂಡಲೇ ಅಗೆತ ಶುರುಮಾಡಲು ಎಸ್‌ಐಟಿಗೆ ನಿರ್ದೇಶನ ನೀಡಬೇಕು' ಎಂದು ಮನವಿ ಮಾಡಿದರು.

ಖೋಸ್ಲಾ ಅವರ ವಾದಕ್ಕೆ ಪ್ರತಿಯಾಗಿ ಪ್ರಾಸಿಕ್ಯೂಷನ್ ಪರ ಹಾಜರಿದ್ದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ಅರ್ಜಿದಾರರ ಪರ ವಕಾಲತ್ತನ್ನೇ ಸಲ್ಲಿಸಿಲ್ಲ ಎಂದು ಆಕ್ಷೇಪಿಸಿದರು.

ಇದನ್ನು ಪರಿಶೀಲಿಸಿದ ನ್ಯಾಯಪೀಠ, 'ಕಚೇರಿಯ ಆಕ್ಷೇಪಣೆಗಳನ್ನು ಪೂರೈಸಿ ಮತ್ತು ಪ್ರಾಸಿಕ್ಯೂಷನ್‌ಗೆ ಅರ್ಜಿಯ ಪ್ರತಿಯನ್ನು ನೀಡಿ' ಎಂದು ಅರ್ಜಿದಾರರಿಗೆ ಆದೇಶಿಸಿತು. ಅಂತೆಯೇ, ಪ್ರಾಸಿಕ್ಯೂಷನ್ ಅರ್ಜಿದಾರರ ಮನವಿಯ ಬಗ್ಗೆ ಮಾಹಿತಿ ಸಂಗ್ರಹಿಸಿ ನ್ಯಾಯಾಲಯಕ್ಕೆ ಒದಗಿಸಬೇಕು' ಎಂದು ಬಿ.ಎನ್.ಜಗದೀಶ್ ಅವರಿಗೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಿತು.

'ಭೂಸ್ವಾಧೀನ ಪ್ರಕ್ರಿಯೆಗೆ ಲಾಡ್ ಅಸಹಕಾರ'

ಬೆಳಗಾವಿ: 'ಬೆಳಗಾವಿ–ಚನ್ನಮ್ಮನ ಕಿತ್ತೂರು–ಧಾರವಾಡ ನೇರ ರೈಲ್ವೆ ಮಾರ್ಗ ನಿರ್ಮಾಣಕ್ಕೆ ಭೂಮಿ ಸ್ವಾಧೀನ ಪಡಿಸಿಕೊಳ್ಳಲು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಸಹಕರಿಸುತ್ತಿಲ್ಲ' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಆರೋಪಿಸಿದರು.

'ಯೋಜನೆಗೆ ಬೆಳಗಾವಿ ಜಿಲ್ಲೆಯಲ್ಲಿ 1,200 ಎಕರೆ ಭೂಮಿ ಸ್ವಾಧೀನವಾಗಿದೆ. ಧಾರವಾಡ ಜಿಲ್ಲೆಯಲ್ಲಿ 45 ಎಕರೆ ಭೂಸ್ವಾಧೀನ ಆಗಬೇಕಿದೆ. ಲಾಡ್ ಅವರನ್ನು 2-3 ಬಾರಿ ಭೇಟಿ ಆಗಿದ್ದು, ಮತ್ತೆ ಭೇಟಿಯಾಗಿ ಸಹಕಾರ ಕೋರುವೆ. ಸ್ಪಂದಿಸದಿದ್ದರೆ, ನಮ್ಮ ಬಳಿ ಪರ್ಯಾಯ ಮಾರ್ಗಗಳಿವೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿ ಮುಖ್ಯಮಂತ್ರಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಧಾರವಾಡ ಜಿಲ್ಲಾಧಿಕಾರಿ ಜೊತೆ ಮಾತುಕತೆಯಾಗಿದೆ. ಯೋಜನೆಗೆ ಏಕೆ ಸಹಕಾರ ನೀಡುತ್ತಿಲ್ಲ ಎಂಬುದನ್ನು ರಾಜ್ಯ ಸರ್ಕಾರ ತಿಳಿಸಬೇಕು' ಎಂದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವರ ಸಮ್ಮುಖದಲ್ಲಿ ಧಾರವಾಡದಲ್ಲಿ ನಡೆದ ಕೃಷಿ ಮೇಳದ ಕಾರ್ಯಕ್ರಮದಲ್ಲಿ ಜಿಲ್ಲಾಮಟ್ಟದ ಶ್ರೇಷ್ಠ ಕೃಷಿ ಮಹಿಳೆ ಪ್ರಶಸ್ತಿ ಪ್ರದಾನ ಮಾಡಲಾಯಿತು

'ಮಣ್ಣಿನ ಫಲವತ್ತತೆ ರಕ್ಷಣೆ ಅವಶ್ಯ'

ಕೃಷಿ ಮೇಳಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಧಾರವಾಡ: 'ಹಸಿರುಕ್ರಾಂತಿ ಕಾಲಘಟ್ಟದಲ್ಲಿ ಆಹಾರ ಉತ್ಪಾದನೆ ವೇಗವಾಗಿತ್ತು. ಈಗ ಮಣ್ಣಿನ ಫಲವತ್ತತೆ ಕುಸಿದು, ಕುಂಠಿತಗೊಂಡಿದೆ. ಕೃಷಿ ವಿಶ್ವವಿದ್ಯಾಲಯಗಳು ಇದನ್ನು ಗಂಭೀರವಾಗಿ ಪರಿಗಣಿಸಿ, ಪರಿಹಾರಕ್ಕೆ ಆದ್ಯತೆ ನೀಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಹೇಳಿದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಸೋಮವಾರ ಕೃಷಿ ಮೇಳದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಜನಸಂಖ್ಯೆಗೆ ಅನುಗುಣವಾಗಿ ಆಹಾರ ಬೆಳೆ ಉತ್ಪಾದನೆ ಹೆಚ್ಚಳ ಮಾಡಬೇಕು' ಎಂದರು.

'ಹೈನುಗಾರಿಕೆಯಲ್ಲಿ ಕರ್ನಾಟಕವು ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ಪ್ರತಿ ದಿನ ಒಂದು ಕೋಟಿ ಲೀಟರ್ ಹಾಲು ಉತ್ಪಾದನೆ ಆಗುತ್ತದೆ. ರೈತರು ಕೃಷಿ ಜತೆ ಪಶುಸಂಗೋಪನೆಯಂಥ ಉಪಕಸುಬು ಅಳವಡಿಸಿಕೊಳ್ಳಬೇಕು' ಎಂದರು.

ಇದಕ್ಕೂ ಮುನ್ನ ಮುಖ್ಯಮಂತ್ರಿ ಮತ್ತು ಸಚಿವರು ಹಣ್ಣುಹಂಪಲು, ಫಲಪುಷ್ಪ ಪ್ರದರ್ಶನ ಮಳಿಗೆಗೆ ಭೇಟಿ ನೀಡಿದರು. ಜಿಲ್ಲಾಮಟ್ಟದ ಶ್ರೇಷ್ಠ ಕೃಷಿಕ, ಶ್ರೇಷ್ಠ ಕೃಷಿ ಮಹಿಳೆ ಪ್ರಶಸ್ತಿ ಪ್ರದಾನ ಮಾಡಿದರು.

ವಿಧಾನ ಪರಿಷತ್ತು ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಸಂತೋಷ್ ಲಾಡ್, ಎನ್.ಚಲುವರಾಯ ಸ್ವಾಮಿ, ಕೃಷಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಪಿ.ಎಲ್.ಪಾಟೀಲ ಮತ್ತಿತರರು ಇದ್ದರು.

ಬಫರ್ ಝೋನ್ ಕಡಿತ ಮಸೂದೆ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆಗಳ ಸಂರಕ್ಷಿತ ಪ್ರದೇಶವನ್ನು (ಬಫರ್ ಝೋನ್) ಕಡಿಮೆ ಮಾಡಲು ಅವಕಾಶ ಕಲ್ಪಿಸುವ 'ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಮಸೂದೆ'ಯನ್ನು ಸ್ಪಷ್ಟೀಕರಣ ಕೇಳಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜ್ಯ ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದಾರೆ.

ಕೆರೆಗಳು ಮತ್ತು ರಾಜಕಾಲುವೆಗಳ ವಿಸ್ತೀರ್ಣಕ್ಕೆ ಅನುಗುಣವಾಗಿ 'ಸಂರಕ್ಷಿತ ಪ್ರದೇಶ'ವನ್ನು ನಿಗದಿಪಡಿಸಲು ಹಾಗೂ ಬಫರ್‌ಝೋನ್‌ನಲ್ಲಿ ಸಾರ್ವಜನಿಕ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿಗಳನ್ನು ಕೈಗೊಳ್ಳಲು ಮಸೂದೆ ತಿದ್ದುಪಡಿಗೆ ಸರ್ಕಾರ ಮುಂದಾಗಿತ್ತು.

ಆದರೆ, ಸರ್ಕಾರದ ಈ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ನಾಗರಿಕರ ಸಂಘವಾದ 'ಬೆಂಗಳೂರು ಟೌನ್ ಹಾಲ್', ರಾಜ್ಯಪಾಲರಿಗೆ ಪತ್ರ ಬರೆದು ಮಸೂದೆಗೆ ಅಂಕಿತ ಹಾಕದಂತೆ ಮನವಿ ಮಾಡಿತ್ತು.

'ಕೆರೆಗಳ ಬಫರ್ ಝೋನ್ ಅನ್ನು 30 ಮೀಟರ್‌ಗೆ ಇಳಿಸುವುದರಿಂದ ಬೆಂಗಳೂರಿನ ನೀರಿನ ಭದ್ರತೆ ಮತ್ತು ಪರಿಸರ ವ್ಯವಸ್ಥೆಯ ಸಮಗ್ರತೆಗೆ ಅಪಾಯ ಉಂಟಾಗಲಿದೆ. ಪರಿಸರ ಸಮತೋಲನ ಕಾಪಾಡಲು 30 ಮೀಟರ್ ಬದಲು 300 ಮೀಟರ್‌ಗೆ ಬಫರ್ ಝೋನ್ ಹೆಚ್ಚಿಸುವ ಅಗತ್ಯವಿದೆ' ಎಂದು ಸಂಘವು ಪತ್ರದಲ್ಲಿ ಪ್ರತಿಪಾದಿಸಿತ್ತು.

'ಬೆಂಗಳೂರು ಟೌನ್ ಹಾಲ್' ಸಂಘದ ಪತ್ರದಲ್ಲಿದ್ದ ಅಂಶಗಳನ್ನು ಉಲ್ಲೇಖಿಸಿ ಸ್ಪಷ್ಟೀಕರಣ ಕೇಳಿರುವ ರಾಜ್ಯಪಾಲರು, ಆ ಅಂಶಗಳಿಗೆ ವಿವರವಾದ ಸ್ಪಷ್ಟನೆಗಳ ಸಹಿತ ಕಡತ ಮತ್ತೊಮ್ಮೆ ಕಳುಹಿಸಲು ರಾಜ್ಯ ಸರ್ಕಾರಕ್ಕೆ ಸೂಚಿಸಿದ್ದಾರೆ.

ಮುಖ್ಯಾಂಶಗಳು

- ಸ್ಪಷ್ಟೀಕರಣ ಕೇಳಿದ ರಾಜ್ಯಪಾಲ ಗೆಹಲೋತ್
- ಮಸೂದೆಗೆ ಅಂಕಿತ ಹಾಕದಂತೆ 'ಬೆಂಗಳೂರು ಟೌನ್ ಹಾಲ್' ಮನವಿ

‘ಮತ ಕಳವಿನಿಂದ ಸಂವಿಧಾನ ದುರ್ಬಲ’

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಬ್ಬ ವ್ಯಕ್ತಿ, ಒಂದು ಮತ, ಒಂದು ಮೌಲ್ಯ’ ಎಂಬ ಎಲ್ಲರಿಗೂ ಸಮಾನವಾದ ಮತದಾನದ ಹಕ್ಕನ್ನು ಸಂವಿಧಾನದ ಮೂಲಕ ಅಂಬೇಡ್ಕರ್ ನೀಡಿದ್ದರು. ಮತ ಕಳವಿನ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ದುರ್ಬಲಗೊಳಿಸುವ ಹುನ್ನಾರವನ್ನು ಪಟ್ಟಭದ್ರ ಹಿತಾಸಕ್ತಿಗಳು ಮಾಡುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ನಡೆದ ‘ಅಂತರ-ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ’ ಉದ್ಘಾಟಿಸಿ ಅವರು ಮಾತನಾಡಿದರು.

‘ಅಸಮಾನತೆ ಇದ್ದರೆ ಶೋಷಣೆ ಇರುತ್ತದೆ. ಸಮಾನತೆ ಬಂದಾಗ ಶೋಷಣೆ ಇಲ್ಲವಾಗುತ್ತದೆ. ನಮ್ಮ ಸಂವಿಧಾನವು ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಯನ್ನು ಸಾರುತ್ತದೆ. ಸಮಾನ ಹಕ್ಕು, ಸಮಾನ ಅವಕಾಶವನ್ನು ನೀಡುವ ಸಂವಿಧಾನ ಇರಬಾರದು ಎಂದು ಮನುವಾದಿಗಳು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ’ ಎಂದು ಹೇಳಿದರು.

‘1950ರಲ್ಲಿ ಸಂವಿಧಾನ ಜಾರಿಯಾದಾಗಲೂ ಸಂವಿಧಾನವನ್ನು ವಿರೋಧಿಸಿದ್ದರು. ಈಗಲೂ ವಿರೋಧಿಸುವವರು ಇದ್ದಾರೆ. ಅವರ ಆಶಯ ಈಡೇರಬಾರದು. ಮತ ಕಳವು ಮಾಡಲು ಯಾವ ಕಾರಣಕ್ಕೂ ಬಿಡಬಾರದು. ಪ್ರಜಾಪ್ರಭುತ್ವ ದುರ್ಬಲ ಗೊಳ್ಳದಂತೆ ಕಾಪಾಡಬೇಕು. ಪ್ರಜಾಪ್ರಭುತ್ವದ ರಕ್ಷಣೆಯಾದರೆ ನಮ್ಮ ರಕ್ಷಣೆಯಾಗುತ್ತದೆ’ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ವಿದ್ಯಾರ್ಥಿಗಳಲ್ಲಿ, ಯುವ ಜನರಲ್ಲಿ ನಾಯಕತ್ವ ಗುಣವನ್ನು ಬೆಳೆಸಬೇಕಿದೆ. ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಅರಿವು ಮೂಡಿಸಬೇಕಿದೆ. ಮದ್ದುಗುಂಡಿಗಿಂತ ಮತದಾನ ಬಲಾಢ್ಯ ಎನ್ನುವ ಮಾತಿದೆ. ನಾನು, ಸಿದ್ದರಾಮಯ್ಯ ಸೇರಿ ನಾವೆಲ್ಲ ಈ ಸ್ಥಾನದಲ್ಲಿ ಕೂರಲು ಮತದಾನವೇ ಕಾರಣ. ಇಲ್ಲದೇ ಇದ್ದರೆ ರಾಜ ಮಹಾರಾಜರೇ ಇರುತ್ತಿದ್ದರು. ಇಂದು ಅವರೆಲ್ಲ ಮನೆಯಲ್ಲಿ ಕೂರುವಂತೆ ಪ್ರಜಾಪ್ರಭುತ್ವ ವ್ಯವಸ್ಥೆ ಮಾಡಿದೆ’ ಎಂದು ತಿಳಿಸಿದರು.

ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಶಾಸಕ ಎಸ್.ಎನ್. ನಾರಾಯಣಸ್ವಾಮಿ, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಆರ್. ಸಂಪತ್‌ರಾಜ್, ಆದಿ ಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಸ್. ಮಂಜುನಾಥ್, ಅಲೆಮಾರಿ, ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಉಪಸ್ಥಿತರಿದ್ದರು.

‘ಸಂವಿಧಾನ ಗೊತ್ತಿಲ್ಲದ ಮೂರ್ಖರ ಬಗ್ಗೆ ಎಚ್ಚರ ಇರಲಿ’

ಬೆಂಗಳೂರು: ‘ಜಾತ್ಯತೀತ ವ್ಯವಸ್ಥೆಯಲ್ಲಿ ನಾವಿದ್ದೇವೆ. ನಾಡಹಬ್ಬ ದಸರಾವನ್ನು ಸಾಹಿತಿ ಬಾನು ಮುಷ್ತಾಕ್ ಉದ್ಘಾಟಿಸಬಾರದು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಸಂಸದರಾಗಿದ್ದವರಿಗೆ ಸಂವಿಧಾನ ಗೊತ್ತಿಲ್ಲ ಎಂದರೆ ಅಂಥ ಮೂರ್ಖರ ಬಗ್ಗೆ ಎಚ್ಚರದಿಂದ ಇರಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸೋಮವಾರ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಉದ್ಘಾಟಿಸಿದ ಅವರು, ಮೈಸೂರಿನ ಮಾಜಿ ಸಂಸದ ಪ್ರತಾಪ್ ಸಿಂಹ ಅವರ ಹೆಸರು ಎತ್ತದೇ ಟೀಕಿಸಿದರು.

ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದ ಬಳಿಕವೂ ಪಟ್ಟಭದ್ರ ಹಿತಾಸಕ್ತಿಗಳು ಮತಾಂಧರಂತೆ ವರ್ತಿಸಿ ಸಮಾಜವನ್ನು ದಿಕ್ಕುತಪ್ಪಿಸುತ್ತಿವೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದ್ದಾರೆ. ಸಹಬಾಳ್ವೆ, ಸಹಿಷ್ಣುತೆ ಬಗ್ಗೆ ಗೊತ್ತಿರುವವರೇ ದಾರಿ ತಪ್ಪಿಸುತ್ತಿದ್ದಾರೆ. ರಾಜಕೀಯ ಮಾಡಲಿ ಆದರೆ, ಜನರನ್ನು ತಪ್ಪು ದಾರಿಗೆ ಎಳೆಯುವ ಕೆಲಸ ಮಾಡಬಾರದು ಎಂದು ತಿಳಿಸಿದರು.

‘ಸರ್ವಾಧಿಕಾರಿ ಆರಾಧನೆ: ಪ್ರಜಾಪ್ರಭುತ್ವಕ್ಕೆ ಸವಾಲು’

‘ಸರ್ವಾಧಿಕಾರಿ ಪ್ರವೃತ್ತಿಯು ಸಮಾನತೆಗೆ ಮತ್ತು ಸಾಮಾನ್ಯ ಜನರ ಏಳಿಗೆಯ ಹಿತಕ್ಕೆ ವಿರುದ್ಧವಾಗಿ ಆಡಳಿತ ನೀಡುತ್ತದೆ. ಇದು ಮನುಕುಲದ ಹಿತವನ್ನು ನಾಶ ಮಾಡುತ್ತದೆ ಎಂದು 2007ರಲ್ಲಿ ತಿಳಿಸಿದ ವಿಶ್ವಸಂಸ್ಥೆಯು ಸೆ.15 ಅನ್ನು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಎಂದು ಘೋಷಿಸಿತು’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದರು. ‘ಭಾರತವು ಬುದ್ಧ ದೇಶ. ಶಾಂತಿ, ಸೌಹಾರ್ದ, ಸಹಿಷ್ಣುತೆ, ಸಹಬಾಳ್ವೆಯ ಚರಿತ್ರೆಯನ್ನು ನಿರ್ಮಾಣ ಮಾಡಿದ ದೇಶ. ಈಗ ಶಾಂತಿ, ಸೌಹಾರ್ದ, ಸಹಬಾಳ್ವೆ, ಸಹಿಷ್ಣುತೆಗೆ ಧಕ್ಕೆ ತರುವವರು, ಮತಾಂಧರು, ಸರ್ವಾಧಿಕಾರಿ ನಾಯಕತ್ವವನ್ನು ಆರಾಧಿಸುವವರಿಂದ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಸವಾಲು ಎದುರಾಗಿದೆ’ ಎಂದರು.

ಬೈಕ್ ರ‍್ಯಾಲಿ, ವಿವಿಧ ಕಾರ್ಯಕ್ರಮ

‘ನನ್ನ ಮತ ನನ್ನ ಹಕ್ಕು’ ಘೋಷವಾಕ್ಯದೊಂದಿಗೆ ರಾಜ್ಯದಾದ್ಯಂತ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಆಚರಿಸಲಾಯಿತು. ಜಿಲ್ಲಾ ಮಟ್ಟದಲ್ಲಿ ಸೈಕಲ್ ರ‍್ಯಾಲಿ, ರಾಜ್ಯಮಟ್ಟದಲ್ಲಿ ಬೈಕ್ ರ‍್ಯಾಲಿ, ಶಾಲಾ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆ, ಛಾಯಾಗ್ರಹಣ ಸ್ಪರ್ಧೆ, ಭಾಷಣ ಸ್ಪರ್ಧೆ ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬೈಕ್ ಚಲಾಯಿಸಿ ಬೈಕ್ ರ‍್ಯಾಲಿಗೆ ಹುರುಪು ತುಂಬಿದರು. ವಿಧಾನಸೌಧದಿಂದ ಆರಂಭಗೊಂಡ ರ‍್ಯಾಲಿ ನಗರದಲ್ಲಿ ಸುತ್ತು ಹಾಕಿ ಮತ್ತೆ ವಿಧಾನಸೌಧದಲ್ಲಿಯೇ ಕೊನೆಗೊಂಡಿತು. ಕ್ರೈಸ್ ವತಿಯಿಂದ ಪ್ರತಿಭಾ ಪುರಸ್ಕಾರ ನಡೆಯಿತು. ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದ ಪರಿಶಿಷ್ಟ ಜಾತಿಯ ನಿರುದ್ಯೋಗಿಗಳಿಗೆ ಎಲೆಕ್ಟ್ರಾನಿಕ್ ಮತ್ತು ಡಿಜಿಟಲ್ ಉದ್ಯಮ ಸ್ಥಾಪಿಸಲು ಸಹಾಯಧನ ವಿತರಿಸಲಾಯಿತು.

ಸುದ್ದಿ 2 ನಿಮಿಷ

‘ಯುಕೆಪಿ–3: ಪರಿಹಾರ ನೀಡಿ: ಇಲ್ಲವೇ ಪ್ರತ್ಯೇಕ ರಾಜ್ಯ ಕೊಡಿ’

ಬೆಂಗಳೂರು: ಕೃಷ್ಣಾ ಮೇಲ್ದಂಡೆ ಯೋಜನೆಯ (ಯುಕೆಪಿ–3) ಮೂರನೇ ಹಂತದ ಕಾಮಗಾರಿಗೆ ಭೂಸ್ವಾಧೀನ ಪಡಿಸಿಕೊಂಡ ಕೃಷಿ ಜಮೀನಿಗೆ ಕೂಡಲೇ ಪರಿಹಾರ ನೀಡಬೇಕು. ಇಲ್ಲದಿದ್ದರೆ ಉತ್ತರ ಕರ್ನಾಟಕದ 15 ಜಿಲ್ಲೆಗಳನ್ನು ಪ್ರತ್ಯೇಕ ರಾಜ್ಯವನ್ನಾಗಿ ಘೋಷಿಸಬೇಕು ಎಂದು ಉತ್ತರ ಕರ್ನಾಟಕದ ವಿವಿಧ ಸಂಘಟನೆಗಳು ಆಗ್ರಹಿಸಿವೆ.

ಉತ್ತರ ಕರ್ನಾಟಕ ಮುಳುಗಡೆ ಮತ್ತು ಪ್ರವಾಹ ಸಂತ್ರಸ್ತರ ಹಿತರಕ್ಷಣಾ ಸಮಿತಿ, ರೈತರ ಹಕ್ಕುಗಳ ಹೋರಾಟ ಸಮಿತಿ, ಉತ್ತರ ಕರ್ನಾಟಕ ಹೋರಾಟ ಸಮಿತಿಯ ಪದಾಧಿಕಾರಿಗಳು ಜಂಟಿ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾತನಾಡಿದರು.

ಹಿತರಕ್ಷಣಾ ಸಮಿತಿಯ ಅಧ್ಯಕ್ಷ ನಾಗೇಶ ಗೋಲಶೆಟ್ಟಿ, ‘ಸಂತ್ರಸ್ತರಿಗೆ ಪರಿಹಾರ ನೀಡದೇ ಅನ್ಯಾಯ ಮಾಡಲಾಗಿದೆ. ಈಗ ಸಂತ್ರಸ್ತರಿಗೆ ನ್ಯಾಯವಾದ ಬೆಲೆ ನೀಡಿ ಕಾಮಗಾರಿ ಪ್ರಾರಂಭಿಸಬೇಕು, ಇಲ್ಲದಿದ್ದರೆ ಯೋಜನೆಯನ್ನೇ ಕೈಬಿಡಬೇಕು. ಇತ್ತೀಚೆಗೆ ಕೃಷ್ಣಾ ನದಿಗೆ ಬಾಗಿನ ಅರ್ಪಿಸಲು ಬಂದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ‘ಒಂದು ವಾರದಲ್ಲಿಯೇ ದರ ನಿಗದಿ ಮಾಡುತ್ತೇವೆ’ ಎಂದು ಭರವಸೆ ನೀಡಿದ್ದರು. ಇದುವರೆಗೂ ಅದು ಭರವಸೆ ಆಗಿಯೇ ಉಳಿದಿದೆ’ ಎಂದು ದೂರಿದರು. ‘ಒಣ ಬೇಸಾಯ ಮಾಡುವ ಪ್ರತಿ ಎಕರೆಗೆ ₹40 ಲಕ್ಷ ಹಾಗೂ ನೀರಾವರಿ ಜಮೀನಿಗೆ ₹50 ಲಕ್ಷ ಪರಿಹಾರ ನಿಗದಿಪಡಿಸಿ, ಕಾಲಮಿತಿಯಲ್ಲಿ ಯೋಜನೆ ಪೂರ್ಣಗೊಳಿಸಬೇಕು. ವಿಳಂಬವಾದರೆ ನಿಗದಿಪಡಿಸಿದ ದರಕ್ಕೆ ಪ್ರತಿವರ್ಷ ಶೇಕಡ 10ರಷ್ಟು ಹೆಚ್ಚುವರಿ ಮೊತ್ತ ನೀಡಬೇಕು’ ಎಂದು ಆಗ್ರಹಿಸಿದರು.

ಉತ್ತರ ಕರ್ನಾಟಕ ಸಂಘ–ಸಂಸ್ಥೆಗಳ ಮಹಾ ಸಂಸ್ಥೆಯ ಅಧ್ಯಕ್ಷ ಶಿವಕುಮಾರ ಮೇಟಿ ಮಾತನಾಡಿ, ‘ರಾಜ್ಯ ಸರ್ಕಾರ ಉತ್ತರ ಕರ್ನಾಟಕದ ಅಭಿವೃದ್ಧಿಯನ್ನು ಕಡೆಗಣಿಸುತ್ತಿದೆ. ಆದ್ದರಿಂದ ಪ್ರತ್ಯೇಕ ರಾಜ್ಯವನ್ನು ಘೋಷಿಸುವಂತೆ ಜನಾಭಿಪ್ರಾಯ ಸಂಗ್ರಹಿಸಲಾಗುತ್ತಿದೆ. ಇದಕ್ಕೆ ಹಲವು ಸ್ವಾಮೀಜಿಗಳು ಸೇರಿದಂತೆ ಸಾಹಿತಿಗಳು ಬೆಂಬಲಿಸಿದ್ದಾರೆ’ ಎಂದು ತಿಳಿಸಿದರು.



‘ಆಲಮಟ್ಟಿ ಸಂತ್ರಸ್ತರಿಗೆ ಪರಿಹಾರ ನೀಡಿ’

‘ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಭೂಸ್ವಾಧೀನ ಪಡಿಸಿಕೊಂಡ ಜಮೀನಿಗೆ ರಾಜ್ಯ ಸರ್ಕಾರ ಕೂಡಲೇ ಪರಿಹಾರ ನೀಡಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ ಆಗ್ರಹಿಸಿದ್ದಾರೆ.

‘2023ರ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕರು ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸುವ ಭರವಸೆ ನೀಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರತಿವರ್ಷ ₹40 ಸಾವಿರ ಕೋಟಿಯಂತೆ ಐದು ವರ್ಷಗಳಲ್ಲಿ ₹2 ಲಕ್ಷ ಕೋಟಿ ನೀಡುವ ಮೂಲಕ ಯೋಜನೆ ಪೂರ್ಣಗೊಳಿಸುತ್ತೇವೆ ಎಂದಿದ್ದರು. ಆದರೆ, ಇದುವರೆಗೆ ಯಾವುದೇ ಕಾಮಗಾರಿಯನ್ನು ಕೈಗೊಂಡಿಲ್ಲ’ ಎಂದು ಆರೋಪಿಸಿದ್ದಾರೆ.

ಫಿರಂಗಿ ಮೊರೆತ

ಪ್ರಜಾವಾಣಿ ಚಿತ್ರ
ಅನೂಪ್ ರಾಘ ಟಿ.



ಜಂಬೂಸವಾರಿ ವೇಳೆ ‘ಅಭಿಮನ್ಯು’ ನೇತೃತ್ವದ ಗಜಪಡೆ ಹಾಗೂ ಅಶ್ವಪಡೆ ಬೆಚ್ಚದಂತೆ ಮಾಡಲು ಮೈಸೂರಿನ ದಸರಾ ವಸ್ತುಪ್ರದರ್ಶನ ಮೈದಾನದ ವಾಹನ ನಿಲ್ದಾಣದ ಅಂಗಳದಲ್ಲಿ ಸೋಮವಾರ ಕುಶಾಲತೋಪು ತಾಲೀಮನ್ನು ಪೊಲೀಸ್ ಸಿಬ್ಬಂದಿ ನಡೆಸಿದಾಗ ಫಿರಂಗಿಗಳಿಂದ ಹೊಮ್ಮಿದ ಬೆಂಕಿಯುಂಡೆ..

‘ದೇಗುಲ ಆವರಣದಲ್ಲಿ ತರಗತಿ’

ಪ್ರಜಾವಾಣಿ ವಾರ್ತೆ

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಕೊಡಮನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಟ್ಟಡದ ಚಾವಣಿ ಸೋರುತ್ತಿದ್ದು, ವಿದ್ಯಾ-ರ್ಥಿಗಳಿಗಾಗಿ ಈಗ ಗ್ರಾಮದ ಆಂಜನೇಯ ದೇಗುಲ ಆವರಣದಲ್ಲಿ ತರಗತಿಗಳು ನಡೆಯತ್ತಿವೆ.

ಶಾಲೆಯಲ್ಲಿ 1ರಿಂದ 7ನೇ ತರಗತಿವರೆಗೆ ಇದ್ದು, 107 ವಿದ್ಯಾರ್ಥಿಗಳಿದ್ದಾರೆ. ಮೂರು ಕೋಣೆಗಳಿದ್ದು, ಎರಡು ಕೋಣೆ ಶಿಥಿಲಗೊಂಡಿವೆ. ಮಳೆ ಬಂದರೆ ಸೋರುತ್ತಿವೆ.

‘ಮಕ್ಕಳಿಗೆ ತೊಂದರೆಯಾಗಬಾರದು ಎಂಬ ಕಾಳಜಿಯಿಂದ ಮಳೆ ಬಂದಾಗ ದೇಗುಲದ ಆವರಣದಲ್ಲಿ ಪಾಠ ಮಾಡುತ್ತಿದ್ದೇವೆ’ ಎನ್ನುತ್ತಾರೆ ಶಾಲಾ ಮುಖ್ಯಶಿಕ್ಷಕ ಬಸವರಾಜ.

‘ಹೊಸ ಕಟ್ಟಡ ಮಂಜೂರಾತಿ ಆಗಿದೆ. ಕಟ್ಟಡ ಆರಂಭಿಸಿಲ್ಲ. ಐದು ಕೋಣೆ ಇದ್ದವು. ಈಗಾಗಲೇ ಎರಡು ಕೋಣೆ ನೆಲಸಮ ಮಾಡಲಾಗಿದೆ. ಇನ್ನುಳಿದ ಮೂರಲ್ಲಿ ಎರಡು ಕೋಣೆ ಸೋರುತ್ತಿವೆ. ಚೆನ್ನಾಗಿರುವ ಒಂದು ಕೋಣೆ ಕಚೇರಿ, ಶಿಕ್ಷಕರು ಕುಳಿತುಕೊಳ್ಳಲು ಬಳಕೆಯಾ-ಗುತ್ತಿದೆ. ಬಿಸಿಯೂಟದ ಪ್ರತ್ಯೇಕ ಕೋಣೆ ಇದೆ’ ಎಂದು ಮಾಹಿತಿ ನೀಡಿದರು.

‘ಹೊಸ ಕಟ್ಟಡ ನಿರ್ಮಿಸಲು ಆರು ತಿಂಗಳ ಹಿಂದೆ ಕೋಣೆಗಳನ್ನು ಕೆಡವಲಾಗಿದೆ. ಹೊಸ ಕಟ್ಟಡವೂ ಇಲ್ಲ. ಸೋರುತ್ತಿರುವ ಕೋಣೆಗಳನ್ನೂ ದುರಸ್ತಿ ಮಾಡುತ್ತಿಲ್ಲ. ಡಿಡಿಪಿಐ ಅವರು ತಕ್ಷಣ ಶಾಲೆಗೆ ಭೇಟಿ ನೀಡಿ ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದು ದಲಿತ ಸಂಘಟನೆಯ ಮುಖಂಡ ಶಿವಪುತ್ರಪ್ಪ ಜವಳಿ, ಹೊನ್ನಪ್ಪ ಗಂಗನಾಳ ಒತ್ತಾಯಿಸಿದ್ದಾರೆ.



ಶಹಾಪುರ ತಾಲ್ಲೂಕಿನ ಕೊಡಮನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ಆಂಜನೇಯ ದೇವಸ್ಥಾನದಲ್ಲಿ ಅಭ್ಯಾಸ ಮಾಡಿದರು

ಹೆಚ್ಚು ಮಳೆ ಬಂದಾಗ ಮಕ್ಕಳು ದೇಗುಲದಲ್ಲಿ ಅಭ್ಯಾಸ ಮಾಡುತ್ತಾರೆ. ತಕ್ಷಣ ಕಟ್ಟಡ ದುರಸ್ತಿಗೆ ಗುತ್ತಿಗೆದಾರನಿಗೆ ಸೂಚಿಸಲಾಗಿದೆ. ಎರಡು ದಿನದಲ್ಲಿ ಕೆಲಸ ಆರಂಭಿಸುತ್ತಾರೆ.
ಈರಣ್ಣ ಯಳವಾರ, ಸಿಆರ್‌ಪಿ ಶಹಾಪುರ

‘ವಿಶ್ವ ಬ್ರಾಹ್ಮಣ ಇಲ್ಲವೇ ವಿಶ್ವಕರ್ಮ ಎಂದು ನಮೂದಿಸಿ’

ಬೆಂಗಳೂರು: ಸಮೀಕ್ಷೆ ವೇಳೆ ಸಮುದಾಯದ ಎಲ್ಲ ಉಪಪಂಗಡದವರು ವಿಶ್ವಬ್ರಾಹ್ಮಣ ಅಥವಾ ವಿಶ್ವಕರ್ಮ ಎಂದು ನಮೂದಿಸುವಂತೆ ಕರ್ನಾಟಕ ರಾಜ್ಯ ವಿಶ್ವಬ್ರಾಹ್ಮಣ ಪೀಠಾಧಿಪತಿಗಳ ಅಭಿವೃದ್ಧಿ ಸಂಘ ಸಲಹೆ ನೀಡಿದೆ.

ವಿಶ್ವಕರ್ಮ ಸಮುದಾಯದಡಿ 41 ಉಪಪಂಗಡಗಳಿದ್ದು, 40 ಲಕ್ಷ ಜನಸಂಖ್ಯೆ ಇರುವ ಅಂದಾಜಿದೆ. ಆದರೆ, ಈ ಹಿಂದೆ ನಡೆದ ಸಮೀಕ್ಷೆಯ ವರದಿಯಲ್ಲಿ ಸಮುದಾಯದ ಜನಸಂಖ್ಯೆ 8 ಲಕ್ಷ ಎಂದು ತಿಳಿಸಲಾಗಿದೆ. ಗೊಂದಲ ಉಂಟಾಗಿ ಸಮುದಾಯಕ್ಕೆ ಸಿಗಬಹುದಾದ ಸೌಲಭ್ಯ ತಪ್ಪದಿರಲೆಂದು ಉಪಪಂಗಡದ ಬದಲು ಎರಡರಲ್ಲಿ ಒಂದು ಹೆಸರನ್ನು ಕಡ್ಡಾಯವಾಗಿ ನಮೂದಿಸುವಂತೆ ತಿಳಿಸಲಾಗುತ್ತಿದೆ ಎಂದು ಹಾಸನ ಜಿಲ್ಲೆ ಅರೇಮಾದನಹಳ್ಳಿ ವಿಶ್ವ ಬ್ರಾಹ್ಮಣ ಮಹಾ ಸಂಸ್ಥಾನ ಮಠದ ಶಿವಸುಜ್ಞಾನತೀರ್ಥ ಸ್ವಾಮೀಜಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಸಮುದಾಯದಲ್ಲಿ ಪತ್ತಾರ, ಬಡಿಗೇರ, ಕಮ್ಮಾರ, ಆಚಾರಿ, ಆಚಾರ್ಯ ಸಹಿತ ನಾನಾ ಉಪಪಂಗಡಗಳಿಂದ ಆಯಾ ಪ್ರದೇಶಗಳಲ್ಲಿ ಗುರುತಿಸಲಾಗುತ್ತದೆ. ವಿಶ್ವಬ್ರಾಹ್ಮಣ ಅಥವಾ ವಿಶ್ವಕರ್ಮ ಎನ್ನುವ ಹೆಸರಿಂದಲೇ ಸಮುದಾಯವನ್ನು ಮೊದಲಿನಿಂದಲೂ ಗುರುತಿಸುವುದರಿಂದ ಅದನ್ನೇ ನಮೂದಿಸಿ, ಇದರಿಂದ ನಿಖರ ಜನಸಂಖ್ಯೆ ತಿಳಿಯಲಿದೆ’ ಎಂದರು.

ಜಾತಿ, ಉಪಜಾತಿಗಳ ಪುನರಾವರ್ತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗವು ಪ್ರಕಟಿಸಿರುವ ಕೈಪಿಡಿಯಲ್ಲಿ ವೀರಶೈವ ಲಿಂಗಾಯತ ಸಮುದಾಯಗಳ 135 ಜಾತಿ, ಉಪಜಾತಿಗಳಿವೆ. ಹಲವು ಜಾತಿ, ಉಪಜಾತಿಗಳು ಪುನರಾವರ್ತಿತ ಆಗಿವೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಹೇಳಿದೆ.

ಕಾಂತರಾಜ ಆಯೋಗವು 79 ಜಾತಿ, ಉಪಜಾತಿಗಳನ್ನು ಉಲ್ಲೇಖಿಸಿತ್ತು. ಸಮೀಕ್ಷೆ ನಂತರ 95 ಜಾತಿ, ಉಪಜಾತಿಗಳು ದಾಖಲಾಗಿದ್ದವು. ಆದರೆ, ಆಯೋಗವು 84 ಜಾತಿ, ಉಪಜಾತಿಗಳನ್ನು ಪ್ರಕಟಿಸಿತ್ತು. 32 ಜಾತಿ, ಉಪಜಾತಿಗಳನ್ನು ಸೇರಿಸುವಂತೆ ಮಹಾಸಭಾ ಮನವಿ ಮಾಡಿತ್ತು. ಈಗ ಹೊಸಪಟ್ಟಿಯಲ್ಲಿ 135ಕ್ಕೇರಿದೆ. ಯಾವ ಮಾನದಂಡದ ಆಧಾರದಲ್ಲಿ ಸೇರಿಸಲಾಗಿದೆ ಎಂಬುದನ್ನು ಆಯೋಗ ಸ್ಪಷ್ಟಪಡಿಸಬೇಕು ಎಂದು ವೀರಶೈವ ಮಹಾಸಭಾವು ಶಾಶ್ವತ ಹಿಂದುಳಿದ ವರ್ಗಗಳ ಆಯೋಗಕ್ಕೆ ಪತ್ರ ಬರೆದಿದೆ.

ಹಲವು ಜಾತಿ, ಉಪಜಾತಿಗಳು ಎರಡು ಅಥವಾ ಅದಕ್ಕಿಂತ ಹೆಚ್ಚು ಬಾರಿ ಪುನರಾವರ್ತಿತವಾಗಿವೆ. ಹೀಗಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಆಯೋಗವನ್ನು ಕೋರಲಾಗಿತ್ತು. ಆದರೆ, ಕೋರಿಕೆಗೆ ಯಾವುದೇ ಬೆಲೆ ಸಿಕ್ಕಿಲ್ಲ. ಇದರ ಹಿಂದಿನ ಉದ್ದೇಶವೇನು ಎಂದು ಪತ್ರದಲ್ಲಿ ಪ್ರಶ್ನಿಸಲಾಗಿದೆ.

ವೀರಶೈವ ಲಿಂಗಾಯತ ಸಮಾಜಕ್ಕೆ ಸೇರುವ ಎಲ್ಲ ಸಮು-ದಾಯಗಳನ್ನು ಒಂದೇ ಕಡೆ ಸೇರಿಸಿ ಹಿಂದಿನ ಆಯೋಗ ವರದಿ ನೀಡಿತ್ತು. ಅದರಂತೆ ಈ ಬಾರಿಯೂ ಒಂದೇ ಕಡೆ ಸೇರಿಸುವಂತೆ ಮಹಾಸಭಾದಿಂದ ಮನವಿ ಮಾಡಲಾಗಿತ್ತು. ಈ ಮನವಿಗೆ ಯಾವುದೇ ಬೆಲೆ ಸಿಕ್ಕಿಲ್ಲ. ಕೈಪಿಡಿ ಬಿಡುಗಡೆಗೆ ಮುನ್ನಾ ಕರಡು ಕೈಪಿಡಿ ತಯಾರಿಸಿ ಸಾರ್ವಜನಿಕರಿಗೆ ನೀಡಿ ತಪ್ಪುಗಳಿದ್ದರೆ ಸರಿಪಡಿಸಲು ಅವಕಾಶ ಕೋರಲಾಗಿತ್ತು. ಅದಕ್ಕೆ ಆಯೋಗ ಪ್ರತಿಕ್ರಿಯಿಸಿಲ್ಲ ಎಂದು ಮಹಾಸಭಾದ ಕಾರ್ಯದರ್ಶಿ ಎಚ್.ಎಂ. ರೇಣುಕ ಪ್ರಸನ್ನ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಮಹಾಸಭಾ ಸ್ಪಷ್ಟನೆ ನೀಡಲಿ: ಜಾಮದಾರ

ಹುಬ್ಬಳ್ಳಿಯಲ್ಲಿ ಸೆ.19ರಂದು ನಡೆಯಲಿರುವ ಏಕತಾ ಸಮಾವೇಶದಲ್ಲಿ ಪಂಚಾಚಾರ್ಯರು, ಅವರ ಪರ ಮಠಾಧೀಶರು, ವೀರಶೈವ ಮಹಾಸಭಾದವರು ಧರ್ಮದ ಕುರಿತು ಸ್ಪಷ್ಟನೆ ನೀಡಬೇಕು ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಎಸ್.ಎಂ. ಜಾಮದಾರ ಆಗ್ರಹಿಸಿದ್ದಾರೆ.

‘ಲಿಂಗಾಯತರು ಧರ್ಮದ ಕಾಲಂನಲ್ಲಿ ಹಿಂದೂ ಎಂದು ಬರೆಸಬಾರದು’ ಎಂದು ವೀರಶೈವ ಮಹಾಸಭಾ ಕರೆ ಕೊಟ್ಟಿದೆ. ಎಲ್ಲ ವೀರಶೈವರು ಮತ್ತು ಲಿಂಗಾಯತರು ಹಿಂದೂಗಳು ಎಂದು ಈಗಲೂ ಪಂಚಾಚಾರ್ಯರು ಹೇಳುತ್ತಿದ್ದಾರೆ. ವೀರಶೈವ ಮಹಾಸಭೆಯ ನಿರ್ಣಯವನ್ನು ಈ ಪಂಚಾಚಾರ್ಯರು ಒಪ್ಪುತ್ತಾರೆಯೇ? ಅಥವಾ ಪಂಚಾಚಾರ್ಯರ ನಿರ್ಣಯವನ್ನು ವೀರಶೈವ ಮಹಾಸಭೆ ಒಪ್ಪುತ್ತದೆಯೇ ಎಂಬುದನ್ನು ಮೊದಲು ಸ್ಪಷ್ಟಪಡಿಸಬೇಕು ಎಂದಿದ್ದಾರೆ.

ವಿಮಾನದ ನಿರ್ಗಮನದ ಬಾಗಿಲು ತೆರೆದ ಪ್ರಯಾಣಿಕ, ದೂರು

ಹುಬ್ಬಳ್ಳಿ: ವಿಮಾನದ ತುರ್ತು ಸಂದರ್ಭದ ನಿರ್ಗಮನ ಬಾಗಿಲು ತೆರೆದು, ಸಹಪ್ರಯಾಣಿಕರ ಸುರಕ್ಷತೆಗೆ ಅಪಾಯ ಉಂಟುಮಾಡಿದ ಆರೋಪದ ಮೇಲೆ ಬೆಳಗಾವಿಯ ನಿರಂಜನ ಕರಗಿ ವಿರುದ್ಧ ಇಲ್ಲಿನ ಗೋಕುಲ ರಸ್ತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



‘ಸೆ.12ರಂದು ನಿರಂಜನ ಅವರು ಹುಬ್ಬಳ್ಳಿಯಿಂದ ಪುಣೆಗೆ ಹೊರಡುವ ಇಂಡಿಗೋ ವಿಮಾನ ಹತ್ತಿದ್ದರು. ಆಸನ ಸಂಖ್ಯೆ 2 ಎಫ್‌ನಲ್ಲಿ ಕೂತಿದ್ದ ಅವರು, ಅಲ್ಲೇ ಪಕ್ಕದಲ್ಲಿದ್ದ ತುರ್ತು ನಿರ್ಗಮನ ಬಾಗಿಲನ್ನು ತೆರೆದಿದ್ದರು. ಸಹಪ್ರಯಾಣಿ-ಕರ ಸುರಕ್ಷತೆಗೆ ಅಪಾಯ ಉಂಟು ಮಾಡಿದ್ದರು’ ಎಂದು ವಿಮಾನ ನಿಲ್ದಾಣದ ಸಿಬ್ಬಂದಿ ದೂರಿನಲ್ಲಿ ತಿಳಿಸಿದ್ದಾರೆ.

ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಭೆ

ಎಸ್‌ಟಿ ಪಟ್ಟಿಗೆ ಕುರುಬರು: ಇಂದು ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಗಳ (ಎಸ್‌ಟಿ) ಪಟ್ಟಿಗೆ ಸೇರಿಸುವ ಕುರಿತು ಚರ್ಚಿಸಲು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮಂಗಳವಾರ (ಸೆ. 16) ಮಹತ್ವದ ಸಭೆ ನಡೆಯಲಿದೆ.

ಅಗತ್ಯ ಮಾಹಿತಿ ಮತ್ತು ದಾಖಲೆಗಳ ಸಹಿತ ಸಭೆಗೆ ಹಾಜರಾಗುವಂತೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ನಿರ್ದೇಶಕ, ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಮತ್ತು ಎಸ್‌ಸಿಎಸ್‌ಪಿ, ಟಿಎಸ್‌ಪಿ ನೋಡಲ್ ಏಜೆನ್ಸಿಯ ಸಲಹೆಗಾರ ಅವರಿಗೆ ಸೂಚನೆ ನೀಡಲಾಗಿದೆ.

ಕುರುಬ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸುವ ಕುರಿತು ಚರ್ಚಿಸುವ ಜೊತೆಗೆ, ಬೀದರ್, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಕುರುಬ ಸಮುದಾಯವು ಕರ್ನಾಟಕ ರಾಜ್ಯದಲ್ಲಿರುವ ಗೊಂಡ ಸಮುದಾಯದ ಜೊತೆ ಹೊಂದಿರುವ ಸಾಮ್ಯತೆ ಬಗ್ಗೆಯೂ ಚರ್ಚೆ ನಡೆಯಲಿದೆ. ಈ ಸಾಮ್ಯತೆಯ ಕಾರಣಕ್ಕೆ ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸೇರ್ಪಡೆ ಮಾಡುವ ಬಗ್ಗೆ ಚರ್ಚೆ ನಡೆಯಲಿದೆ ಎಂದು ಗೊತ್ತಾಗಿದೆ.


ಸದ್ಯ ಕುರುಬ ಸಮುದಾಯ ಹಿಂದುಳಿದ ವರ್ಗಗಳ ‘ಪ್ರವರ್ಗ 2 ಎ’ಯಲ್ಲಿದ್ದು, ಶೇ 15ರಷ್ಟು ಮೀಸಲಾತಿ ಸೌಲಭ್ಯ ಪಡೆಯುತ್ತಿದೆ. ಈ ಪ್ರವರ್ಗದಲ್ಲಿ ಕುರುಬ ಸಮುದಾಯದ ಜೊತೆ, ವಿಶ್ವಕರ್ಮ, ಕುಂಬಾರ, ದೇವಾಂಗ, ನೇಕಾರ, ಮಡಿವಾಳ, ಅಗಸ, ತಿಗಳ, ಪಟ್ಟೇಗಾರ ಮುಂತಾದ 102 ಜಾತಿಗಳಿವೆ. ಎಚ್. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ (ಜಾತಿವಾರು ಸಮೀಕ್ಷೆ) ವರದಿಯಲ್ಲಿ ಕುರುಬ ಸಮುದಾಯವನ್ನು ‘ಅತ್ಯಂತ ಹಿಂದುಳಿದ’ ಸಮುದಾಯ ಎಂದು ಮರುವರ್ಗೀಕರಣ ಮಾಡಿ ‘ಪ್ರವರ್ಗ 1ಬಿ’ ಎಂದು ಗುರುತಿಸಿತ್ತು. ಆದರೆ, 10 ವರ್ಷದ ಹಿಂದೆ ನಡೆದಿದ್ದ ಸಮೀಕ್ಷೆಯ ದತ್ತಾಂಶವು ಮಾನ್ಯತೆ ಕಳೆದುಕೊಂಡಿರುವುದರಿಂದ ಆ ವರದಿಯನ್ನು ಕೈಬಿಟ್ಟು ಹೊಸದಾಗಿ ಸಮೀಕ್ಷೆ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಇದೇ 22ರಿಂದ ಹೊಸತಾಗಿ ಸಮೀಕ್ಷೆ ನಡೆಯಲಿದೆ.

2023ರಲ್ಲೇ ಶಿಫಾರಸು: ಕುರುಬ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸುವಂತೆ 2023ರ ಜುಲೈನಲ್ಲಿ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಿದೆ. ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಈ ಶಿಫಾರಸು ಮಾಡಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ. ಮಣಿವಣ್ಣನ್ ಅವರು ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯಕ್ಕೆ ಬರೆದ ಪತ್ರದಲ್ಲಿ ತಿಳಿಸಿದ್ದರು. ಮೈಸೂರಿನ ಬುಡಕಟ್ಟು ಸಂಶೋಧನಾ ಸಂಸ್ಥೆ ನಡೆಸಿದ ಕುಲಶಾಸ್ತ್ರೀಯ ಅಧ್ಯಯನದ ವರದಿಯ ಶಿಫಾರಸನ್ನೂ ಈ ಪತ್ರದ ಜೊತೆ ಲಗತ್ತಿಸಲಾಗಿತ್ತು.

ಸಿದ್ದರಾಮಯ್ಯ ಹೊಸ ಜಾತಿಗಳ ಜನಕ: ಆರ್. ಅಶೋಕ

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಮತಾಂತರದ ರಾಯಭಾರಿ. ಯಾರೂ ಯೋಚನೆ ಮಾಡದ ರೀತಿಯಲ್ಲಿ ಹೊಸ ಹೊಸ ಜಾತಿಗಳನ್ನು ಸೃಷ್ಟಿಸುತ್ತಿದ್ದಾರೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈವರೆಗೆ ಅಧಿಕೃತ ಜಾತಿ ಪಟ್ಟಿಯಲ್ಲಿ ಇಲ್ಲದ ಜಾತಿಗಳಿಗೆ ಜನ್ಮ ನೀಡಿದ್ದಾರೆ. ಹೀಗಾಗಿ ಜಾತಿ ಸಮೀಕ್ಷೆ ರದ್ದಾಗುವ ಸಾಧ್ಯತೆ ಹೆಚ್ಚು’ ಎಂದು ಹೇಳಿದರು.



‘ಹಿಂದೂಗಳಲ್ಲಿ ತಪ್ಪು ಇದೆ ಎಂದಿದ್ದಾರೆ. ಹಾಗಿದ್ದರೆ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಲ್ಲಿ ತಪ್ಪು– ತಾರತಮ್ಯಗಳು ಇಲ್ಲವೆ? ಅವುಗಳ ಕುರಿತೂ ಮಾತನಾಡಲಿ. ಇವರಿಗೆ ಹಿಂದೂಗಳ ಮತ ಮಾತ್ರ ಬೇಕು. ಗೆದ್ದ ನಂತರ ಹಿಂದೂಗಳನ್ನು ತುಳಿಯುವ ಕೆಲಸ ಮಾಡುತ್ತಾರೆ’ ಎಂದರು.

‘ದಸರಾ ಹಬ್ಬವನ್ನು ನಾಡ ಹಬ್ಬ, ಹಿಂದೂಗಳ ಹಬ್ಬ ಎನ್ನುತ್ತಾರೆ. ಅದೇ ರೀತಿ ಮುಸ್ಲಿಂ ಹಬ್ಬಗಳನ್ನು ಕೂಡ ನಾಡ ಹಬ್ಬ ಎಂದು ಮಾಡಲಿ. ಮುಸ್ಲಿಂ ಹಬ್ಬಗಳನ್ನು ಹಿಂದೂಗಳ ಕೈಯಲ್ಲಿ ಉದ್ಘಾಟನೆ ಮಾಡಿಸಲಿ’ ಎಂದು ಅವರು ವ್ಯಂಗ್ಯವಾಡಿದರು.

ಮಸೀದಿ ಮುಂದೆ ಗಣೇಶ ಮೆರವಣಿಗೆ ಹೋಗಬಾರದು ಎಂಬಂತೆ ನಿಯಮ ಮಾಡಿದ್ದಾರೆ. ಕಾಂಗ್ರೆಸ್ ಸರ್ಕಾರದಿಂದಾಗಿಯೇ ಹಿಂದೂ–ಮುಸ್ಲಿಮರ ನಡುವೆ ಒಡಕು ಮೂಡಿದೆ ಎಂದು ಅಶೋಕ ಟೀಕಿಸಿದರು.

ಸರ್ಕಾರ ನಿರ್ಲಕ್ಷಿಸಿದರೆ ಉಗ್ರ ಹೋರಾಟ: ಪಿ.ರಾಜೀವ್

ಬೆಂಗಳೂರು: ‘ಒಳಮೀಸಲಾತಿ ವಿಚಾರದಲ್ಲಿ ಬಂಜಾರ, ಭೋವಿ, ಕೊರಚ, ಕೊರಮ ಸಮುದಾಯಗಳು ನೀಡಿರುವ ಒಂದು ವಾರದ ಗಡುವನ್ನು ಸರ್ಕಾರ ಹಗುರವಾಗಿ ಪರಿಣಿಸಬಾರದು. ಬುಧವಾರ ಸಂಜೆ ಒಳಗೆ ತೀರ್ಮಾನ ಪ್ರಕಟಿಸದೇ ಇದ್ದರೆ, ಮುಂದೆ ಹೋರಾಟ ನಡೆಸುವ ಬಗ್ಗೆ ನಮ್ಮ ನಿರ್ಧಾರ ಪ್ರಕಟಿಸುತ್ತೇವೆ’ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಹೇಳಿದರು.



ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸರ್ಕಾರದ ಬಳಿ ಎರಡು ದಿನಗಳಿವೆ. ಇಷ್ಟರಲ್ಲೇ ನಮ್ಮನ್ನು ಕರೆದು ಮಾತನಾಡಬೇಕಿತ್ತು. ಬೇಡಿಕೆ ಮರು ಪರಿಶೀಲಿಸುವ ಭರವಸೆ ನೀಡಬೇಕಿತ್ತು’ ಎಂದರು. ‘ಬಂಜಾರ, ಭೋವಿ, ಕೊರಚ, ಕೊರಮ ಸಮುದಾಯಗಳನ್ನು ನಿರ್ಲಕ್ಷಿಸಿರುವುದಕ್ಕೆ ಸರ್ಕಾರ ಮುಂದೆ ತಕ್ಕ ಬೆಲೆ ತೆರಬೇಕಾಗುತ್ತದೆ. ಸಚಿವ ರಾಮಲಿಂಗಾರೆಡ್ಡಿಯವರಿಗೆ ಕೊಟ್ಟ ಮನವಿ ಪತ್ರಕ್ಕೆ ಹಿಂಬರಹ ಕೊಟ್ಟಿಲ್ಲ. ನಮ್ಮ ಬೇಡಿಕೆ ಬಗ್ಗೆ ಕೈಗೊಂಡ ಕ್ರಮಗಳೇನು? ಸಾವಿರಾರು ಜನರು ಬೀದಿಗಿಳಿದು ಹೋರಾಟ ಮಾಡಿದ ಬಗ್ಗೆ ಸರ್ಕಾರದ ನಿಲುವು ಏನು’ ಎಂದು ಅವರು ಪ್ರಶ್ನಿಸಿದರು.

ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಭೋವಿ, ಬಂಜಾರ, ಕೊರಚ, ಕೊರಮ ಈ ನಾಲ್ಕು ಜಾತಿಗಳಿಗೆ ಶೇ 4.5ರಷ್ಟು ಮೀಸಲಾತಿ ಪ್ರಕಟಿಸಿತ್ತು. 59 ಅಲೆಮಾರಿ ಜಾತಿಗಳಿದ್ದು, ಅವರಿಗೆ ಪ್ರತ್ಯೇಕವಾಗಿ ಶೇ 1ರಷ್ಟು ಮೀಸಲಾತಿ ನೀಡಿತ್ತು. ಇವೆರಡೂ ಪ್ರವರ್ಗಗಳನ್ನು ಒಂದುಗೂಡಿಸಿ ಸುಮಾರು 63 ಜಾತಿಗಳಿಗೆ ಬಿಜೆಪಿ ಸರ್ಕಾರ ಕೊಟ್ಟಷ್ಟೇ ಮೀಸಲಾತಿ ಕೊಟ್ಟಿದ್ದರೂ ಶೇ 5.5 ಮೀಸಲಾತಿ ಸಿಗಬೇಕಿತ್ತು. ಕಾಂಗ್ರೆಸ್ ಸರ್ಕಾರ 2 ಪ್ರವರ್ಗಗಳನ್ನು ಸೇರಿಸಿ ಶೇ 5ಕ್ಕೆ ನಿಗದಿ ಮಾಡಿ, ಶೇ 0.5ರಷ್ಟು ಮೀಸಲಾತಿಯನ್ನು ಕಿತ್ತುಕೊಂಡಿದೆ’ ಎಂದು ಅವರು ಹೇಳಿದರು.

ನಾಗೇಂದ್ರ ನೆಂಟರಿಗೆ ಹಣ ವರ್ಗ

ಒಂದನೇ ಪುಟದಿಂದ...

ಕೆನರಾ ಬ್ಯಾಂಕ್‌ನ ವಿಲ್ಸನ್ ಗಾರ್ಡನ್ ಶಾಖೆಯ ಕೆಜಿಟಿಟಿಐಯ ಖಾತೆಯಿಂದ ₹64 ಲಕ್ಷವನ್ನು ಸದ್ಗುರು ಶಿಕ್ಷಣ ಟ್ರಸ್ಟ್ ಮತ್ತು ಸದ್ಗುರು ಸೊಲ್ಯೂಷನ್ಸ್‌ಗೆ, ನಂತರ ಸ್ಕಿಲ್ ಪಾಯಿಂಟ್ ತರಬೇತಿ ಮತ್ತು ಸ್ಟೈಲ್ ಮಷೀನ್ ಸಂಸ್ಥೆ, ಮೆಸರ್ಸ್ ಧನಲಕ್ಷ್ಮಿ ಎಂಟರ್‌ಪ್ರೈಸಸ್ ಖಾತೆಗೆ ವರ್ಗಾಯಿಸಿರು-ವುದು ತನಿಖೆ ವೇಳೆ ಗೊತ್ತಾಗಿದೆ. ಈ ಮೊತ್ತವು ಬಳಿಕ ಎನ್. ರವಿಕುಮಾರ್ (ನೆಕ್ಕಂಟಿ ನಾಗರಾಜ್ ಅವರ ಸಹೋದರ) ಮತ್ತು ಎನ್. ಯಶವಂತ್ ಚೌಧರಿ (ನೆಕ್ಕಂಟಿ ನಾಗರಾಜ್ ಅವರ ಸೋದರಳಿಯ) ಅವರಿಗೆ ತಲುಪಿರುವುದು ಪತ್ತೆಯಾಗಿದೆ.

2024ರ ಫೆಬ್ರವರಿ 21ರಿಂದ ಮೇ 6ರ ನಡುವೆ ನಿಗಮದ ಖಾತೆಯಿಂದ ಅಕ್ರಮವಾಗಿ ಹಣ ವರ್ಗಾವಣೆ ಮೂಲಕ ₹84.63 ಕೋಟಿ ವಂಚನೆ ಮತ್ತು ದುರುಪಯೋಗದ ಬಗ್ಗೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಡಿಜಿಎಂ ದೂರು ನೀಡಿದ್ದರು. ಅದರ ಆಧಾರದ ಮೇಲೆ ಅದೇ ವರ್ಷ ಜೂನ್ 3ರಂದು ಸಿಬಿಐ ಪ್ರಕರಣ ದಾಖಲಿಸಿತ್ತು. ಈ ಪ್ರಕರಣದ ತನಿಖೆಯ ವೇಳೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹಾಗೂ ಕೆಜಿಟಿಟಿಐನ ಖಾತೆಗಳಿಂದಲೂ ನಾಗೇಂದ್ರ ಆಪ್ತರಿಗೆ ಹಣ ವರ್ಗಾವಣೆಯಾಗಿರುವುದು ಪತ್ತೆಯಾಗಿತ್ತು.

ಸಿಬಿಐ ಸಲ್ಲಿಸಿದ ವಸ್ತುಸ್ಥಿತಿ ವರದಿಯ ಆಧಾರದ ಮೇಲೆ, ರಾಜ್ಯದ ಹೈಕೋರ್ಟ್, ವಾಲ್ಮೀಕಿ ಅಭಿವೃದ್ಧಿ ನಿಗಮದ ಮೇಲಿನ ಆರೋಪಗಳ ತನಿಖೆ ನಡೆಸಲು ಸಿಬಿಐಗೆ ಅನುಮತಿ ನೀಡಿತ್ತು.

ಸ್ಪಷ್ಟನೆ ಬಯಸಿದ ಬಂಜಾರ ಸಮುದಾಯದ ಮುಖಂಡರು • ಸಭೆಯಿಂದ ಹೊರನಡೆದ ರುದ್ರಪ್ಪ ಲಮಾಣಿ

ಒಳಮೀಸಲು ಗೊಂದಲ, ಮುಖಂಡರಿಗೆ ತರಾಟೆ

ಪ್ರಜಾವಾಣಿ ವಾರ್ತೆ

ನ್ಯಾಮತಿ (ದಾವಣಗೆರೆ): ತಾಲ್ಲೂಕಿನ ಸೂರ-ಗೊಂಡನಕೊಪ್ಪದ ಭಾಯಾಗಡ್‌ನಲ್ಲಿ ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿ ಭಾನುವಾರ ಏರ್ಪಡಿಸಿದ್ದ ಸರ್ವಸದಸ್ಯರ ವಾರ್ಷಿಕ ಸಭೆ, ಒಳ ಮೀಸಲಾತಿ ಕುರಿತ ವಾಗ್ವಾದದಿಂದಾಗಿ ಅರ್ಧಕ್ಕೆ ಮೊಟಕುಗೊಂಡಿತು.

ವಿಧಾನಸಭೆ ಉಪಸಭಾಧ್ಯಕ್ಷರೂ ಆಗಿರುವ ಸಮಿತಿಯ ಅಧ್ಯಕ್ಷ ರುದ್ರಪ್ಪ ಲಮಾಣಿ ಅಧ್ಯಕ್ಷತೆಯಲ್ಲಿ ಸಭೆ ಏರ್ಪಾಡಾಗಿತ್ತು.

ಸಮುದಾಯದ ಮುಖಂಡರು ಸಭೆ ಆರಂಭದಲ್ಲೇ, ‘ಒಳಮೀಸಲಾತಿ ಜಾರಿಯಿಂದ ನಮಗೆ ಅನ್ಯಾಯವಾಗಿದೆ. ಆದರೂ ನೀವು ಸಮುದಾಯದವರ ಒಪ್ಪಿಗೆ ಪಡೆಯದೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಭಿನಂದಿಸಿ ಸನ್ಮಾನಿಸಿದ್ದು ಏಕೆ?’ ಎಂದು ಪ್ರಶ್ನಿಸಿದರು.



ವಿಧಾನಸಭೆಯ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಮತ್ತು ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್‌.ಜಯದೇವ ನಾಯ್ಕ ಸಭೆಯಿಂದ ಹೊರನಡೆದ ಸಂದರ್ಭ

‘ಒಳ ಮೀಸಲಾತಿ ಜಾರಿಯಿಂದ ಬಂಜಾರ ಸಮುದಾಯದವರಿಗೆ ಅನ್ಯಾಯವಾಗಿದೆ ಎಂದು ಸಮಾಜದ ಪ್ರತಿನಿಧಿಗಳಾಗಿ ಸರ್ಕಾರದ ಮಟ್ಟದಲ್ಲಿ ಏಕೆ ಧ್ವನಿ ಎತ್ತಲಿಲ್ಲ ಎಂದು ಸ್ಪಷ್ಟನೆ ನೀಡಿ’ ಎಂದು ರುದ್ರಪ್ಪ ಲಮಾಣಿ ಮತ್ತು ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್.ಜಯದೇವ ನಾಯ್ಕ ಅವರನ್ನು ಮುಖಂಡರು ಪ್ರಶ್ನಿಸಿದರು.

ಸರ್ಕಾರದ ವಿರುದ್ಧ ಘೋಷಣೆ ಕೂಗಲೂ ಆರಂಭಿಸಿದರು. ಒಳ ಮೀಸಲಾತಿಯಿಂದ ಸಮುದಾಯಕ್ಕೆ ಅನ್ಯಾಯವಾಗಿದೆ ಎನ್ನುವವರು ವೇದಿಕೆಯಿಂದ ಇಳಿದು ಬನ್ನಿ ಎಂದು ಪ್ರಮುಖರು ಕರೆದಾಗ ರುದ್ರಪ್ಪ ಲಮಾಣಿ, ಜಯದೇವ ನಾಯ್ಕ, ಹೀರಾನಾಯ್ಕ, ಬೋಜ್ಯನಾಯ್ಕ ಹೊರತುಪಡಿಸಿ ಉಳಿದವರು ಕೆಳಗೆ ಬಂದರು. ಆಗ ಸ್ಥಳದಲ್ಲಿ ಕೆಲಹೊತ್ತು ಗೊಂದಲದ ವಾತಾವರಣ ಉಂಟಾಯಿತಲ್ಲದೆ, ಮುಖಂಡರ ನಡುವೆ ವಾಗ್ವಾದ ನಡೆಯಿತು.

ರುದ್ರಪ್ಪ ಲಮಾಣಿ ಮತ್ತು ಜಯದೇವ ನಾಯ್ಕ ಅವರು ಮೌನ ವಹಿಸಿ, ಪೊಲೀಸರು ಮತ್ತು ಸಮುದಾಯದ ಕೆಲವರ ಭದ್ರತೆಯಲ್ಲಿ ಸಭೆಯಿಂದ ಹೊರ ನಡೆದರು.

‘ಕುರುಬರಿಗೆ ಎಸ್‌ಟಿ ಸ್ಥಾನ: ಸಿ.ಎಂ ಹೋರಾಟ’

‘ಶೇ 7ರಷ್ಟು ಮೀಸಲಾತಿ ಹೊಂದಿರುವ ಪರಿಶಿಷ್ಟ ಪಂಗಡಕ್ಕೆ ಕುರುಬ ಸಮುದಾಯದ ಹಲವು ಪಂಗಡಗಳನ್ನು ಸೇರಿಸಲು ಹೊರಟಿರುವ ಸಿದ್ದರಾಮಯ್ಯ ಸ್ವಜಾತಿಯವರಿಗೆ ಲಾಭ ಮಾಡಿಕೊಡಲು ಹೋರಾಟ ಮಾಡುತ್ತಿದ್ದಾರೆ’ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಟೀಕಿಸಿದರು.

‘ಹಿಂದೆ ಪರಿಶಿಷ್ಟ ಪಂಗಡಕ್ಕೆ ಶೇ 3ರಷ್ಟು, ಪರಿಶಿಷ್ಟ ಜಾತಿಗೆ ಶೇ 15ರಷ್ಟು ಮೀಸಲಾತಿ ಇತ್ತು. ಕ್ರಮವಾಗಿ 3 ಅನ್ನು 7, 15 ಅನ್ನು 17ಕ್ಕೆ ಹೆಚ್ಚಿಸಿದ್ದು ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ. ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಕುರುಬರಿಗೆ ಹಂಚಲು ಸಿದ್ದರಾಮಯ್ಯ ಹೊರಟಿದ್ದಾರೆ’ ಎಂದು ಹೇಳಿದರು.

‘ಹಿಂದೆಯೂ ಇದೇ ರೀತಿ ಕೆಲವು ಜಾತಿಗಳನ್ನು ಮೀಸಲಾತಿ ಪಡೆಯುವ ಜಾತಿಗಳ ಪಟ್ಟಿಗೆ ಸೇರಿಸಿದಾಗ ವಿ.ಶ್ರೀನಿವಾಸಪ್ರಸಾದ್ ಅವರು, ಯಾರು ಹೆಲಿಕಾಪ್ಟರ್ ಕೊಳ್ಳಲು ಸಾಧ್ಯವೋ, ಯಾರು ಬೆಂಝ್ ಕಾರು ಕೊಳ್ಳಲು ಶಕ್ತಿ ಹೊಂದಿದ್ದಾರೋ ಅಂತಹ ಸಮುದಾಯಗಳನ್ನು ಮತ ಬ್ಯಾಂಕ್ ಕಾರಣಕ್ಕಾಗಿ ಮೀಸಲಾತಿಗೆ ಸೇರಿಸಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದ್ದರು’ ಎಂದರು.

ಹಲವೆಡೆ ಭಾರಿ ಮಳೆ ಮುನ್ಸೂಚನೆ

ಬೆಂಗಳೂರು: ರಾಜ್ಯದ ಬಹುತೇಕ ಕಡೆ ಮಂಗಳವಾರ ಮತ್ತು ಬುಧವಾರ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, 'ಯೆಲ್ಲೊ ಅಲರ್ಟ್' ನೀಡಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಗಾಳಿ ಸಹಿತ ಜೋರು ಮಳೆಯಾಗುವ ಸಾಧ್ಯತೆ ಇದೆ. ಬೆಳಗಾವಿ, ಬಾಗಲಕೋಟೆ, ಗದಗ, ಕಲಬುರಗಿ, ಹಾವೇರಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ ಜಿಲ್ಲೆಗಳಲ್ಲಿ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಂಭವ ಇದೆ ಎಂದು ಇಲಾಖೆ ತಿಳಿಸಿದೆ. ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಲಿದೆ.

ಸೋಮವಾರವೂ ವಿವಿಧ ಜಿಲ್ಲೆಗಳಲ್ಲಿ ಭಾರಿ ಮಳೆ ಆಗಿದೆ.

16 ಮನೆ ಕುಸಿತ, ಸಂಪರ್ಕ ಕಡಿತ

ರಾಯಚೂರು ಜಿಲ್ಲೆಯ ಹಲವು ಕಡೆ ಮಳೆ ಪ್ರವಾಹದಲ್ಲಿ ಕೊಚ್ಚಿಹೋದ ಎಮ್ಮೆಗಳು

ಪ್ರಜಾವಾಣಿ ವಾರ್ತೆ

ರಾಯಚೂರು: ಜಿಲ್ಲೆಯಲ್ಲಿ ಮಳೆ ಅಬ್ಬರಕ್ಕೆ ಮೂರು ಹಳ್ಳಗಳು ಉಕ್ಕಿ ಹರಿದು ಗ್ರಾಮಗಳ ಸಂಪರ್ಕ ಕಡಿದುಹೋಗಿದೆ.

ಲಿಂಗಸುಗೂರು ಪಟ್ಟಣದಲ್ಲಿ ಮನೆಗೆ ಸಿಡಿಲು ಬಡಿದು ಮನೆಯ ಗೋಡೆ ಕುಸಿದು ಬಿದ್ದಿದೆ. ಗುರುಗುಂಟಾ ಹೋಬಳಿ ವ್ಯಾಪ್ತಿಯ ಗ್ರಾಮದಲ್ಲಿ 16 ಮನೆಗಳು ಕುಸಿದುಬಿದ್ದಿವೆ.

ಬೀದರ್–ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿ (150 ಎ) ಮಸ್ಕಿ–ಸಿಂಧನೂರು ರಸ್ತೆಯ ಬೂತಲದಿನ್ನಿ ಬಳಿ ಬ್ರಿಜ್‌ಕಮ್ ಬ್ಯಾರೇಜ್ ತಾತ್ಕಾಲಿಕ ಸೇತುವೆ ಕೊಚ್ಚಿ ಹೋಗಿದೆ. ಕಲಬುರಗಿ–ಬೀದರ್ ಮಾರ್ಗದ ಬಸ್ ಸಂಚಾರಕ್ಕೆ ಸಮಸ್ಯೆ ಯಾಗಿದೆ. ಲಿಂಗಸುಗೂರು ತಾಲ್ಲೂಕಿನ ಆನೆಹೊಸೂರು–ಜಾಗಿರ ನಂದಿಹಾಳ, ಹಟ್ಟಿ ಚಿನ್ನದ ಗಣಿ ಸಮೀಪ ಗುಡದನಾಳ ಹಳ್ಳದ ಸೇತುವೆ ಮೇಲೆ ನೀರು ಹರಿಯುತ್ತಿದೆ. ಲಿಂಗಸುಗೂರು ತಾಲ್ಲೂಕಿನ ಮೇದಿನಾಪೂರ ಹಳ್ಳದ ಪ್ರವಾಹದಲ್ಲಿ 3 ಎಮ್ಮೆಗಳು ಕೊಚ್ಚಿಕೊಂಡು ಹೋಗಿವೆ. ಈಚನಾಳ ಬಳಿ ಹಳ್ಳ ಭರ್ತಿಯಾಗಿದ್ದು, ಉಕ್ಕಿ ಹರಿಯುತ್ತಿರುವ ನೀರಿನಲ್ಲೇ ತಂದೆ ಮಗಳನ್ನು ಹೆಗಲ ಮೇಲೆ ಕೂರಿಸಿಕೊಂಡು ಶಾಲೆಗೆ ಬಿಟ್ಟು ಬಂದಿದ್ದು, ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ಯಾದಗಿರಿ ಜಿಲ್ಲೆಯ ಹಲವೆಡೆ ಭಾನುವಾರ ತಡರಾತ್ರಿ ಸುರಿದ ಮಳೆಯಿಂದಾಗಿ ಹಳ್ಳಕೊಳ್ಳ ಉಕ್ಕಿ ಹರಿದಿವೆ. ಹುಣಸಗಿ ತಾಲ್ಲೂಕಿನಲ್ಲಿ 23 ಮನೆಗಳಿಗೆ ಹಾನಿಯಾಗಿದೆ. ಹನುಮಸಾಗರ ಗ್ರಾಮದಲ್ಲಿ ಕರು, ಕೋಳಿಗಳು ಕೊಚ್ಚಿಕೊಂಡು ಹೋಗಿವೆ. ಕಲಬುರಗಿ ಜಿಲ್ಲೆಯಲ್ಲಿ ವರುಣನ ಅರ್ಭಟ ಮುಂದುವರಿದಿದೆ. ಕಳೆದ 24 ಗಂಟೆಗಳಲ್ಲಿ ಜಿಲ್ಲೆಯ ವಾಡಿಯಲ್ಲಿ 10.8 ಸೆಂ.ಮೀ ಮಳೆಯಾಗಿದೆ.

ಪ್ರವಾಹ ಆತಂಕ: ಮಹಾರಾಷ್ಟ್ರದ ಉಜನಿ ಜಲಾಶಯದಿಂದ ಭೀಮಾನದಿಗೆ ನೀರು ಬಿಟ್ಟಿದ್ದು, ಪ್ರವಾಹದ ಆತಂಕವಿದೆ.


ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.56	7,868	7,979
ಹಾರಂಗಿ	2,859	2,858.56	1585	1600
ಕಬಿನಿ	2,284.00	2,281.82	3,929	4,671
ಹೇಮಾವತಿ	2,922	2,920.95	4,275	6,460
ಲಿಂಗನಮಕ್ಕಿ	1,819	1,817.15	3,733	8,632
ಸೂಪಾ (ಮೀ)	564	560.03	1825.93	4624.15
ವಾಣಿ	595	594.07	417	646
ತುಂಗಭದ್ರಾ	1,633	1,626.06	10,333	10,179
ಮಲಪ್ರಭಾ	2,079.5	2,079.50	1,094	1,094
ಘಟಪ್ರಭಾ	2175	2,174.60	1,717	2,684
ಭದ್ರಾ *	186	185.3	5,336	4,121
ಆಲಮಟ್ಟಿ (ಮೀ)	519.6	519.60	17,942	20,801
ನಾರಾಯಣಪುರ (ಮೀ)	492.25	492.21	30,000	29780

* ನೆಲಮಟ್ಟದಿಂದ

ಖಾಸಗಿ ಕಚೇರಿಗಳಲ್ಲಿ ಪಾಲಿಕೆ ಕಡತ

ಇ-ಖಾತಾ ವಿತರಣೆಯಲ್ಲಿ ಭ್ರಷ್ಟಾಚಾರ: ದಾಳಿಯಲ್ಲಿ ಬಹಿರಂಗ



ಕಲಬುರಗಿ ಮಹಾನಗರ ಪಾಲಿಕೆಗೆ ಸೇರಿದ ಕಚೇರಿಯಲ್ಲಿ ಕಲಬುರಗಿ ಲೋಕಾಯುಕ್ತ ಎಸ್ಪಿ ಸಿ.ಸಿದ್ದರಾಜು ಅವರು ಸೋಮವಾರ ದಾಖಲೆಗಳನ್ನು ಪರಿಶೀಲಿಸಿದರು

ಪ್ರಜಾವಾಣಿ ವಾರ್ತೆ

ಕಲಬುರಗಿ: ಮಹಾನಗರ ಪಾಲಿಕೆಯಲ್ಲಿ ವ್ಯಾಪಕ ಭ್ರಷ್ಟಾಚಾರದ ಆರೋಪ ಕಾರಣದಿಂದ ಲೋಕಾಯುಕ್ತ ಅಧಿಕಾರಿಗಳು ನಗರದ ಐದು ಕಡೆ ಏಕಕಾಲಕ್ಕೆ ದಿಢೀರ್ ದಾಳಿ ನಡೆಸಿದರು.

ಪಾಲಿಕೆ ಕಚೇರಿಗಳಲ್ಲಿ ಇರಬೇಕಿದ್ದ ಇ–ಖಾತಾಗೆ ಸಂಬಂಧಿಸಿದ ಅಪಾರ ಪ್ರಮಾಣದ ದಾಖಲೆಗಳು ಖಾಸಗಿ ಕಚೇರಿಗಳಲ್ಲಿ ಪತ್ತೆಯಾಗಿವೆ. ಒಂದು ಕಡೆ ಪಾಲಿಕೆಯ ರಿಜಿಸ್ಟರ್ ಹಾಗೂ ₹8.36 ಲಕ್ಷ ನಗದು ಕೂಡ ಪತ್ತೆಯಾಗಿದೆ ಎಂದು ಮೂಲಗಳು ಹೇಳಿವೆ.

ಪಾಲಿಕೆಯ ವಲಯ ಕಚೇರಿ–1, ವಲಯ ಕಚೇರಿ–2, ವಲಯ ಕಚೇರಿ–3 ಹಾಗೂ ನಗರದ ಸ್ನೇಹಾ ಬಿಲ್ಡರ್ ರಿಯಲ್ ಸ್ಟೇಟ್ ಸೆಂಟರ್, ಇನ್ಫೊ ಟೆಕ್ನಿಕಲ್ ಕನ್ಸಲ್‌ಟೆನ್ಸಿ, ಪಾಲಿಕೆ ಕಚೇರಿ ಆವರಣದ ಜೆರಾಕ್ಸ್–ಡಿಟಿಪಿ ಸೆಂಟರ್ ಹಾಗೂ ಎಸ್.ಬಿ. ಬಿಲ್ಡರ್ಸ್ ಆ್ಯಂಡ್ ಪ್ಲ್ಯಾನರ್ಸ್ ಕಚೇರಿಗಳ ಮೇಲೆ ಸೋಮವಾರ ದಾಳಿ ನಡೆದಿದೆ.

ಮಧ್ಯಾಹ್ನ 12 ಗಂಟೆಯಿಂದ ರಾತ್ರಿ 8 ಗಂಟೆ ತನಕವೂ ಶೋಧ ಕಾರ್ಯ ಮುಂದುವರಿದಿತ್ತು. ದಾಳಿ ನಡೆದ ಕಲಬುರಗಿ, ಬೀದರ್ ಹಾಗೂ ಯಾದಗಿರಿ ಜಿಲ್ಲೆಯ ಲೋಕಾಯುಕ್ತ ಅಧಿಕಾರಿಗಳ ಪ್ರತಿ ತಂಡದಲ್ಲಿ 5–6 ಮಂದಿ ಅಧಿಕಾರಿಗಳು–ಸಿಬ್ಬಂದಿ ಇದ್ದಾರೆ.

'ನಿಯಮದಂತೆ 7 ದಿನಗಳಲ್ಲಿ ಇ–ಖಾತಾ ವಿತರಿಸದೇ ವಲಯ ಕಚೇರಿಗಳಲ್ಲಿ ತಮ್ಮದೇ ಏಜೆಂಟರ ಮೂಲಕ ಅರ್ಜಿದಾರರಿಂದ ದುಡ್ಡು ಪಡೆದು, ಇ–ಖಾತಾ ವಿತರಿಸುತ್ತಿರುವ ಬಗ್ಗೆ ದೂರುಗಳು ಬಂದಿದ್ದವು. ದುಡ್ಡು ಕೊಡದವರಿಗೆ ಖಾತಾ ವಿತರಣೆಯಲ್ಲಿ ವಿಳಂಬ ಮಾಡಲಾಗುತ್ತಿತ್ತು. ಈ ಕುರಿತು ಉಪ ಲೋಕಾಯುಕ್ತರು ಸರ್ಚ್ ವಾರಂಟ್ ಜಾರಿಗೊಳಿಸಿದ್ದರು. ರಾತ್ರಿಯವರೆಗೆ ಶೋಧ ನಡೆಯಿತು. ಇ–ಖಾತಾ ಸಂಬಂಧಿತ ಕಡತಗಳು ಖಾಸಗಿ ಕಚೇರಿಗಳಲ್ಲಿ ಸಿಕ್ಕಿವೆ. ಒಂದೆಡೆ ನಗದು, ಮತ್ತೊಂದೆಡೆ ಡಿಜಿಟಲ್ ವಹಿವಾಟು ವಿವರ ಲಭ್ಯವಾಗಿದೆ' ಎಂದು ಕಲಬುರಗಿ ಲೋಕಾಯುಕ್ತ ಎಸ್ಪಿ ಸಿ.ಸಿದ್ದರಾಜು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಚುಟುಕೆ ಸುದ್ದಿ

ಅ. 17ರಂದು ಕಾವೇರಿ ತೀರ್ಥೋದ್ಭವ

ಮಡಿಕೇರಿ: ತಾಲ್ಲೂಕಿನ ತಲಕಾವೇರಿಯಲ್ಲಿ ಅ.17ರಂದು ಮಧ್ಯಾಹ್ನ 1.44ಕ್ಕೆ 'ಕಾವೇರಿ ಪವಿತ್ರ ತೀರ್ಥೋದ್ಭವ' ನಡೆಯಲಿದೆ.

ಇದಕ್ಕೂ ಮುನ್ನ ಭಾಗಮಂಡಲದ ಭಗಂಡೇಶ್ವರ ದೇಗುಲದಲ್ಲಿ ಸೆ. 26ರಂದು ಬೆಳಿಗ್ಗೆ 9.31ಕ್ಕೆ ಪತ್ತಾಯಕ್ಕೆ ಅಕ್ಕಿ ಹಾಕುವ ಕಾರ್ಯ ನಡೆಯಲಿದೆ. ಅ.14ರಂದು ವಿವಿಧ ಧಾರ್ಮಿಕ ಕಾರ್ಯಗಳು ನಡೆಯಲಿವೆ' ಭಗಂಡೇಶ್ವರ–ತಲಕಾವೇರಿ ದೇವಾಲಯದ ಪ್ರಕಟಣೆ ತಿಳಿಸಿದೆ.

ಚಿಂಚರಕಿ ಸರ್ಕಾರಿ ಶಾಲೆಗೆ ಪಡಿತರ ಪೂರೈಕೆ

ಕವಿತಾಳ (ರಾಯಚೂರು ಜಿಲ್ಲೆ): ಸಮೀಪದ ಚಿಂಚರಕಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸೋಮವಾರ ಬಿಸಿಯೂಟದ ಪಡಿತರ ಪೂರೈಕೆ ಮಾಡಲಾಗಿದೆ.

'ಬಿಸಿಯೂಟಕ್ಕೆ ಪಡಿತರ ಪೂರೈಕೆ ಸ್ಥಗಿತ' ಶೀರ್ಷಿಕೆಯಡಿ 'ಪ್ರಜಾವಾಣಿ' ಸೆ.14ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ವರದಿಗೆ ಸ್ಪಂದಿಸಿದ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಪ್ರಭಾಕರ, ಪಡಿತರ ಪೂರೈಕೆಗೆ ಕ್ರಮ ಕೈಗೊಂಡಿದ್ದಾರೆ.

'ವಾರದಿಂದ ಸಮಸ್ಯೆ ಉಂಟಾಗಿತ್ತು. 4 ದಿನದಿಂದ ಸ್ಥಳೀಯರೇ ಪಡಿತರ ನೀಡಿದ್ದರು. ವರದಿ ಆಧರಿಸಿ ಅಧಿಕಾರಿಗಳು ಕ್ರಮವಹಿಸಿದ್ದಾರೆ' ಎಂದು ಎಸ್‌ಡಿಎಂಸಿ ಅಧ್ಯಕ್ಷ ಮುದೆಪ್ಪ ತಿಳಿಸಿದರು.

ಗಿರಡ್ಡಿ ಗೋವಿಂದರಾಜ ವಿಮರ್ಶಾ ಪ್ರಶಸ್ತಿಗೆ 'ಕಾಲ್ದಾರಿ' ಕೃತಿ ಆಯ್ಕೆ

ಧಾರವಾಡ: ನಗರದ ಗಿರಡ್ಡಿ ಗೋವಿಂದರಾಜ ಫೌಂಡೇಶನ್ ನೀಡುವ ಗಿರಡ್ಡಿ ಗೋವಿಂದರಾಜ ವಿಮರ್ಶಾ ಪ್ರಶಸ್ತಿಗೆ ಅಗ್ರಹಾರ ಕೃಷ್ಣಮೂರ್ತಿ ಅವರ 'ಕಾಲ್ದಾರಿ' ಕೃತಿ ಆಯ್ಕೆಯಾಗಿದೆ. ಪುರಸ್ಕಾರವು ₹ 25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ಸೆಪ್ಟೆಂಬರ್ 22ರಂದು ಬೆಳಿಗ್ಗೆ 11 ಗಂಟೆಗೆ ನಗರದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬೊಕಾರೊ: ನಕ್ಸಲ್ ಚಟುವಟಿಕೆ ನಿರ್ಮೂಲನೆ– ಶಾ

ನವದೆಹಲಿ/ರಾಂಚಿ (ಪಿಟಿಐ): ಉತ್ತರ ಜಾರ್ಖಂಡ್‌ನ ಬೊಕಾರೊ ವಲಯದಲ್ಲಿ ನಕ್ಸಲ್ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಜಾರ್ಖಂಡ್‌ನ ಹಜಾರಿಬಾಗ್ ಜಿಲ್ಲೆಯಲ್ಲಿ ಸೋಮವಾರ ಬೆಳಿಗ್ಗೆ ಭದ್ರತಾ ಪಡೆಗಳೊಂದಿಗಿನ ಗುಂಡಿನ ಚಕಮಕಿಯಲ್ಲಿ ಮೂವರು ನಕ್ಸಲರು ಮೃತಪಟ್ಟಿದ್ದಾರೆ.

ನಕ್ಸಲ್ ಕಮಾಂಡರ್ ಸಹದೇವ್ ಸೊರೇನ್ ಅಲಿಯಾಸ್ ಪರ್ವೇಶ್, ರಘುನಾಥ್ ಹೆಂಬ್ರಾಮ್ ಅಲಿಯಾಸ್ ಚಂಚಲ್ ಹಾಗೂ ಬಿರ್ಸೆನ್ ಗಂಜು ಅಲಿಯಾಸ್ ರಾಮ್ಖೇಲ್‌ವಾನ್‌ನನ್ನು ಭದ್ರತಾ ಪಡೆಗಳು ಗುಂಡಿಕ್ಕಿ ಕೊಲ್ಲುವ ಮೂಲಕ ಈ ವಲಯದಲ್ಲಿ ನಕ್ಸಲ್ ಚಟುವಟಿಕೆಗಳನ್ನು ಅನ್ನು ಸಂಪೂರ್ಣವಾಗಿ ನಿರ್ಮೂಲನೆಗೊಳಿಸಿವೆ ಎಂದು ಶಾ 'ಎಕ್ಸ್'ನಲ್ಲಿ ಉಲ್ಲೇಖಿಸಿದ್ದಾರೆ.

ಸಹದೇವನ ಸುಳಿವು ನೀಡಿದವರಿಗೆ ₹1ಕೋಟಿ ಬಹುಮಾನ ಘೋಷಿಸಲಾಗಿತ್ತು. ಈತ ನಿಷೇಧಿತ ಸಿಪಿಐ ಕೇಂದ್ರ ಸಮಿತಿ ಸದಸ್ಯನಾಗಿದ್ದ. 'ಈ ಪ್ರದೇಶದ ಸಮಿತಿ ಸದಸ್ಯನಾಗಿದ್ದ ರಘುನಾಥನ ಸುಳಿವು ನೀಡಿದವರಿಗೆ ₹25 ಲಕ್ಷ ಹಾಗೂ ವಲಯ ಸಮಿತಿ ಸದಸ್ಯನಾಗಿದ್ದ ಗಂಜುನ ಸುಳಿವು ನೀಡಿದವರಿಗೆ ₹10 ಲಕ್ಷ ಬಹುಮಾನ ಘೋಷಿಸಲಾಗಿತ್ತು' ಎಂದು ಜಾರ್ಖಂಡ್ ಪೊಲೀಸ್ ಐಜಿ (ಕಾರ್ಯಾಚರಣೆ) ಹಾಗೂ ವಕ್ತಾರ ಮೈಕಲ್ ರಾಜ್ ಎಸ್., ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ನಟ, ನಟಿಯ ಹೆಸರಿನಲ್ಲಿ ಹಣ ಕೊಡುವಂತೆ ಸೈಬರ್ ವಂಚಕರ ಸಂದೇಶ

ಉಪೇಂದ್ರ, ಪ್ರಿಯಾಂಕಾ ಮೊಬೈಲ್ ಹ್ಯಾಕ್

ಪ್ರಜಾವಾಣಿ ವಾರ್ತೆ



ಉಪೇಂದ್ರ



ಪ್ರಿಯಾಂಕಾ

ಬೆಂಗಳೂರು: ನಟ, ನಿರ್ದೇಶಕ ಉಪೇಂದ್ರ ಹಾಗೂ ಅವರ ಪತ್ನಿ ಪ್ರಿಯಾಂಕಾ ಅವರ ಮೊಬೈಲ್ ಅನ್ನು ವಂಚಕರು ಹ್ಯಾಕ್ ಮಾಡಿದ್ದು, ಕೇಂದ್ರ ವಿಭಾಗದ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ದೂರು ಆಧರಿಸಿ ಎಫ್‌ಐಆರ್ ದಾಖಸಿಕೊಂಡಿದ್ದು, ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ವಿಭಾಗ ಪೊಲೀಸರು ಸೋಮವಾರ ಹೇಳಿದರು.

'ಹಣದ ತುರ್ತು ಅಗತ್ಯವಿರಬಹುದು ಎಂದು ಭಾವಿಸಿ, ನಮಗೆ ಪರಿಚಯಸ್ಥ ನಾಲ್ವರು ಸುಮಾರು ₹50 ಸಾವಿರದಷ್ಟು ವರ್ಗಾಯಿಸಿದ್ದಾರೆ. ನನ್ನ ಮಗ ಸಹ ಹಣ ವರ್ಗಾಯಿಸಿದ್ದ. ನಮ್ಮ ಹೆಸರಿನಲ್ಲಿ ಹಣ ಕೇಳಿದರೆ ಕಳುಹಿಸಬೇಡಿ' ಎಂದು ಉಪೇಂದ್ರ ಅವರು ಮನವಿ ಮಾಡಿದ್ದಾರೆ.

'ಸೋಮವಾರ ಬೆಳಿಗ್ಗೆ ಕರೆ ಮಾಡಿದ್ದ ವಂಚಕ, 'ನಿಮ್ಮ ಆರ್ಡರ್ ಡೆಲಿವರಿ ಮಾಡಲು ವಿಳಾಸ ಸಿಗುತ್ತಿಲ್ಲ. ಈ ಮೊಬೈಲ್ ಸಂಖ್ಯೆಗೆ ಡಯಲ್ ಮಾಡಿ ಖಚಿತಪಡಿಸಿದರೆ ಡೆಲಿವರಿ ಮಾಡುತ್ತೇವೆ' ಎಂದು ಹ್ಯಾಶ್ ಟ್ಯಾಗ್ ಸಹಿತ ನಂಬರ್ ಹೇಳಿದ್ದ. ಆ ಮೊಬೈಲ್ ಸಂಖ್ಯೆಗೆ ಡಯಲ್ ಮಾಡುವಷ್ಟರಲ್ಲಿ ಪ್ರಿಯಾಂಕಾ ಅವರ ಫೋನ್ ಹ್ಯಾಕ್ ಆಗಿತ್ತು. ಮೊಬೈಲ್ ಫೋನ್‌ನಲ್ಲಿ ಸಮಸ್ಯೆ ಇರಬಹುದು ಎಂದು ಭಾವಿಸಿದ್ದರು. ಅಷ್ಟರಲ್ಲಿ ಉಪೇಂದ್ರ ಹಾಗೂ ಅವರ ಪರಿಚಯವಿದ್ದ ಮಹಾದೇವ್ ಅವರ ಮೊಬೈಲ್ ಫೋನ್ ಸಹ ಹ್ಯಾಕ್ ಆಗಿತ್ತು' ಎಂದು ದೂರು ನೀಡಲಾಗಿದೆ.

'ಕೆಲವು ವಸ್ತುಗಳನ್ನು ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದ್ದೆ. ಆ ವಸ್ತುಗಳನ್ನು ಡೆಲಿವರಿ ಮಾಡುವವರೇ ಕರೆ ಮಾಡಿರಬಹುದು ಎಂದು ಭಾವಿಸಿದ್ದೆ. ವಂಚಕ ನೀಡಿದ್ದ ಸಂಖ್ಯೆಗೆ ಕರೆ ಮಾಡಲು ಮುಂದಾದ ವೇಳೆ ಈ ರೀತಿ ಸಮಸ್ಯೆ ಆಗಿದೆ' ಎಂದು ಪ್ರಿಯಾಂಕಾ ಹೇಳಿದ್ದಾರೆ.

43 ಕೆ.ಜಿ ಗಾಂಜಾ ಜಪ್ತಿ: ಮಹಿಳೆ ಸೆರೆ

ಬೀದರ್: ನಗರದ ಗಾಂಧಿ ಗಂಜ್ ಠಾಣೆ ಪೊಲೀಸರು ಮಹಿಳೆಯನ್ನು ಬಂಧಿಸಿ, ಆಕೆಯಿಂದ ₹ 43.47 ಲಕ್ಷ ಮೌಲ್ಯದ 43 ಕೆ.ಜಿ 479 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ.

'ನಾನು ಸ್ಥಳೀಯ ನಿವಾಸಿಯಾಗಿದ್ದು, ಕರೆ ಮಾಡಿದಾಗ ಮಧ್ಯಪ್ರದೇಶದಿಂದ ಗಾಂಜಾ ತಂದು ಕೊಡುತ್ತಾರೆ' ಎಂದು ಬಂಧಿತ ಮಹಿಳೆ ಮಾಹಿತಿ ನೀಡಿದ್ದಾರೆ. ಮಹಿಳೆ ಸೇರಿ ನಾಲ್ವರ ವಿರುದ್ಧ ಗಾಂಧಿ ಗಂಜ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಸುಭಾಷಿತ

ಸೂರ್ಯ, ಚಂದ್ರ ಮತ್ತು ಸತ್ಯವನ್ನು ಮುಚ್ಚಿಡಲು ಸಾಧ್ಯವಿಲ್ಲ.

ಗೌತಮ ಬುದ್ಧ

ಸಂಪಾದಕೀಯ

‘ಒಪ್ಪಂದದ ರಾಜಕಾರಣ’ ಸಲ್ಲದು ಭ್ರಷ್ಟರ ವಿರುದ್ಧ ಕ್ರಮ ಜರುಗಲಿ

ಹಿಂದಿನ ಬಿಜೆಪಿ ಸರ್ಕಾರದ ಮೇಲೆ ಗುತ್ತಿಗೆದಾರರು ಮಾಡಿದ್ದ ‘ಶೇ 40 ಲಂಚ’ದ ಆರೋಪವನ್ನೇ ಏಣಿಯನ್ನಾಗಿಸಿಕೊಂಡ ಕಾಂಗ್ರೆಸ್, 2023ರ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿತು. ಅಧಿಕಾರಕ್ಕೆ ಬಂದ ನಂತರ, ಆರೋಪಗಳ ಕುರಿತ ತನಿಖೆಗಾಗಿ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಆಯೋಗವನ್ನು ಸರ್ಕಾರ ರಚಿಸಿತು. ಶೇ 40ರ ಲಂಚದ ಆರೋಪಗಳಿಗೆ ಸಂಬಂಧಿಸಿದ ಯಾವುದೇ ನಿರ್ದಿಷ್ಟ ಪುರಾವೆ ದೊರೆತಿಲ್ಲವಾದರೂ, ಭ್ರಷ್ಟಾಚಾರಕ್ಕೆ ನೇರವಾಗಿ ಕಾರಣವಾಗಬಹುದಾದ ವಿಳಂಬ, ಕಾನೂನು ಉಲ್ಲಂಘನೆಗಳು ಹಾಗೂ ಸ್ವಜನಪಕ್ಷಪಾತದಂತಹ ಅಂಶಗಳನ್ನು ಆಯೋಗ ಗುರ್ತಿಸಿದೆ. ಯಾವುದೇ ಕಾಮಗಾರಿಯ ಟೆಂಡರ್ ಪಡೆಯಲು ಶೇ 40ರಷ್ಟು ಲಂಚ ನೀಡಬೇಕಾಗಿದೆ ಎಂದು ಪದೇ ಪದೇ ಆರೋಪಿಸಿದ್ದ ‘ಕರ್ನಾಟಕ ಗುತ್ತಿಗೆದಾರರ ಸಂಘ’ (ಕೆಎಸ್‌ಸಿಎ), ತನ್ನ ಆರೋಪಗಳಿಗೆ ಪೂರಕವಾಗಿ 1,593 ಪುಟಗಳ ದಾಖಲೆಯನ್ನು ಆಯೋಗಕ್ಕೆ ನೀಡಿತ್ತು. ಆ ದಾಖಲೆಗಳಲ್ಲಿ ವ್ಯಾಪಕ ಭ್ರಷ್ಟಾಚಾರವನ್ನು ಸಾಬೀತುಪಡಿಸುವ ಸ್ಪಷ್ಟ ಅಂಶಗಳು ಆಯೋಗಕ್ಕೆ ಕಂಡುಬಂದಿಲ್ಲ. ಅದರ ಹೊರತಾಗಿಯೂ, ಬಿಜೆಪಿ ನಾಯಕರಾದ ಜಿ.ಎಚ್. ತಿಪ್ಪಾರೆಡ್ಡಿ ಹಾಗೂ ರೂಪಾಲಿ ನಾಯ್ಕ ಅವರ ವಿರುದ್ಧದ ಆರೋಪಗಳನ್ನು ಆಯೋಗ ಎತ್ತಿಹಿಡಿದಿದೆ ಹಾಗೂ ಪಿಡಬ್ಲ್ಯುಡಿ ಎಂಜಿನಿಯರ್ ಎಸ್.ಎಫ್. ಪಾಟೀಲ್ ವಿರುದ್ಧದ ಭ್ರಷ್ಟಾಚಾರದ ಆರೋಪಗಳನ್ನು ‘ಕೆಎಸ್‌ಸಿಎ’ ನೀಡಿದ ಸಾಕ್ಷ್ಯಗಳ ಆಧಾರದಲ್ಲಿಯೇ ದೃಢೀಕರಿಸಿದೆ. ಇದೀಗ, ಶೇ 40ರಷ್ಟು ಲಂಚ ಆರೋಪಗಳ ಬಗ್ಗೆ ನಾಗಮೋಹನ ದಾಸ್ ಆಯೋಗ ನೀಡಿರುವ ವರದಿಯ ಕೂಲಂಕಷ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ನಿವೃತ್ತ ಐಎಎಸ್ ಅಧಿಕಾರಿ ಸುಧೀರ್ ಕೃಷ್ಣ ಅವರ ನೇತೃತ್ವದಲ್ಲಿ ಸರ್ಕಾರ ಮತ್ತೊಂದು ಸಮಿತಿ ರಚಿಸಿದೆ.



ಭ್ರಷ್ಟಾಚಾರ ವಿರುದ್ಧದ ಸರ್ಕಾರದ ಹೋರಾಟ ಜನರ ಕಣ್ಣಿಗೆ ಮಣ್ಣೆರಚುವಂತೆ ಇರಬಾರದು. ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸುವಂತೆ ಇರಬೇಕು.

ಕಾಂಗ್ರೆಸ್ ಸರ್ಕಾರ ಶೇ 40ರ ಲಂಚದ ಅಂಕಿಅಂಶದ ಹಗ್ಗಜಗ್ಗಾಟವನ್ನು ಪ್ರಸ್ತುತ ರೂಪದಲ್ಲಿ ಮುಂದುವರಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ಕಾಗದದ ದಾಖಲೆ ಲಭ್ಯವಿಲ್ಲದ ಲಂಚದ ಆರೋಪವನ್ನು ಸಾಬೀತು ಪಡಿಸುವುದು ಕಷ್ಟ. ಆದರೆ, ಲಭ್ಯ ಇರುವ ಕುರುಹುಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಹಾಗೂ ತಾಂತ್ರಿಕ ಪರಿಶೋಧನೆಗೆ ಒಳಪಡಿಸುವ ಸಾಧ್ಯತೆ ಮುಕ್ತವಾಗಿದೆ. ಕಾರ್ಯಸಾಧುವಾದ ಪ್ರಯತ್ನಗಳ ಬದಲಾಗಿ, ಹೊಸ ಸಮಿತಿಗಳನ್ನು ನೇಮಿಸುವ ಪ್ರಕ್ರಿಯೆ ಸತ್ತ ಹಾವಿಗೆ ಮತ್ತೆ ಮತ್ತೆ ಕಲ್ಲು ಎಸೆದಂತಾಗುತ್ತದೆ. ತನಿಖಾ ಸಮಿತಿಗಳನ್ನು ನೇಮಿಸುವ ಸರ್ಕಾರದ ರೂಢಿಗತ ಕ್ರಮ, ವರದಿಗಳನ್ನು ದೂಳು ಹಿಡಿಯಲು ಬಿಡುತ್ತದೆಯೇ ಹೊರತು, ನಿರ್ಣಾಯಕ ಫಲಿತಾಂಶವನ್ನು ನೀಡುವುದು ಸಾಧ್ಯವಿಲ್ಲ. ಇದಕ್ಕೆ ಅತ್ಯುತ್ತಮ ಉದಾಹರಣೆ, ಕೊರೊನಾ ಸೋಂಕು ವ್ಯಾಪಕವಾಗಿದ್ದ ಸಂದರ್ಭದಲ್ಲಿ ನಡೆದ ಖರೀದಿಗಳಲ್ಲಿನ ಅವ್ಯವಹಾರಗಳ ಕುರಿತಂತೆ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ಆಯೋಗ ಸಲ್ಲಿಸಿರುವ ವರದಿ. ₹400ಕ್ಕೆ ದೊರೆಯುತ್ತಿದ್ದ ಪಿಪಿಇ ಕಿಟ್‌ಗಳನ್ನು ₹1,312ಕ್ಕೆ ಖರೀದಿಸಿರುವುದು ಸೇರಿದಂತೆ, ಕಪ್ಪುಪಟ್ಟಿಗೆ ಸೇರಿಸಿದ ಕಂಪನಿಗಳಿಗೆ ಏಕಮಾತ್ರ ಬಿಡ್ ನಂತರ ಟೆಂಡರ್ ನೀಡಿರುವುದು, ಅನುಮೋದನೆಗೊಳ್ಳದ ಪ್ರಯೋಗಾಲಯಗಳ ಮೂಲಕ ಹಣಕಾಸಿನ ದುರುಪಯೋಗದ ಭಾರೀ ಅಕ್ರಮಗಳನ್ನು ಆಯೋಗ ಬೆಳಕಿಗೆ ತಂದಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಮಾಜಿ ಆರೋಗ್ಯ ಸಚಿವ ಬಿ. ಶ್ರೀರಾಮುಲು ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ, ₹500 ಕೋಟಿ ವಸೂಲಿ ಮಾಡುವಂತೆ ಹಾಗೂ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಿದೆ. ಈ ಸಮಿತಿಯ ವರದಿಗೆ ಸಂಬಂಧಿಸಿದಂತೆಯೂ ಸರ್ಕಾರ ಮತ್ತೊಂದು ವಿಶೇಷ ತನಿಖಾ ತಂಡ ರಚಿಸಿದೆ ಹಾಗೂ ಮೌನಕ್ಕೆ ಜಾರಿದೆ.

ತನಿಖಾ ವರದಿಗಳನ್ನು ದೂಳು ಹಿಡಿಯಲು ಬಿಡುವ ಆಯ್ದ ನಿಷ್ಕ್ರಿಯತೆಯ ಧೋರಣೆಯು ಕಾಂಗ್ರೆಸ್ ಮತ್ತು ಬಿಜೆಪಿ ನಡುವಣ ‘ಒಪ್ಪಂದದ ರಾಜಕೀಯ’ದ ಆರೋಪಗಳನ್ನು ಪುಷ್ಟೀಕರಿಸುವಂತಿದೆ. ಭ್ರಷ್ಟಾಚಾರ ವಿರುದ್ಧದ ಹೋರಾಟವನ್ನು ಸರ್ಕಾರವೊಂದು ಗಂಭೀರವಾಗಿ ತೆಗೆದುಕೊಳ್ಳುವುದಾದರೆ, ವರದಿಯ ಶಿಫಾರಸುಗಳನ್ನು ಜಾರಿಗೊಳಿಸಿ, ಕಾನೂನು ಕ್ರಮಗಳನ್ನು ಜಾರಿಗೊಳಿಸಬೇಕು ಹಾಗೂ ತಪ್ಪಿತಸ್ಥರಿಂದ ಸಾರ್ವಜನಿಕ ಹಣವನ್ನು ವಸೂಲಿ ಮಾಡಬೇಕು. ಅಂತಿಮವಾಗಿ, ಭ್ರಷ್ಟಾಚಾರದಿಂದಾಗಿ ರಾಜ್ಯದ ಆರ್ಥಿಕ ಸ್ಥಿತಿಗೆ ಹಾನಿ ಉಂಟಾಗುವುದು ಮಾತ್ರವಲ್ಲದೆ, ಗಣತಂತ್ರವೂ ದುರ್ಬಲಗೊಳ್ಳುತ್ತದೆ. ಶೇ 40ರ ಲಂಚವನ್ನು ಕೊನೆಗೊಳಿಸುವುದಾಗಿ ಹೇಳಿ ಅಧಿಕಾರಕ್ಕೆ ಬಂದಿರುವ ಸರ್ಕಾರ ಈಗ ತನ್ನ ಮಾತನ್ನು ಉಳಿಸಿಕೊಳ್ಳುವ ಪ್ರಾಮಾಣಿಕತೆಯನ್ನು ಪ್ರದರ್ಶಿಸಬೇಕಾಗಿದೆ ಹಾಗೂ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಾಗಿದೆ. ತನಿಖೆಗಳು ಸ್ವತಂತ್ರವಾಗಿ, ಸಾಕ್ಷ್ಯಗಳನ್ನು ಆಧರಿಸಿ, ನಿರ್ದಿಷ್ಟ ಕಾಲಮಿತಿಯೊಳಗೆ ಮುಗಿಯಬೇಕು; ರಾಜಕೀಯ ಸೇಡಿನ ಕ್ರಮಗಳು ಆಗಬಾರದು. ಘೋಷಣೆಗಳು ಹಾಗೂ ದೂಳುಹಿಡಿದ ವರದಿಗಳಿಗಿಂತಲೂ ಹೆಚ್ಚಿನದನ್ನು ನಿರೀಕ್ಷಿಸುವ ಹಕ್ಕು ರಾಜ್ಯದ ಜನತೆಗಿದೆ.

ಚಾಟಿ

ಸಮಾಜಘಾತುಕರ ಸ್ನೇಹ



ರಾಜ್ಯದ ಪೊಲೀಸರು ಸಮಾಜಘಾತುಕ ಕ್ರಿಮಿನಲ್‌ಗಳ ಜೊತೆಗೆ ಚಕ್ಕಂದವಾಡುವುದು, ರಾಜಕಾರಣಿಗಳ ಚೇಲಾಗಳಾಗಿ ವರ್ತಿಸುವುದು, ಅಮಾಯಕರ ಮೇಲೆ ದಬ್ಬಾಳಿಕೆ ಮಾಡುವುದು, ಮುಂತಾದ ಕೃತ್ಯಗಳನ್ನು ನೋಡಿದಾಗ, ಸಾರ್ವಜನಿಕರು ‘ಬಾಯಲ್ಲಿ ಸೀಟಿ, ಕೈಯಲ್ಲಿ ಲಾಠಿ’ ಹಿಡಿದು, ಸ್ವತಃ ಕಮ್ಯೂನಿಟಿ ಪೊಲೀಸಿಂಗ್ ಮಾಡಲು ಮುಂದಾಗುವ ದಿನಗಳು ದೂರವಿಲ್ಲ ಅನಿಸುತ್ತದೆ.

ರವಿ ಕೃಷ್ಣಾರೆಡ್ಡಿ, ಅಧ್ಯಕ್ಷ, ಕರ್ನಾಟಕ ರಾಷ್ಟ್ರ ಸಮಿತಿ

ಕಿಡಿನುಡಿ



ಬಿಜೆಪಿಯವರು ಕಂಡವರ ಮಕ್ಕಳಿಗೆ ಕೇಸರಿ ಶಾಲು ಕೊಟ್ಟು ಧರ್ಮ ರಕ್ಷಣೆ ಮಾಡುವಂತೆ ಹೇಳುತ್ತಾರೆ. ಸಿ.ಟಿ. ರವಿ ಎಂದಾದರೂ ತಮ್ಮ ಮಗನಿಗೆ ಇನ್ನೊಬ್ಬರ ತಲೆ ಕಡಿ, ತೊಡೆ ಮುರಿ, ಮಸೀದಿ ಎದುರು ಹೋಗುವ ಮೆರವಣಿಗೆಯಲ್ಲಿ ಭಾಗವಹಿಸು ಎಂದು ಹೇಳಿದ್ದಾರೆಯೇ?

ಪ್ರಿಯಾಂಕ್ ಖರ್ಗೆ, ಐ.ಟಿ–ಬಿ.ಟಿ ಸಚಿವ

25 ವರ್ಷಗಳ ಹಿಂದೆ

ಶನಿವಾರ, 16-9-2000

- **ಗ್ರಾಮೀಣ ಅಭ್ಯರ್ಥಿಗಳಿಗೆ ಶೇ 5ರಷ್ಟು ಹುದ್ದೆ ಮೀಸಲು**

ಬೆಂಗಳೂರು, ಸೆಪ್ಟೆಂಬರ್ 15– ಗ್ರಾಮೀಣ ವಿದ್ಯಾರ್ಥಿಗಳಿಗೆ ಕೃಪಾಂಕದ ಬದಲಾಗಿ ನೇಮಕಾತಿಯಲ್ಲಿ ಶೇ 5ರಷ್ಟು ಹುದ್ದೆಗಳ ಪ್ರತ್ಯೇಕ ಮೀಸಲಾತಿ ನೀಡುವಂತೆ ನ್ಯಾಯಮೂರ್ತಿ ಆರ್. ರಾಮಕೃಷ್ಣ ನೇತೃತ್ವದ ಆಯೋಗ ಶಿಫಾರಸು ಮಾಡಿದೆ.

ಕೃಪಾಂಕ ಪದ್ಧತಿಯನ್ನು ಹೈಕೋರ್ಟ್ ರದ್ದುಪಡಿಸಿದ್ದನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದ ಹಿನ್ನೆಲೆಯಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ಸರ್ಕಾರ ಆಯೋಗ ನೇಮಿಸಿತ್ತು.

- **ಅಮೆರಿಕ ಜತೆ 5 ಒಪ್ಪಂದಕ್ಕೆ ಸಹಿ**

ವಾಷಿಂಗ್‌ಟನ್, ಸೆಪ್ಟೆಂಬರ್ 15 (ಪಿಟಿಐ)– ದ್ವಿಪಕ್ಷೀಯ ಆರ್ಥಿಕ ಬಾಂಧವ್ಯ ಹೆಚ್ಚಳಕ್ಕಾಗಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಭೇಟಿ ಸಂದರ್ಭದಲ್ಲಿ 6 ಶತಕೋಟಿ ಡಾಲರ್ ಮೌಲ್ಯದ 5 ವಾಣಿಜ್ಯ ಒಪ್ಪಂದಗಳಿಗೆ ಭಾರತ-ಅಮೆರಿಕ ಸಹಿ ಹಾಕಿವೆ.

ಹಣಕಾಸು ಸಚಿವ ಯಶವಂತ ಸಿನ್ಹಾ ಹಾಗೂ ಅಮೆರಿಕ ವಾಣಿಜ್ಯ ಕಾರ್ಯದರ್ಶಿ ನಾರ್ಮನ್ ವೈ ಮಿನೆಟಾ ಹಾಜರಿಯಲ್ಲಿ ಸಹಿ ಹಾಕಲಾಗಿದೆ.

75 ವರ್ಷಗಳ ಹಿಂದೆ

ಶನಿವಾರ, 16-9-1950

- **ಕಾಂಗ್ರೆಸ್ 56ನೇ ಸಭೆ: ಗಾಂಧಿನಗರ ಸಜ್ಜು**

ನಾಸಿಕ್, ಸೆಪ್ಟೆಂಬರ್ 15– ಇಲ್ಲಿನ ಗಾಂಧಿನಗರದಲ್ಲಿ ಸೆ. 20ರಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ 56ನೇ ಸಭೆ ನಡೆಯಲಿದೆ. ಸರ್ದಾರ್ ಪಟೇಲ್ ಸೇರಿದಂತೆ ಕಾಂಗ್ರೆಸ್‌ನ ಪ್ರಮುಖರು ಪಾಲ್ಗೊಳ್ಳಲಿದ್ದಾರೆ.

ಗಾಂಧಿನಗರದ ಪ್ರಮುಖ ರಸ್ತೆಗಳು, ವೃತ್ತಗಳಲ್ಲಿ ಕಾಂಗ್ರೆಸ್ ಧ್ವಜಗಳು ರಾರಾಜಿಸುತ್ತಿವೆ. ನಗರದ ಮುಖ್ಯದ್ವಾರದಿಂದ ಸ್ಯಾಟಲೈಟ್ ಟೌನ್‌ವರೆಗೆ ಕಾಂಗ್ರೆಸ್ ಧ್ವಜಗಳನ್ನು ಕಟ್ಟಲಾಗಿದೆ. ಬಹಿರಂಗ ಸಭೆ ನಡೆಯಲಿದ್ದು ಸಾವಿರಾರು ಕಾರ್ಯಕರ್ತರು ಭಾಗವಹಿಸುವರು.

ವಿಪಕ್ಷಗಳೊ? ವಿಫಲ ಪಕ್ಷಗಳೊ?



ಗತಿಬಿಂಬ

ವೈ.ಗ. ಜಗದೀಶ್

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ಪಕ್ಷದಷ್ಟೇ ವಿಪಕ್ಷಗಳ ಪಾತ್ರವೂ ಮುಖ್ಯ. ಜನಪರ ಆಡಳಿತ ರೂಪುಗೊಳ್ಳುವಲ್ಲಿ ಪ್ರತಿ ಪಕ್ಷಗಳು ಜಾಗೃತವಾಗಿರುವುದು ಅಗತ್ಯ. ದುರದೃಷ್ಟವಶಾತ್, ರಾಜ್ಯದಲ್ಲಿನ ವಿಪಕ್ಷಗಳು ವಿಫಲ ಪಕ್ಷಗಳಾಗಿವೆ; ತಮ್ಮ ಹೊಣೆಗಾರಿಕೆ ಮರೆತು ಶಾಂತಿ–ಸೌಹಾರ್ದ ಕದಡುವ ಕೆಲಸದಲ್ಲಿ ತೊಡಗಿವೆ.

ಹಾಸನದಲ್ಲಿ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆಯ ಮೇಲೆ ಟ್ಯಾಂಕರ್ ಹರಿಯಿತು. ಹಿಂದುಳಿದ, ಪರಿಶಿಷ್ಟ ಜಾತಿಯ 10 ಜನ ದಾರುಣವಾಗಿ ಮೃತಪಟ್ಟರು. ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದವರಿಗೆ ಕೆಲವು ಮುಸ್ಲಿಂ ಯುವಕರು ತಮ್ಮ ರಕ್ತವನ್ನು ದಾನ ಮಾಡಿದರು. ಬೆಳಗಾವಿಯಲ್ಲಿ ನಡೆದ ಈದ್ ಮಿಲಾದ್ ಮೆರವಣಿಗೆಯಲ್ಲಿ ಗಣೇಶೋತ್ಸವ ಸಮಿತಿಯ ಪದಾಧಿಕಾರಿಗಳು ಪಾಲ್ಗೊಂಡರು. ಭಾರತೀಯ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಸಹಬಾಳ್ವೆಯ ಚಹರೆಗಳು ದೊಡ್ಡ ಸುದ್ದಿಯಾಗಲಿಲ್ಲ.

ರಾಯಚೂರಿನ ಗಂಗಾನಿವಾಸ್ ರಸ್ತೆಯಲ್ಲಿ ಹೋಗುತ್ತಿದ್ದ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆಯ ಮೇಲೆ ಕಲ್ಲೆಸೆತ ನಡೆಯಿತು. ಪರಿಸ್ಥಿತಿ ಉದ್ವಿಗ್ನತೆಗೆ ತಿರುಗಿತು. ವಿಡಿಯೊದಲ್ಲಿ ಸೆರೆಯಾಗಿದ್ದ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದರು. ಅವರಿಬ್ಬರೂ ಹಿಂದೂಗಳೆಂದು ಗೊತ್ತಾಯಿತು. ಅಲ್ಲಿಗೆ ಪ್ರಕರಣ ತಣ್ಣಗಾಯಿತು.

ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ಅಲ್ಲಿನ ರಾಮ್ ರಹೀಂ ನಗರದ ಮಸೀದಿ ಎದುರು ಹೋಗುತ್ತಿದ್ದಾಗ, ಮೆರವಣಿಗೆಯ ಮೇಲೆ ಕಲ್ಲು ತೂರಿದ ಘಟನೆ ನಡೆಯಿತು. ಈ ಪ್ರಕರಣದಲ್ಲಿ 21 ಮುಸ್ಲಿಂ ಯುವಕರನ್ನು ಪೊಲೀಸರು ಬಂಧಿಸಿದರು. ಪರಿಸ್ಥಿತಿ ತಹಬಂದಿಗೆ ಬಂದಂತಿತ್ತು. ಮದ್ದೂರಿಗೆ ಭೇಟಿ ನೀಡಿದ ವಿರೋಧ ಪಕ್ಷದ ನಾಯಕರು ಖಂಡನೆಯ ಹೆಸರಿನಲ್ಲಿ ಪ್ರಚೋದನಾಕಾರಿ ಭಾಷಣ ಮಾಡಿದರು. ದುಷ್ಟಜಂತುಗಳು ಎಸಗಿದ ಹೀನಕೃತ್ಯವನ್ನು ರಾಷ್ಟ್ರಮಟ್ಟದ ಸುದ್ದಿ ಮಾಡಲಾಯಿತು. ದೇಶಸೇವೆ ಮಾಡಿ ಎಂದು ರಾಜ್ಯದ ಜನ ದೆಹಲಿಗೆ ಕಳುಹಿಸಿದ ಕಾರಣಕ್ಕೆ ಕೇಂದ್ರ ಸಚಿವರಾಗಿರುವ ಪ್ರಲ್ಹಾದ ಜೋಶಿ, ಎಚ್.ಡಿ. ಕುಮಾರಸ್ವಾಮಿ ಮದ್ದೂರಿನ ದುಷ್ಕೃತ್ಯವನ್ನು ಜಾಗತಿಕ ಸುದ್ದಿಯಾಗಿಸಲು ತಮ್ಮಟೆ ಬಾರಿಸಿದರು.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ನಾಯಕರನ್ನು ಛಾಯಾ (ಶಾಡೊ) ಮುಖ್ಯಮಂತ್ರಿ ಎಂದೇ ಕರೆಯಲಾಗುತ್ತದೆ. ಸಚಿವರ ಅಧಿಕಾರ, ಸರ್ಕಾರಿ ನಿವಾಸ, ಕಾರು, ಪ್ರಯಾಣ ಭತ್ಯೆಯೂ ಇದೆ. ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ನಡೆಸುವ ಅಧಿಕಾರವೂ ಇರುತ್ತದೆ. ಸರ್ಕಾರದ ಖರ್ಚುವೆಚ್ಚಗಳ ಮೇಲೆ ನಿಗಾ ಇಡುವ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷ ಸ್ಥಾನವೂ ಅವರಿಗೆ ಮೀಸಲು. ಸರ್ಕಾರದ ವೈಫಲ್ಯ, ಭ್ರಷ್ಟಾಚಾರ, ಜನವಿರೋಧಿ ಧೋರಣೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಹೊಣೆ ವಿರೋಧ ಪಕ್ಷದ್ದಾಗಿರುತ್ತದೆ. ತನ್ನ ಅಧಿಕೃತ ಕರ್ತವ್ಯವನ್ನು ವಿರೋಧ ಪಕ್ಷ ಸಮರ್ಥವಾಗಿ ನಿರ್ವಹಿಸಿದರೆ ಸರ್ಕಾರ ನಡೆಸುವವರು ನಿತ್ಯವೂ ಕತ್ತಿಯ ಮೇಲಿನ ನಡಿಗೆ ಮಾಡಬೇಕಾದಂತಹ ಜಾಗೃತಾವಸ್ಥೆಯಲ್ಲಿ ಇರಬೇಕಾಗುತ್ತದೆ.

ಸಮರ್ಥ ನಾಯಕರಿಲ್ಲದ ಬಿಜೆಪಿ ಹಾಗೂ ಜೆಡಿಎಸ್ ಈ ವಿಷಯದಲ್ಲಿ ಎಡವಿ ಬಿದ್ದಿವೆ. ಸರ್ಕಾರ ಬಂದ ಆರಂಭಿಕ ದಿನಗಳಲ್ಲಿ ಕೆಲವು ಹೋರಾಟಗಳ ಮೂಲಕ ಜನರನ್ನು ಜಾಗೃತಗೊಳಿಸುವ ಕೆಲಸವನ್ನು ಬಿಜೆಪಿ ಮಾಡಿದ್ದುಂಟು. ಆದರೆ, ನಾಯಕತ್ವಕ್ಕಾಗಿನ ಕಚ್ಚಾಟ, ವಿಪಕ್ಷ ನಾಯಕ ಆರ್. ಅಶೋಕ ಹಾಗೂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ನಾಯಕರಲ್ಲಿರುವ ಅಸಮಾಧಾನ ಪಕ್ಷದ ಬುಡವನ್ನೇ ಅಲುಗಾಡಿಸಿದೆ. ಯಾವುದೇ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವ ದಿಟ್ಟತನವೂ ಕಾಣಿಸುತ್ತಿಲ್ಲ. ಪಕ್ಷದವರೇ ತಮ್ಮ ನಾಯಕರನ್ನು ಬಹಿರಂಗವಾಗಿ ಟೀಕಿಸುತ್ತಿರುವಂತೆ ‘ಹೊಂದಾಣಿಕೆ’ ಹೊಂಡದಲ್ಲಿ ಬಿಜೆಪಿ ಹೂತುಹೋಗಿದೆ.

ಬಿಜೆಪಿ ಅಧಿಕಾರದಲ್ಲಿದ್ದಾಗ ಶೇ 40ರ ಲಂಚ ಪ್ರಕರಣ ಸೇರಿದಂತೆ ಹಲವು ಹಗರಣಗಳನ್ನು ಮುಂದಿಟ್ಟು ಕಾಂಗ್ರೆಸ್ ಆಂದೋಲನವನ್ನೇ ನಡೆಸಿತ್ತು. ಈಗ ಲಂಚ ಪ್ರಮಾಣ ಶೂನ್ಯಕ್ಕೆ ಬಂದು ನಿಂತಿಲ್ಲ. ಕಾಂಗ್ರೆಸ್ ನಾಯಕರೇ ಹೇಳುವಂತೆ ಬಿಜೆಪಿ ಸರ್ಕಾರದ ಅವಧಿಯ ಪ್ರಮಾಣವನ್ನು ನೆಗೆದು, ಮುಂದೆ ಹೋಗಿದೆ. ಬಹುತೇಕ ಕಚೇರಿಗಳಲ್ಲಿ ಲಂಚ ಕೊಡದೇ ಕೆಲಸವೇ ಆಗುತ್ತಿಲ್ಲ. ಹಗರಣಗಳಂತೂ ದೃಷ್ಟಿಬೊಟ್ಟನಂತೆ ಕಣ್ಣಿಗೆ ಕುಕ್ಕುತ್ತಿವೆ. ಮಳೆ ತಂದ ಹಾನಿಯಿಂದಾಗಿ ರೈತರ ಗೋಳು ಕೇಳುವವರೇ ಇಲ್ಲ. ಈ ಹೊತ್ತಿನಲ್ಲಿ ಬಿ.ಎಸ್. ಯಡಿಯೂರಪ್ಪ ಸಕ್ರಿಯವಾಗಿದ್ದರೆ, ಎಚ್.ಡಿ. ಕುಮಾರಸ್ವಾಮಿ ಕೇಂದ್ರಕ್ಕೆ ಹೋಗದೇ ಇದ್ದಿದ್ದರೆ, ಸರ್ಕಾರ ನಡೆಸುವವರು ನಿದ್ದೆ ಮಾಡಲು ಸಾಧ್ಯವಾಗುತ್ತಿರಲಿಲ್ಲ.

ವಿಪಕ್ಷವೆಂಬುದು ವಿಫಲ ಪಕ್ಷವಾಗಿದೆ. ಹೀಗಾಗಿಯೇ, ಜನರಿಗೆ ಸಂಬಂಧಿಸದೇ ಇರುವ ವಿಷಯ ಮುಂದಿಟ್ಟು ದಿನವೂ ಆ ಚಲೋ ಈ ಚಲೋ ಮಾಡುವುದಕ್ಕೆ ನಾಯಕರು ಸೀಮಿತರಾಗಿದ್ದಾರೆ.

ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶದ ಮೇರೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ ರಚಿಸಿತು. ತನಿಖೆ ಆರಂಭವಾಗಿ ಶವಗಳ ಅವಶೇಷ ಪತ್ತೆಯ ಕಾರ್ಯಾಚರಣೆ ಚುರುಕುಗೊಳ್ಳುವವರೆಗೂ ಸುಮ್ಮನಿದ್ದ ಬಿಜೆಪಿ ದಿಗ್ಗನೆದ್ದು, ಧರ್ಮಸ್ಥಳ ಚಲೋ ನಡೆಸಿತು.

ಬುಕರ್ ಪ್ರಶಸ್ತಿ ಮುಡಿಗೇರಿಸಿಕೊಂಡು ದೇಶಕ್ಕೆ ಹೆಮ್ಮೆ ತಂದ ಬಾನು ಮುಷ್ತಾಕ್ ಅವರನ್ನು ನಾಡಹಬ್ಬ ದಸರಾ ಉದ್ಘಾಟನೆಗೆ ಆಯ್ಕೆ ಮಾಡಿದಾಗಲೂ ಬಿಜೆಪಿ ಸುಮ್ಮನಿತ್ತು. ಮಧ್ಯರಾತ್ರಿ ಎಚ್ಚರಗೊಂಡಂತೆ ಎದ್ದು ಕುಳಿತ ಬಿಜೆಪಿ, ಅದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿತಲ್ಲದೇ ಹೋರಾಟಕ್ಕೂ ಇಳಿಯಿತು. ಮದ್ದೂರಿನಲ್ಲಿ ಕಲ್ಲು ತೂರಿದ ಪುಂಡರನ್ನು ಪೊಲೀಸರು ಹೆಡೆಮುರಿ ಕಟ್ಟಿದ್ದರು. ಹಾಗಿದ್ದರೂ ಮದ್ದೂರು ಚಲೋ ನಡೆಸಲಾಯಿತು. ಇವು ಯಾವುವೂ ಬಿಜೆಪಿ ನಾಯಕರ ತಲೆಗೆ ಹೊಳೆದ ಹೋರಾಟದ ಹೊಳಹುಗಳಲ್ಲ. ದೆಹಲಿಯಲ್ಲಿ ಕುಳಿತು ಕರ್ನಾಟಕದ ‘ಕಮಲ’ವನ್ನು ಆಡಿಸುತ್ತಿರುವ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರ ‘ಎಕ್ಸ್’ ಮಹಿಮೆ. ಸಂತೋಷ್ ಅವರನ್ನು ಮೆಚ್ಚಿಸಲೋಸುಗ ಬೀದಿಗೆ ಇಳಿದಿದ್ದಕ್ಕೆ ಸಾಕ್ಷ್ಯ ಬೇಕಾದರೆ ಆ ಪಕ್ಷದ ರಾಜ್ಯ ನಾಯಕರ ‘ಎಕ್ಸ್’ ಖಾತೆಯಲ್ಲೊಮ್ಮೆ ಇಣುಕಿದರೆ ಸಾಕು.

ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳಲೆಂಬಂತೆ, ಜನರ ಮನಸ್ಸನ್ನು ಕದಡುವ ವಿಷಯವನ್ನು ಮುಂದಿಟ್ಟುಕೊಂಡ ಬಿಜೆಪಿ ನಾಯಕರು ಪೈಪೋಟಿಗೆ ಬಿದ್ದವರಂತೆ ಹೋರಾಟಕ್ಕೆ ಇಳಿದಿದ್ದಾರೆ. ಮಾತನ್ನೇ ಆಡದಂತಿದ್ದ ಸ್ವಯಂ ಘೋಷಿತ ‘ಸಜ್ಜನ’ರೆಲ್ಲ ತಮ್ಮ ಪಕ್ಷದ ಯಾವ ಕೂಗುಮಾರಿಗಳಿಗೂ ಕಡಿಮೆ ಇಲ್ಲವೆಂಬಂತೆ ತೋರಿಸಿಕೊಳ್ಳತೊಡಗಿದ್ದಾರೆ.

ಕೋಮುವಿಷ ಬಿತ್ತಿದರೆ ಚುನಾವಣೆಯಲ್ಲಿ ಗೆದ್ದು ಮತ್ತೆ ಅಧಿಕಾರ ಹಿಡಿಯಬಹುದೆಂಬ ಹುಳವನ್ನು ಬಿಜೆಪಿ ಮಂದಿಯ ತಲೆಗೆ ಬಿಟ್ಟವರು ಯಾರೋ, ಇಲ್ಲಿ ಗದ್ದಲ ಎಬ್ಬಿಸುವವರು ಮತ್ಯಾರೋ, ಪ್ರಾಣವನ್ನು ಕಳೆದುಕೊಳ್ಳುವವರು ಮಾತ್ರ ಬಡ ಕುಟುಂಬಗಳ ಮಕ್ಕಳು. ಧರ್ಮದ ಹೆಸರಿನ ರಾಜಕಾರಣ ತಮ್ಮ ಕೈಹಿಡಿಯುವುದಿಲ್ಲ ಎಂಬುದು ಬಿಜೆಪಿ ನಾಯಕರಿಗೆ ಗೊತ್ತಿಲ್ಲದ ಸಂಗತಿಯೇನಲ್ಲ. ರಾಜ್ಯದಲ್ಲಿ ಎರಡು ಬಾರಿ ಬಿಜೆಪಿ ಅಧಿಕಾರ ಹಿಡಿದರೂ ಅದು ಬಹುಮತ ಪಡೆದು ಅಧಿಕಾರಕ್ಕೆ ಬಂದಿದ್ದಲ್ಲ. ‘ಆಪರೇಷನ್ ಕಮಲ’ದ ಹೀನಹಾದಿಯಲ್ಲಿ ಗದ್ದುಗೆಗೇರಿದ್ದಷ್ಟೆ. ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಪ್ರಭಾವಳಿ ಸಾಕಷ್ಟಿದ್ದರೂ 2018ರಲ್ಲಿ ಬಿಜೆಪಿ ಅಧಿಕಾರದ ಹತ್ತಿರವೂ ಸುಳಿಯಲಿಲ್ಲ. 2019ರಲ್ಲಿ ಆಪರೇಷನ್ ಕಮಲ ನಡೆಸಿ, ಯಡಿಯೂರಪ್ಪ ಮುಖ್ಯಮಂತ್ರಿಯಾದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಹಿಜಾಬ್, ಹಲಾಲ್, ಆಜಾನ್, ಮುಸ್ಲಿಮರ ವ್ಯಾಪಾರ- ಮುಸ್ಲಿಂ ಚಾಲಕರ ವಾಹನಗಳಿಗೆ ನಿರ್ಬಂಧ, ಮುಸ್ಲಿಂ ಮೀಸಲಾತಿ ರದ್ದು, ಪಠ್ಯದ ಕೋಮುವಾದೀಕರಣ, ಉರಿಗೌಡ–ನಂಜೇಗೌಡ ಎಂಬ ಹುಸಿ ಪಾತ್ರಗಳ ಸೃಷ್ಟಿ, ಹೀಗೆ ಏನೆಲ್ಲಾ ಮಾಡಲಾಯಿತು. 2023ರಲ್ಲಿ ಅಧಿಕಾರದಲ್ಲಿದ್ದರೂ ಆ ಪಕ್ಷದ ಬಲ 66ರಿಂದ ಮೇಲೇಳಲಿಲ್ಲ. ಈಗ ಮತ್ತದೇ ಹಳೆ ಕಸುಬು ಹಿಡಿದು, ಮತ ಒಡೆದು ಅಧಿಕಾರ ಹಿಡಿಯಬಹುದೆಂಬ ಕನಸಿನ ದಾರಿಯಲ್ಲಿ ಬಿಜೆಪಿ ಹೊರಟಿದೆ. ಕಡಿ–ಕೊಲ್ಲು, ಬುಲ್ಡೋಜರ್ ‘ಸೇವೆ’ಯ ಮಾತುಗಳು ರಾರಾಜಿಸಲಾರಂಭಿಸಿವೆ. ಹೇಗಾದರೂ ಅಧಿಕಾರಕ್ಕೆ ಬಂದರೆ ಮಂತ್ರಿಗಿರಿ ಹಿಡಿಯುವ ತವಕದಲ್ಲಿ ಸಂತೋಷ್ ಅವರನ್ನು ಓಲೈಸಲು ಎಲ್ಲರೂ ತುದಿಗಾಲಲ್ಲಿ ನಿಂತಂತಿದ್ದಾರೆ. ಜನರನ್ನು ಸಂಘರ್ಷಕ್ಕೆ ದೂಡಿ ಸಂಕಟಕ್ಕೆ ಸಿಲುಕಿಸುವ ಇಂತಹ ತಂತ್ರಗಾರಿಕೆ ಬದಲು, ಜನರ ಕಷ್ಟಗಳಲ್ಲಿ ಭಾಗಿಯಾಗಿ, ಅವರಿಗೆ ಸಂತೋಷ ತಂದರೆ ಅಧಿಕಾರಕ್ಕೆ ಹತ್ತಿರವಾದರೂ ಆಗಬಹುದು. ಇಲ್ಲದಿದ್ದರೆ, ಮತ್ತೊಂದು ಅವಧಿ ಪೂರ್ತಿ ‘ಬೆಂಕಿ’ಯ ನೆಂಟಸ್ತಿಕೆಯನ್ನೇ ನೆಚ್ಚಿಕೊಳ್ಳಬೇಕಾದೀತು.

ಕೋಮುಸಂಘರ್ಷಕ್ಕೆ ಕಡ್ಡಿಗೀರುತ್ತಿರುವವರು ‘ಹೊಡೆಯುವುದು ಗೊತ್ತು, ತಲೆ ಕಡಿಯುವುದು ಗೊತ್ತು’ ಎನ್ನುತ್ತಾ, ಖಾಲಿ ಹಾಳೆಯಂತಿರುವ ಯುವಕರಲ್ಲಿ ಯುದ್ಧೋನ್ಮಾದ ಬಿತ್ತುತ್ತಿದ್ದಾರೆ. ‘ಬಡವರ ಮಕ್ಕಳನ್ನು ಬೆಂಕಿಗೆ ತಳ್ಳಿ ತಮ್ಮ ಅಸ್ತಿತ್ವ ಬಲಪಡಿಸಿಕೊಳ್ಳುತ್ತಿರುವ ಇಂತಹವರೆಲ್ಲ, ತಮ್ಮ ಮಕ್ಕಳನ್ನು ದೇಶ-ವಿದೇಶದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಓದಿಸುತ್ತಿದ್ದಾರೆ. ಯಾರದೋ ಮಕ್ಕಳನ್ನು ಬಾವಿಗೆ ತಳ್ಳುವ ಮೊದಲು, ತಾವೇ ಹೇಳುವ ಧರ್ಮರಕ್ಷಣೆಗೆ ತಮ್ಮ ಮಕ್ಕಳ ಕೈಗೆ ದೊಣ್ಣೆ–ಮಚ್ಚು ಕೊಡುತ್ತಾರೆಯೇ ಎಂದು ಆತ್ಮವಿಮರ್ಶೆ ಮಾಡಿಕೊಳ್ಳಲಿ’ ಎಂದು ಬಿಜೆಪಿ ಕಾರ್ಯಕರ್ತರೇ ಅಸಹನೆ ವ್ಯಕ್ತಪಡಿಸುತ್ತಾರೆ.

ಕಮಲ ಕೆಸರಿನಲ್ಲಿ ಅರಳುತ್ತದೆ. ಹಿಂದೆ ಸರ್ಕಾರ ನಡೆಸಿದ ಹೊತ್ತಿನೊಳಗೆ ಅಭಿವೃದ್ಧಿಯನ್ನು ಬದಿಗೆ ಸರಿಸಿ, ಕೋಮುಕೆಸರಿನಲ್ಲಿಯೇ ಕಮಲ ಅರಳಿಸಲು ಬಿಜೆಪಿಯವರು ಹೊರಟರು. ಶಾಂತಿ–ಸೌಹಾರ್ದ ಬಯಸುವ ನಾಡವರು ಕಮಲವನ್ನೇ ಮುದುಡಿಸಿದರು. ಸದ್ಯ ಎತ್ತು ಏರಿಗೆ–ಕೋಣ ನೀರಿಗೆ ಎಂಬ ಸ್ಥಿತಿಯಲ್ಲಿರುವ ಬಿಜೆಪಿಯನ್ನು ಕೆಸರಿಗೆ ಕೊಂಡೊಯ್ಯುವ ಯತ್ನದಲ್ಲಿ ಕೆಲವರಿದ್ದಾರೆ. ಕಮಲ ಅರಳಲು ಕೆಸರಷ್ಟೇ ಸಾಲದು. ಶುದ್ಧ ನೀರು, ಗಾಳಿಯೂ ಬೇಕು. ಅವುಗಳನ್ನೇ ವಿಷವಾಗಿಸಿದರೆ ಅರಳಬಹುದಾದ ಕಮಲ, ಮುದುಡುವುದಲ್ಲ, ಸುರುಟಿಯೇ ಹೋಗಲಿದೆ. ಕೋಮುಕೆಸರಿನಲ್ಲಿ ಹೊರಳಾಡುವ ತಮ್ಮ ಚಾಳಿ ಬಿಟ್ಟು, ತಮಗೆ ಕೊಟ್ಟ ಅಧಿಕಾರವನ್ನು ಸರ್ಕಾರವನ್ನು ಶುದ್ಧವಾಗಿಸಲು ಬಳಸಲಿ. ಆಗ ಜನರಿಗೆ ನೆಮ್ಮದಿ ದಕ್ಕೀತು.



ವಾಚಕರ ವಾಣಿ

ಜ್ಞಾನಸೇತು: ಮಕ್ಕಳ ಕೈಗೆ ಮೊಬೈಲ್

ಶಿಕ್ಷಣ ಇಲಾಖೆಯು ಇತ್ತೀಚೆಗೆ ಖಾನ್ ಅಕಾಡೆಮಿಯ ಸಹಭಾಗಿತ್ವದಡಿ ‘ಜ್ಞಾನಸೇತು’ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ. ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್‌ಗೆ ಸಂಬಂಧಿಸಿದಂತೆ ಕಂಪ್ಯೂಟರ್, ಮೊಬೈಲ್ ಅಥವಾ ಟ್ಯಾಬ್ ಬಳಸಿ ವೈಯಕ್ತಿಕ ಲಾಗಿನ್ ಮೂಲಕ ಮಕ್ಕಳ ಕಲಿಕೆಗೆ ಅವಕಾಶ ಕಲ್ಪಿಸಲಾಗಿದೆ. ಆದರೆ, ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಇಲ್ಲ. ಇದರಿಂದ ಮಕ್ಕಳಿಗೆ ಮನೆಯಲ್ಲಿಯೇ ಸ್ಮಾರ್ಟ್‌ಫೋನ್ ಬಳಸಿ ವಾರದಲ್ಲಿ ಮೂರು-ನಾಲ್ಕು ದಿನ ಕಲಿಕೆಯಲ್ಲಿ ತೊಡಗಿಸಲು ಖಾನ್ ಸಂಸ್ಥೆ ಹೇಳುತ್ತಿದೆ. ಗ್ರಾಮೀಣ ಪ್ರದೇಶದ ಬಹುತೇಕ ಮಕ್ಕಳ ಪೋಷಕರು ಅನಕ್ಷರಸ್ಥರು. ಅವರಿಗೆ ಮಕ್ಕಳು ಮೊಬೈಲ್‌ನಲ್ಲಿ ಏನು ಮಾಡುತ್ತಿದ್ದಾರೆ ಎಂದು ಗೊತ್ತಾಗುವುದಿಲ್ಲ. ಈಗಾಗಲೇ, ಮೊಬೈಲ್ ಗೀಳಿನಿಂದ ಹಾಳಾಗುತ್ತಿರುವ ವಿದ್ಯಾರ್ಥಿಗಳು ಮತ್ತೆ ಮೊಬೈಲ್ ವ್ಯಸನಕ್ಕೆ ಬೀಳುವ ಅಪಾಯ ಇದೆ. ಶಾಲೆಯಲ್ಲಿಯೇ ಟ್ಯಾಬ್ ಅಥವಾ ಕಂಪ್ಯೂಟರ್ ಮೂಲಕ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವುದು ಒಳ್ಳೆಯದು.

ರಾಧಾ ಅಶೋಕ ಚನ್ನಳ್ಳಿ, ಹಿರೇಕೆರೂರು

ಹೈಕೋರ್ಟ್‌ನ ನ್ಯಾಯಯುತ ತೀರ್ಪು

ಸಾಹಿತಿ ಬಾನು ಮುಷ್ತಾಕ್ ಅವರು, ಈ ಬಾರಿಯ ದಸರಾ ಉದ್ಘಾಟಿಸುವುದನ್ನು ವಿರೋಧಿಸಿ ಮೂವರು ಸಲ್ಲಿಸಿದ್ದ ತಕರಾರು ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿರುವುದಷ್ಟೇ ಅಲ್ಲ; ಸರ್ಕಾರದ ನಿರ್ಧಾರವನ್ನು ಎತ್ತಿ ಹಿಡಿದಿದೆ. ‘ಕೆಟ್ಟದರ ಮೇಲೆ ಒಳ್ಳೆಯದರ ವಿಜಯ’ ಎಂಬುದನ್ನು ಒತ್ತಿ ಹೇಳಿದೆ. ನಾಡಹಬ್ಬ ನಾಡಿನ ಎಲ್ಲರಿಗೂ ಸಮಾನ ಹಬ್ಬ. ಇಷ್ಟಕ್ಕೂ ಸೃಜನಶೀಲ ಮನಸ್ಸಿಗೆ ಯಾವುದೇ ಧರ್ಮದ ಕಟ್ಟುಪಾಡುಗಳಿರುವುದಿಲ್ಲ. ಈ ತೀರ್ಪು ಕೇವಲ ಮಾಜಿ ಸಂಸದ ಪ್ರತಾಪ ಸಿಂಹ ಅವರಿಗೆ ಮಾತ್ರ ಮುಖಭಂಗ ಅಲ್ಲ, ಬಾನು ಅವರ ಆಯ್ಕೆ ವಿರೋಧಿಸಿದ ಎಲ್ಲರ ಮನಃಸ್ಥಿತಿಗೂ ಚಾಟಿ ಬೀಸಿದೆ.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಮಾಧ್ಯಮ ಸ್ವಾತಂತ್ರ್ಯದ ವಿಡಂಬನೆ

ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ವಿದ್ಯುನ್ಮಾನ ಮಾಧ್ಯಮಗಳು ಎಲ್ಲಿಲ್ಲದ ಬಣ್ಣ ಹಚ್ಚಿ ಷಡ್ಯಂತ್ರಕ್ಕೆ ಮಾದರಿ ಎಂಬಂತೆ ತುತ್ತೂರಿ ಊದುತ್ತಿವೆ. ಇದು ಮಾಧ್ಯಮ ಸ್ವಾತಂತ್ರ್ಯದ ವಿಡಂಬನೆಯೇ ಸರಿ.

ಚನ್ನಬಸವ ಪುತ್ತೂರ್ಕರ, ಉಡುಪಿ

ಸಿ.ಎಂ ಹೇಳಿಕೆ ಒಪ್ಪಿಗೆಗೆ ಅರ್ಹ

ಹಿಂದೂ ಧರ್ಮದಿಂದ ಕ್ರೈಸ್ತ ಅಥವಾ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡವರು ಆಯಾ ಧರ್ಮಕ್ಕೆ ಸೇರಿದವರಾಗಿರುತ್ತಾರೆಯೇ ಹೊರತು ಮತ್ತೆ ಹಿಂದೂ ಧರ್ಮೀಯರಾಗುವುದಿಲ್ಲ. ಈ ದೃಷ್ಟಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ‘ಮತಾಂತರ ಗೊಂಡವರು ಕ್ರೈಸ್ತರೇ’ ಎಂದು ಹೇಳಿರುವುದು ಸರಿಯಾಗಿಯೇ ಇದೆ. (ಪ್ರ.ವಾ., ಸೆಪ್ಟೆಂಬರ್ 13). ಹಿಂದೂ ಧರ್ಮದ ಜಾತಿಗಳು ಪ್ರಧಾನವಾಗಿ ಕಸುಬು ಆಧಾರಿತವಾದವು ಮತ್ತು ಪ್ರತಿಯೊಂದು ಜಾತಿಗೂ ಅದರದೇ ಆದ ಕುಲದೇವರು ಅರ್ಥಾತ್ ಕುಟುಂಬಕ್ಕೆ ಮನೆದೇವರು, ಆಚಾರ, ವಿಚಾರಗಳಿರುತ್ತವೆ. ಇವನ್ನೆಲ್ಲ ತೊರೆದ ಮೇಲೆ ಮತ್ತು ಅನ್ಯಧರ್ಮೀಯ ದೇವರು ಮತ್ತು ಆಚಾರ ವಿಚಾರವನ್ನು ಒಪ್ಪಿ ಅಪ್ಪಿಕೊಂಡ ಮೇಲೆಯೂ ಅವರು ಮೂಲ ಜಾತಿ, ಧರ್ಮ ಹೇಳುವುದು ಇಬ್ಬಂದಿತನ. ಮತಾಂತರಗೊಂಡವರನ್ನು ಅವರ ಹೊಸ ಧರ್ಮದ ಹೆಸರಿನಲ್ಲಿಯೇ ಗುರುತಿಸಬೇಕು ಮತ್ತು ನಮೂದಿಸಬೇಕು.

ಹೊರೆಯಾಲ ದೊರೆಸ್ವಾಮಿ, ಮೈಸೂರು

ಬರ-ಬೇಕು

ಅನ್ನದಾತ
ಹೊಟ್ಟೆ ತುಂಬಿಸಿಕೊಳ್ಳಲು
ಬೇಡುವುದೊಂದೇ
ಮಳೆ ‘ಬರಬೇಕು’
ಭ್ರಷ್ಟ ರಾಜಕಾರಣಿ
ತನ್ನ ಖಜಾನೆ
ತುಂಬಿಸಿಕೊಳ್ಳಲು
ಸದಾ ಬೇಡುವುದೊಂದೇ
‘ಬರ-ಬೇಕು, ಬರ-ಬೇಕು!’

ಸೋಮಲಿಂಗಪ್ಪ ಬೆಣ್ಣಿ ಗುಳದಳ್ಳಿ, ಕೊಪ್ಪಳ

ನಿರಂತರ ಕಣ್ಗಾವಲು ಅಗತ್ಯ

ಗಣೇಶ ವಿಸರ್ಜನೆಯ ಮೆರವಣಿಗೆ ವೇಳೆ ಕಲ್ಲುತೂರಾಟ ಮತ್ತು ಭಾರತದ ವಿರೋಧಿ ಘೋಷಣೆ ಕೂಗುವವರು ಅಮಾಯಕರಲ್ಲ. ಪರಿಸ್ಥಿತಿ ನೋಡಿಕೊಂಡು ಅವರು ಗಲಭೆ ಎಬ್ಬಿಸುತ್ತಾರೆ. ಇಂಥವರ ಮೇಲೆ ನಿರಂತರ ಕಣ್ಗಾವಲು ಇಡಬೇಕಿದೆ. ಕೋಮುಗಲಭೆ ಹತ್ತಿಕ್ಕಲು ಪೊಲೀಸರು ಕೈಗೊಳ್ಳುವ ಕ್ರಮಗಳು ಅಪರಾಧ ಪ್ರವೃತ್ತಿಯ ಜನರಲ್ಲಿ ಕಾನೂನಿನ ಬಗ್ಗೆ ಭಯ ಹುಟ್ಟಿಸುವಂತಿರಬೇಕು. ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು ಮನದಟ್ಟಾದರೆ ಅವರಲ್ಲಿ ಭಯ ಮೂಡಲಿದೆ. ಇಂಥ ಸಂದರ್ಭಗಳಲ್ಲಿ ಸರ್ಕಾರವು ಹಸ್ತಕ್ಷೇಪ ಮಾಡದೆ ಪೊಲೀಸರಿಗೆ ಮುಕ್ತ ಅವಕಾಶ ನೀಡಬೇಕು.

ಉದಯ ಮ. ಯಂಡಿಗೇರಿ, ಧಾರವಾಡ

ದಸರಾ ರಜೆ ಮೊಟಕು ಮಾಡಬೇಡಿ

ನವರಾತ್ರಿ ಹಬ್ಬವು ಈ ಬಾರಿ ಮುಂಚಿತವಾಗಿ ಪ್ರಾರಂಭವಾಗಿದೆ. ಶಾಲೆಗಳಿಗೆ ಸೆಪ್ಟೆಂಬರ್ 21ರಿಂದ ಅಕ್ಟೋಬರ್ 7ರವರೆಗೆ ದಸರಾ ರಜೆ ನೀಡಬೇಕೆಂದು ಶಿಕ್ಷಣ ಇಲಾಖೆಯು ಆದೇಶಿಸಿದೆ. ಆದರೆ, ಪ್ರತಿ ವರ್ಷ ಹಲವು ಖಾಸಗಿ ಶಾಲೆಗಳು ಶಿಕ್ಷಣ ಇಲಾಖೆ ಆದೇಶವನ್ನು ಮೀರಿ, ದಸರೆ ರಜೆಯನ್ನು ಮೊಟಕುಗೊಳಿಸುತ್ತವೆ. ರಜೆ ನೀಡುವುದು ಮಕ್ಕಳಿಗೆ ವಿರಾಮ ಸಿಗಲಿ ಎಂದಲ್ಲ. ಅವರಿಗೆ ನಾಡಿನ ಕಲೆ, ಸಂಸ್ಕೃತಿಯ ಪರಿಚಯವಾಗಲಿ, ಸಾಮರಸ್ಯ ಒಡಮೂಡಲಿ ಎನ್ನುವುದು ರಜೆಯ ಉದ್ದೇಶವಾಗಿದೆ. ಶಾಲೆಯ ಹೊರಗೂ ಒಂದು ಕಲಿಕೆ ನಡೆಯುತ್ತದೆ ಎನ್ನುವ ಪ್ರಜ್ಞೆಯು, ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳಲ್ಲಿ ಮೂಡಬೇಕಿದೆ. ಈ ಬಾರಿ ಪೂರ್ಣ ಪ್ರಮಾಣದ ದಸರಾ ರಜೆ ಖಾಸಗಿ ಶಾಲೆ ಮಕ್ಕಳಿಗೂ ದೊರೆಯಲಿ.

ಸುರೇಂದ್ರ ಪೈ, ಭಟ್ಕಳ

ಚುರುಮುರಿ



ಟ್ರಂಪು ವರ್ಸಸ್ ಪಂಟ್ರು

• ಡಿ.ಎಸ್. ಲಿಂಗರಾಜು

‘ಅಣ್ತಮ್ಮದೀರು ಅಂದಮ್ಯಾಲೆ ಏಡು ಮಾತು ಬತ್ತವೆ, ಹೋಯ್ತವೆ. ಅದುಕ್ಕೆ ಸಿಟುಗಂದು ಮಾತು ಬುಟ್ಟು ಆಗದೋರ ಜೊತೆಗೆ ಸೇರಿಕ್ಯಂದ್ರೆ ಆದದೇ?’ ತುರೇಮಣೆ ಯಾವುದೋ ವಿಷಯ ತೆಗೆದರು.

‘ಏನು ಮಾತಾಡ್ತಿದೀರಿ ನೀವು? ಯಾವ ಅಣ್ತಮ್ಮದೀರು? ಸಿಟ್ಟುಗಂದೋರು ಯಾರು?’ ಅಡ್ಡ ಮಾತಾಡಿದೆ.

‘ಅಣ್ಣನ ಬುಟ್ಟು ಬ್ಯಾರೇರ ತಾವು ಪೆಟ್ರೋಲೆಣ್ಣೆ ತಗಂದ್ರೆ ಕ್ವಾಪ ಬರಕುಲ್ವಾ? ಆಯ್ತು ಕಪ್ಪಾ, ನಿನ್ನ ನ್ಯಾಯ ಪಂಚಾತ್ಕೆ ಇಂದ್ಲೇ ಯುದ್ಧ ಪೈಸಲ್ ಆದುದ್ದು ಅಂದುದ್ರೆ ಏನಾಗದು? ಮೊನ್ನೆ ಟ್ರಂಪಣ್ಣ ಈಥರಕೀತರ ಅಂತ ಹೇಳಿಕ್ಯಂದು, ವಿಶ್ವಗುರುಗಳು ಯಾಕಿಂಗೆ ಮಾಡ್ತಾವ್ರೋ, ಕಾಣೆ ಕನುಡಾ ಅಂತ ಕಣ್ಣಗೆ ನೀರಾಕ್ಯಂದ’ ತುರೇಮಣೆ ವಿವರಿಸಿದರು.

‘ಟ್ರಂಪಣ್ಣ ಗೂಗಲ್ ಸುಂದ್ರಣ್ಣನ್ನ, ಮೈಕ್ರೋಸಾಫ್ಟು ಸತ್ಯಣ್ಣನ್ನ ಕರೆಸಿ, ಯಂಗದೀರ ಇವರೇ? ನಮ್ಮ ದೇಸದಲ್ಲಿ ಕಂಡಾಬಟ್ಟೆ ಬಂಡವಾಳ ಹಾಕ್ರಿ. ಎಲ್ಲಾರೂವೆ ಅಮೆರಿಕ ಪಸ್ಟು ಅನ್ನಬೇಕು. ಭಾರತದೋರು ಆವತ್ತು ನಾವು ಕೊಡ್ತಿದ್ದ ಕೇರುಪ್ಪಿಟ್ಟು, ಹಾಲಿನ ಪುಡಿಗೆ ಕಾಯ್ತಿದ್ರು. ಈಗ ನೋಡು… ಅಂತ ಸಿಟ್ಟಾಗ್ಯವನಂತೆ’ ಅಂದೆ ನಾನು.

‘ಟ್ರಂಪಣ್ಣಗೆ ತಿಳೀದು ಕಲಾ, ಸಾಲು ನೆಟ್ಟಗಿದ್ರೆ ಸೊಲ್ಲು ನೆಟ್ಟಗಿರತದೆ ಅಂತ. ಭಾರತದೋರು ಅಮೆರಿಕದಿಂದ ನೂರು ರೂಪಾಯಿ ಕಳುಸಿದ್ರೆ ಅದುಕ್ಕೆ ನಾವೂ ನೂರು ರೂಪಾಯಿ ಟ್ಯಾಕ್ಸು ಹಾಕಿದ್ರಾತು. ಅಮೆರಿಕದ ಎಕಾನಮಿಗೆ ಗುಮ್ಮಕೆ ಸಾಕಲ್ಲವಾ?’ ಅಂದ ತಿಪ್ಪಣ್ಣ.

‘ಅಲ್ಲಕಾ ಇವನೇ, ಅಮೆರಿಕಕ್ಕೆ ನಮ್ಮ ರಾಜಕೀಯದ ಪಂಟ್ರುಗಳ ಕಳುಸಿದ್ರೆ ಸಾಕು ಕನೋ. ಧರ್ಮ, ಜಾತಿಗಣತಿ ಅಂತ ಅಮೆರಿಕವ ಏಡು ತುಂಡಾಕಿ ಬುಡ್ತರೆ. ಬಿಬಿಎಂಪಿ, ಬಿಡಿಎ, ಒಳಚರಂಡಿ, ವಿದ್ಯುತ್ ನಿಗಮದೋವು ಏನೂ ಕಮ್ಮಿ ಇಲ್ಲ. ಇವು ರೋಡೆಲ್ಲಾ ಗುಂಡಿ ಬೀಳಿಸಿ ಜನ ಈಚೆಗೆ ಕಡೀದಂಗೆ ಮಾಡಿ ಇಡೀ ಅಮೆರಿಕದ ಜನ ‘ಇದ್ಯಂತ ಬದುಕು ಕಪ್ಪಾ’ ಅನ್ನಂಗೆ ಮಾಡ್ತರೆ…’ ಯಂಟಪ್ಪಣ್ಣನ ಮಾತಿಗೆ ನಾವು ಬೆಪ್ಪಾದೆವು.

ಸಂಗತ

ಓಝೋನ್ ಸಂರಕ್ಷಣೆ ಹಾದಿಯಲ್ಲಿ ಬೆಳ್ಳಿಚುಕ್ಕಿ

ಕಳೆದ 4 ದಶಕಗಳ ಅವಧಿಯಲ್ಲಿ ಓಝೋನ್ ಪದರಕ್ಕೆ ಆಗುತ್ತಿದ್ದ ಹಾನಿಯನ್ನು ಸಾಕಷ್ಟು ತಡೆಗಟ್ಟಲಾಗಿದೆ. ಆದರೆ, ಆಗಬೇಕಾದ ಸಂರಕ್ಷಣೆ ಕೆಲಸ ಇನ್ನೂ ಸಾಕಷ್ಟಿದೆ.

• ಶ್ರೀಗುರು

ಭೂಮಿಯ ಮೇಲಿನ ಜೀವಸಂಕುಲವನ್ನು ಕಾಯುವ ನೈಸರ್ಗಿಕ ರಕ್ಷಾಕವಚವೆಂದೇ ಓಝೋನ್ ಪ್ರಸಿದ್ಧ. ಈ ಜೀವರಕ್ಷಕ ಪದರವನ್ನು ಜತನದಿಂದ ರಕ್ಷಿಸಲು ಪಣತೊಟ್ಟು, ವೈಜ್ಞಾನಿಕ ಕ್ರಮಗಳ ಮೂಲಕ ಅದಕ್ಕೆ ರಂಧ್ರ ಬೀಳದಂತೆ ತಡೆಯಲು ಮಾಡಿದ ಕೆಲಸಗಳು ಈಗ ಫಲ ಕೊಡುತ್ತಿವೆ.

ಓಝೋನ್ ಪದರವನ್ನು ಸವಕಳಿ ಮಾಡುವ ರಾಸಾಯನಿಕಗಳ ಬಳಕೆಯನ್ನು ತಡೆಗಟ್ಟುವ ಉದ್ದೇಶದ 1987ರ ‘ಮಾಂಟ್ರಿಯಲ್ ಒಪ್ಪಂದ’ದ ಫಲವಾಗಿ, ಶಾಖವರ್ಧಕ ಅನಿಲಗಳ ಒತ್ತಡದಿಂದ ತೆಳುವಾಗುತ್ತಿದ್ದ ಓಝೋನ್ ಪದರವನ್ನು ಕಾಪಾಡುವ ಪ್ರಯತ್ನ ಸಾಕಷ್ಟು ಯಶಸ್ವಿಯಾಗಿದೆ. ಒಪ್ಪಂದ ಜಾರಿಗೆ ಬಂದ ನಂತರದ ಸುಮಾರು ನಾಲ್ಕು ದಶಕಗಳ ಅವಧಿಯಲ್ಲಿ ಓಝೋನ್ ಪದರವು ನಿಧಾನವಾಗಿ ಚೇತರಿಸಿಕೊಳ್ಳುತ್ತಿದೆ. ಅಂಟಾರ್ಕ್ಟಿಕಾದ ಮೇಲಿನ ಓಝೋನ್ ರಂಧ್ರವು ಸಂಕುಚಿತಗೊಳ್ಳುತ್ತಿದ್ದು, ಇದು 2066ರ ವೇಳೆಗೆ 1980ರ ಮಟ್ಟಕ್ಕೆ ಮರಳುವ ನಿರೀಕ್ಷೆಯಿದೆ. ಆರ್ಕ್ಟಿಕ್ ಮತ್ತು ಇತರ ಪ್ರದೇಶಗಳಲ್ಲಿಯೂ ಓಝೋನ್ ಪದರವು 2040ರ ವೇಳೆಗೆ ಸಾಮಾನ್ಯ ಸ್ಥಿತಿಗೆ ಮರಳಬಹುದು ಎಂದು ಅಂದಾಜಿಸಲಾಗಿದೆ. ಓಝೋನ್ ಪದರವನ್ನು ಸಂರಕ್ಷಿಸಲು ನೆರವಾದ ವೈಜ್ಞಾನಿಕ ಕ್ರಮಗಳಿಗೆ ಕೃತಜ್ಞತೆ ಸಲ್ಲಿಸಲು ಈ ವರ್ಷದ ‘ವಿಶ್ವ ಓಝೋನ್ ದಿನಾಚರಣೆ’ಯನ್ನು (ಸೆ. 16) ‘ವಿಜ್ಞಾನದಿಂದ ವಿಶ್ವ ಪ್ರಯತ್ನದ ವರೆಗೆ’ ಎಂಬ ಧ್ಯೇಯ ವಾಕ್ಯದೊಂದಿಗೆ ಆಚರಿಸಲಾಗುತ್ತಿದೆ.



ಓಝೋನ್ ಪದರವು ಭೂಮಿಯ ಮೇಲೆ 20 ಕಿ.ಮೀ. ಎತ್ತರದಲ್ಲಿ ಶುರುವಾಗಿ 50 ಕಿ.ಮೀ. ವರೆಗೂ ವ್ಯಾಪಿಸಿರುವ ಅನಿಲದ ತೆಳುವಾದ ಪೊರೆ. ಇದು ಧ್ರುವ ಪ್ರದೇಶಗಳಲ್ಲಿ ತುಸು ದಪ್ಪವಾಗಿದ್ದು, ಬೇರೆ ಪ್ರದೇಶಗಳಲ್ಲಿ ತೀರಾ ತೆಳುವಾಗಿರುತ್ತದೆ. ಈ ಪದರವು ಭೂಮಿಯ ವಾತಾವರಣದ ಒಂದು ನಿರ್ಣಾಯಕ ಭಾಗವಾಗಿದ್ದು, ಸೂರ್ಯನಿಂದ ಬರುವ ಹಾನಿಕಾರಕ ನೇರಳಾತೀತ ಕಿರಣಗಳಿಂದ ನಮ್ಮನ್ನು ರಕ್ಷಿಸುತ್ತದೆ.

70ರ ದಶಕದ ಉತ್ತರಾರ್ಧ ಮತ್ತು 80ರ ದಶಕದ ಆರಂಭದಲ್ಲಿ, ವಿಜ್ಞಾನಿಗಳು ಓಝೋನ್ ಪದರವು ಮಾನವ ನಿರ್ಮಿತ ರಾಸಾಯನಿಕಗಳಾದ ಕ್ಲೋರೊಫ್ಲೋರೋ ಕಾರ್ಬನ್‌ಗಳಿಂದ ಹಾನಿಗೊಳಗಾಗುತ್ತಿದೆ ಎಂದು ಕಂಡುಹಿಡಿದರು. ರೆಫ್ರಿಜಿರೇಟರ್, ಏರ್ ಕಂಡೀಷನರ್ ಮತ್ತು ಏರೋಜೋಲ್ ಸ್ಪ್ರೇಗಳಲ್ಲಿ ಈ ರಾಸಾಯನಿಕಗಳನ್ನು ವ್ಯಾಪಕವಾಗಿ ಬಳಸಲಾಗುತ್ತಿತ್ತು. ಓಝೋನ್ ಪದರವನ್ನು ಸವಕಳಿ ಮಾಡುವ ಶಾಖವರ್ಧಕ ಅನಿಲಗಳ ಉತ್ಸರ್ಜನೆಯನ್ನು ವೈಜ್ಞಾನಿಕವಾಗಿ ನಿಯಂತ್ರಿಸಲು ಜಾಗತಿಕ ಸಮುದಾಯವು ಒಟ್ಟಾಗಿ ಕಾರ್ಯ ನಿರ್ವಹಿಸಿ ಓಝೋನ್ ಪದರವನ್ನು ರಕ್ಷಿಸಲು ನಿರ್ಧರಿಸಿತು.

ಸುಮಾರು ನೂರು ರಾಸಾಯನಿಕಗಳಿಂದ ಓಝೋನ್ ಪದರಕ್ಕೆ ಅಪಾಯವಿದೆ. ನಾವು ಪ್ರತಿನಿತ್ಯ ಬಳಸುವ ಬಸ್, ಕಾರು, ರೈಲುಗಳ ಡೀಸೆಲ್ ಹೊಗೆ, ರಸಗೊಬ್ಬರ, ಪೇಂಟ್‌ಗಳು ಹೊಮ್ಮಿಸುವ ಮಾಲಿನ್ಯ, ಏರ್ ಕಂಡೀಷನರ್, ನೋವು ನಿವಾರಕ ಸ್ಪ್ರೇ, ಸುಗಂಧ ಸೂಸುವ ತುಂತುರು ಡಬ್ಬಿ, ಫ್ರಿಡ್ಜ್‌ಗಳಲ್ಲಿ ಬಳಸುವ ಕ್ಲೋರೊಫ್ಲೋರೋ ಕಾರ್ಬನ್ ಮತ್ತು ಬ್ರೊಮೊ ಫ್ಲೋರೋ ಕಾರ್ಬನ್‌ಗಳಿಂದ ಓಜೋನ್ ಪದರಕ್ಕೆ ತೂತು ಬೀಳುತ್ತದೆ. ಮೊದಲ ಸಲ ಅಂಟಾರ್ಕ್ಟಿಕಾದ ವಾಯುಮಂಡಲದ ಓಝೋನ್ ಪದರಕ್ಕೆ ತೂತಾಗಿದೆ ಎಂಬ ಮಾಹಿತಿ ಸಿಕ್ಕ ತಕ್ಷಣ ವಿಜ್ಞಾನಿಗಳು ವಾತಾವರಣ ದಲ್ಲಿನ ಸ್ವತಂತ್ರ ಕ್ಲೋರಿನ್ ಅಣು ಮತ್ತು ಕ್ಲೋರಿನ್ ಮೊನಾಕ್ಸೈಡ್‌ನಿಂದ ಆ ರಂಧ್ರ ಉಂಟಾಗಿದೆ ಎಂದು ಪತ್ತೆ ಹಚ್ಚಿ, ಹೈಡ್ರೊಕ್ಲೋರೊಫ್ಲೋರೋ ಕಾರ್ಬನ್‌ಗಳ ಬಳಕೆಯಿಂದ ವಾತಾವರಣಕ್ಕೆ ಹಾನಿ ಇಲ್ಲ ಎಂಬ ಪರಿಹಾರ ಸೂಚಿಸಿದರು.

2004ರಲ್ಲಿ ಸಿಎಫ್‌ಸಿ ಮತ್ತು ಬಿಎಫ್‌ಸಿ ಉತ್ಪಾದನೆ ಮತ್ತು ಬಳಕೆಗಳನ್ನು ನಿಲ್ಲಿಸಿದ ಮುಂದುವರಿದ ರಾಷ್ಟ್ರಗಳು, ವಿಜ್ಞಾನಿಗಳು ಶಿಫಾರಸು ಮಾಡಿದ ಹೈಡ್ರೋಕ್ಲೋರೋ ಫ್ಲೋರೋಕಾರ್ಬನ್ (ಎಚ್‌ಸಿಎಫ್‌ಸಿ) ಬಳಸಲು ಪ್ರಾರಂಭಿಸಿದವು. ಆ ವೇಳೆಗೆ ಎಚ್‌ಸಿಎಫ್‌ಸಿಗಳೂ ಸುರಕ್ಷಿತವಲ್ಲ ಮತ್ತು ಅವು ಇಂಗಾಲದ ಡೈ ಆಕ್ಸೈಡ್‌ಗಿಂತ ಸಾವಿರಾರು ಪಟ್ಟು ಹೆಚ್ಚು ಭೂಮಿ ಬಿಸಿ ಮಾಡುವ ಶಾಖವರ್ಧಕಗಳು ಎಂಬುದು ತಿಳಿದುಬಂತು. ಸಂಕಟಕ್ಕೆ ಬಿದ್ದ ಮಾಂಟ್ರಿಯಲ್ ಒಪ್ಪಂದದ ರೂವಾರಿಗಳು, 2016ರಲ್ಲಿ ರುವಾಂಡಾದ ಕಿಗಳಿಯಲ್ಲಿ ಸಭೆ ಸೇರಿ ಮುಂದಿನ 30 ವರ್ಷಗಳಲ್ಲಿ ಎಚ್‌ಸಿಎಫ್‌ಸಿಗಳ ಬಳಕೆಯನ್ನು ಹಂತ ಹಂತವಾಗಿ ಸಂಪೂರ್ಣ ನಿಷೇಧಿಸಬೇಕು ಎಂದು ನಿರ್ಧರಿಸಿದರು.

ಶೀತಲೀಕರಣ ಉದ್ಯಮಗಳಲ್ಲಿ ಎಚ್‌ಸಿಎಫ್‌ಸಿಗಳ ಬಳಕೆ ಅತ್ಯಧಿಕವಾಗಿದ್ದು, ರೈತರ ಬೆಳೆಯನ್ನು ಸಂರಕ್ಷಿಸುವ ಕೋಲ್ಡ್ ಸ್ಟೋರೇಜ್ ಮತ್ತು ಗ್ರಾಹಕರು ಬಳಸುವ ಎಸಿ, ರೆಫ್ರಿಜಿರೇಟರ್‌ಗಳಿಗೆ ಅದು ಬೇಕೇ ಬೇಕು. ಎಚ್‌ಸಿಎಫ್‌ಸಿ ಸಂಪೂರ್ಣ ನಿಷೇಧಕ್ಕೆ ಇನ್ನೂ 30 ವರ್ಷ ಹಿಡಿಯಬಹುದು ಎಂಬ ಅಂದಾಜಿದೆ. ಎಚ್‌ಸಿಎಫ್‌ಸಿಗಳ ಬದಲಿಗೆ ಅತ್ಯುತ್ತಮ ಶೀತಕಾರಕಗಳು ಮತ್ತು ಕಡಿಮೆ ಶಾಖವರ್ಧಕಗಳಾದ ಬ್ಯೂಟೇನ್ ಮತ್ತು ಪ್ರೊಪೇನ್‌ಗಳನ್ನು ಬಳಸುವ ಅವಕಾಶವಿದೆ. ಆದರೆ, ಇವುಗಳನ್ನು ಬಳಸಲು ಪರವಾನಗಿ ಇಲ್ಲ. ಅಲ್ಲದೆ, ಇವು ತೀವ್ರವಾಗಿ ದಹಿಸುವ ಗುಣ ಹೊಂದಿರುವುದರಿಂದ ಬಳಸುವಾಗ ಭಾರೀ ಎಚ್ಚರಿಕೆ ವಹಿಸಬೇಕಾಗುತ್ತದೆ. ಮನೆಯ ರೆಫ್ರಿಜಿರೇಟರ್‌ಗಳಲ್ಲಿ ವಾತಾವರಣವನ್ನು ಅಷ್ಟಾಗಿ ಹಾಳು ಮಾಡದ ಐಸೋಬ್ಯೂಟೇನ್ ರಾಸಾಯನಿಕ ಬಳಕೆಯಾಗುತ್ತಿದೆ.

ಸ್ಥಳೀಯ ಉತ್ಪನ್ನಗಳ ಬಳಕೆ, ಸಾರ್ವಜನಿಕ ಸಾರಿಗೆಯ ಉಪಯೋಗ ಮತ್ತು ಏರ್ ಕಂಡೀಷನರ್‌ಗಳ ಬಳಕೆ ಕಡಿಮೆ ಮಾಡುವುದರಿಂದ, ಓಝೋನ್ ಪದರದ ಮೇಲಿನ ಒತ್ತಡವನ್ನು ಕಡಿಮೆ ಮಾಡಬಹುದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮತಾಂತರಗೊಂಡವರ ಜಾತಿ ಯಾವುದು?



ರಾಜ್ಯದಲ್ಲಿ ಕೆಲವೇ ದಿನಗಳಲ್ಲಿ ಆರಂಭ ಆಗಲಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಯಾವ ಜಾತಿ/ಧರ್ಮದ ಹೆಸರನ್ನು ಹೇಗೆ ಬರೆಸಬೇಕು ಎನ್ನುವುದರ ಬಗ್ಗೆ ಸಮುದಾಯಗಳಲ್ಲಿ ಚರ್ಚೆ ನಡೆಯುತ್ತಿದೆ. ಇದೇ ಹೊತ್ತಿನಲ್ಲಿ, ದಲಿತರೂ ಸೇರಿದಂತೆ ಯಾವುದೇ ಜಾತಿಯಿಂದ ಕ್ರೈಸ್ತ ಧರ್ಮಕ್ಕೆ ಮತಾಂತರ ಆದವರೆಲ್ಲರೂ ಕ್ರೈಸ್ತರೇ ಎಂದು ಸಿ.ಎಂ ಸಿದ್ದರಾಮಯ್ಯ ಹೇಳಿದ್ದಾರೆ. ದಶಕಗಳಿಂದಲೂ ಚಳವಳಿ, ಚರ್ಚೆ, ಕಾನೂನು ಹೋರಾಟಕ್ಕೆ ಕಾರಣವಾಗಿರುವ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ. ಸಿ.ಎಂ ಹೇಳಿಕೆಯನ್ನು ಹಲವರು ವಿರೋಧಿಸಿದ್ದಾರೆ. ಮತಾಂತರ ಆದರೂ ಸಾಮಾಜಿಕ–ಸ್ಥಿತಿಗತಿ ಬದಲಾಗಿಲ್ಲ, ಹೀಗಾಗಿ ತಮ್ಮನ್ನು ದಲಿತರು ಎಂದೇ ಪರಿಗಣಿಸಬೇಕು ಎನ್ನುವ ದಲಿತ ಕ್ರೈಸ್ತರ ಕೋರಿಕೆ ಬಗ್ಗೆ ಕೇಂದ್ರ ಸರ್ಕಾರವಾಗಲಿ, ನ್ಯಾಯಾಲಯವಾಗಲಿ ಇನ್ನೂ ಅಂತಿಮ ನಿರ್ಧಾರ ಪ್ರಕಟಿಸಿಲ್ಲ ...

ಪ್ರಜಾವಾಣಿ ವಾರ್ತೆ

ಜಾತಿ ತಾರತಮ್ಯ, ಶೋಷಣೆಗೆ ಗುರಿಯಾಗಿದ್ದ ದಲಿತರು ಸೇರಿದಂತೆ ದುರ್ಬಲ ಜಾತಿಗಳ ಲಕ್ಷಾಂತರ ಮಂದಿ ಕ್ರೈಸ್ತ, ಮುಸ್ಲಿಂ ಧರ್ಮಕ್ಕೆ ಮತಾಂತರವಾಗಿದ್ದಾರೆ. ದಲಿತರು ಮತಾಂತರವಾದ ನಂತರವೂ ತಾರತಮ್ಯ, ಸಾಮಾಜಿಕ–ಆರ್ಥಿಕ ಅಸಮಾನತೆ ಎದುರಿಸುತ್ತಿದ್ದಾರೆ. ಹೀಗಾಗಿ ತಮ್ಮನ್ನು ಪರಿಶಿಷ್ಟ ಜಾತಿ (ಎಸ್‌ಸಿ) ಎಂದೇ ಪರಿಗಣಿಸಿ, ಸೌಲಭ್ಯಗಳನ್ನು ನೀಡಬೇಕು ಎಂದು ಹಲವು ದಶಕಗಳಿಂದ ದಲಿತ ಕ್ರೈಸ್ತರು ಮತ್ತು ದಲಿತ ಮುಸ್ಲಿಮರು ಹೋರಾಟ ಮಾಡುತ್ತಿದ್ದಾರೆ.

ಸಂವಿಧಾನದ 341ನೇ ವಿಧಿಯ ಅಡಿಯಲ್ಲಿ ಎಸ್‌ಸಿ ಸಮುದಾಯಗಳನ್ನು, 342ನೇ ವಿಧಿ ಅಡಿಯಲ್ಲಿ ಪರಿಶಿಷ್ಟ ಪಂಗಡಗಳನ್ನು ಮತ್ತು 340ನೇ ವಿಧಿಯಲ್ಲಿ ಇತರೆ ಹಿಂದುಳಿದ ವರ್ಗಗಳನ್ನು (ಒಬಿಸಿ) ಗುರುತಿಸಲಾಗುತ್ತಿದೆ. ಎಸ್‌ಸಿ ಪಟ್ಟಿಗೆ ಹೊಸ ಜಾತಿಯನ್ನು ಸೇರಿಸುವ ಇಲ್ಲವೇ ತೆಗೆಯುವ ಅಧಿಕಾರ ಸಂಸತ್‌ಗೆ ಮಾತ್ರ ಇದೆ. ಸಂಸತ್ತಿನ ನಿರ್ಧಾರದ ಬಳಿಕ ರಾಷ್ಟ್ರಪತಿಯವರು ಸಹಿ ಹಾಕಿ ಅದನ್ನು ಅಧಿಕೃತಗೊಳಿಸುತ್ತಾರೆ.

ಒಬ್ಬ ಎಸ್‌ಸಿ ವ್ಯಕ್ತಿಯು ಹಿಂದೂ ಧರ್ಮದಿಂದ ಬೇರೊಂದು ಧರ್ಮಕ್ಕೆ ಮತಾಂತರಗೊಂಡರೆ, ಅವರನ್ನು ಎಸ್‌ಸಿ ಎಂದು ಪರಿಗಣಿಸಲಾಗದು ಎಂದು 341ನೇ ವಿಧಿಯು ಹೇಳುತ್ತದೆ. 1950ರಲ್ಲಿ ಹಿಂದೂಗಳನ್ನು ಮಾತ್ರ ಎಸ್‌ಸಿ ಎಂದು ಸಾಂವಿಧಾನಿಕ ಆದೇಶದ ಮೂಲಕ ಪರಿಗಣಿಸಲಾಗಿತ್ತು. ನಂತರ 1956ರ ತಿದ್ದುಪಡಿ ಮೂಲಕ ದಲಿತ ಸಿಖ್ಖರನ್ನು, 1990ರ ತಿದ್ದುಪಡಿಯ ಮೂಲಕ ದಲಿತ ಬೌದ್ಧರನ್ನು ಎಸ್‌ಸಿಗಳೆಂದು ಪರಿಗಣಿಸಬಹುದು ಎಂದು ಬದಲಿಸಲಾಯಿತು. ಆದರೆ, ಮುಸ್ಲಿಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ದಲಿತರನ್ನು ಎಸ್‌ಸಿ ಎಂದು ಪರಿಗಣಿಸುವ ಬಗ್ಗೆ ಯಾವುದೇ ತಿದ್ದುಪಡಿ ಆಗಿಲ್ಲ.

ಒಬಿಸಿ ಮೀಸಲಾತಿ: ಕ್ರೈಸ್ತ ಮತ್ತು ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡ ಎಸ್‌ಸಿಗಳನ್ನು ಕೆಲವು ರಾಜ್ಯಗಳಲ್ಲಿ ಒಬಿಸಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಅಂದರೆ, ರಾಜ್ಯ ಸರ್ಕಾರಗಳು ಬಯಸಿದರೆ, ದಲಿತ ಕ್ರೈಸ್ತರನ್ನು ಮತ್ತು ದಲಿತ ಮುಸ್ಲಿಮರನ್ನು ಹಿಂದುಳಿದ ಜಾತಿಗಳ ಪಟ್ಟಿಯಲ್ಲಿ ಸೇರಿಸಬಹುದು. ಆದರೆ, ಈ ಎರಡೂ ಧರ್ಮಗಳಿಗೆ ಮತಾಂತರಗೊಂಡ ದಲಿತರನ್ನು ಎಸ್‌ಸಿ ಎಂದು ಪರಿಗಣಿಸಬಹುದೇ ಎನ್ನುವ ವಿಚಾರ ಪ್ರಸ್ತುತ ಸುಪ್ರೀಂ ಕೋರ್ಟ್‌ನಲ್ಲಿದೆ.

ಧರ್ಮದ ಆಧಾರದಲ್ಲಿ ಎಸ್‌ಸಿಗಳನ್ನು ಗುರುತಿಸುವ 1950ರ ಸಾಂವಿಧಾನಿಕ ಆದೇಶವೇ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ ಎನ್ನುವುದು ದಲಿತ ಕ್ರೈಸ್ತ ಸಂಘಟನೆಗಳ ಆರೋಪವಾಗಿದೆ. 15(1) ವಿಧಿಗೆ (ಧರ್ಮದ ಹೆಸರಿನಲ್ಲಿ ತಾರತಮ್ಯ ಸಲ್ಲದು) ಈ ಆದೇಶವು ವಿರುದ್ಧವಾಗಿದೆ ಎನ್ನುವುದು ಅವರ ವಾದ. ಹೀಗಾಗಿ ದಲಿತರು ಮತಾಂತರಗೊಂಡರೂ ಅವರನ್ನು ಎಸ್‌ಸಿ ಎಂದೇ ಗುರುತಿಸಬೇಕು ಎನ್ನುವುದು ಅವರ ಆಗ್ರಹ. ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಬಾರದು ಎಂದು ಸಂವಿಧಾನ ಹೇಳುತ್ತಿದ್ದು, ಮೀಸಲಾತಿ ನಿರಾಕರಿಸಲೂ ಧರ್ಮ ಆಧಾರವಾಗಬಾರದು ಎನ್ನುವುದು ಅವರ ಪ್ರತಿಪಾದನೆ.

1983ರ ಸೂಸೈ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ 1950ರ ಸಾಂವಿಧಾನಿಕ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಯಿತು. ಮತಾಂತರದ ನಂತರವೂ ಜಾತಿ ಮುಂದುವರಿಯುತ್ತದೆ ಎನ್ನುವುದನ್ನು ಆ ಪ್ರಕರಣದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಒಪ್ಪಿಕೊಂಡಿತು. ಆದರೆ, ಮತಾಂತರಗೊಂಡ ದಲಿತರು ಹಿಂದೂ ದಲಿತರಷ್ಟೇ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರು ಎಂಬುದಕ್ಕೆ ಸೂಕ್ತ ಆಧಾರ ಇಲ್ಲ ಎಂದಿತು.

ಮತಾಂತರಗೊಂಡವರ ಶೋಷಣೆಯ ಸ್ವರೂಪ ಏನು ಅನ್ನುವುದರ ಬಗ್ಗೆ ಸಾಮಾಜಿಕ–ಆರ್ಥಿಕ ದತ್ತಾಂಶ ಒದಗಿಸುವಂತೆ ಸುಪ್ರೀಂ ಕೋರ್ಟ್ ತಾಕೀತು ಮಾಡಿತು.

ಅದರ ನಂತರ ಈ ವಿಚಾರದಲ್ಲಿ ಸಾಕಷ್ಟು ಕಾನೂನು ಹೋರಾಟ, ಶಾಸಕಾಂಗದ ಪ್ರಯತ್ನಗಳು ನಡೆದಿವೆ. ಆದರೆ, ಇದುವರೆಗೂ ಯಾವುದೇ ಫಲಶ್ರುತಿ ಸಿಕ್ಕಿಲ್ಲ. ಸಮಾನತೆ, ಘನತೆಯನ್ನು ಅರಸಿ ಮತಾಂತರಗೊಂಡ ದಲಿತರು ಮತ್ತು ಇತರ ದುರ್ಬಲ ಜಾತಿಗಳ ಜನರು, ಆ ಕಾರಣಕ್ಕಾಗಿ ಮೀಸಲಾತಿ ಸೇರಿದಂತೆ ಹಲವು ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಇದನ್ನು ಒಂದು ಮಾನವೀಯ ವಿಚಾರವನ್ನಾಗಿ ಪರಿಗಣಿಸಿ, ಸಮಸ್ಯೆಗೆ ಪರಿಹಾರ ನೀಡಬೇಕು ಎನ್ನುವ ಒತ್ತಾಯವೂ ಇದೆ.

ಆಧಾರ: ಪಿಟಿಐ, ಮಾಧ್ಯಮ ವರದಿಗಳು



ದಲಿತ ಕ್ರೈಸ್ತರು, ಮುಸ್ಲಿಮರಿಗೆ ಎಸ್‌ಸಿ ಮಾನ್ಯತೆ ನೀಡಬೇಕೇ ಎಂಬ ಬಗ್ಗೆ ಅಧ್ಯಯನ ನಡೆಸಲು 2022ರಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ನೇತೃತ್ವದಲ್ಲಿ ಮೂವರು ಸದಸ್ಯರ ಸಮಿತಿಯನ್ನು ರಚಿಸಿತ್ತು. ಕಳೆದ ವರ್ಷವೇ ಈ ಸಮಿತಿ ವರದಿ ನೀಡಬೇಕಿತ್ತು. ಆದರೆ, ಅಧ್ಯಯನ ಪೂರ್ಣಗೊಳ್ಳದ ಕಾರಣ ಅದರ ಅವಧಿಯನ್ನು ಒಂದು ವರ್ಷ ವಿಸ್ತರಿಸಲಾಗಿದೆ. ಸಮಿತಿಯು ವರದಿಯನ್ನು ಇನ್ನಷ್ಟೇ ಸಲ್ಲಿಸಬೇಕಾಗಿದೆ

ಹೋರಾಟಕ್ಕೆ ದಶಕಗಳ ಇತಿಹಾಸ

ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಿಗೆ ಮತಾಂತರಗೊಂಡ ದಲಿತರನ್ನು ಕೂಡ ಪರಿಶಿಷ್ಟ ಜಾತಿಯವರು ಎಂದು ಪರಿಗಣಿಸಬೇಕು ಎಂಬ ಕೂಗಿಗೆ ದಶಕಗಳ ಇತಿಹಾಸವಿದೆ. ಈಗಲೂ ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ. ಮತಾಂತರಗೊಂಡವರಿಗೂ ಎಸ್‌ಸಿ ಸ್ಥಾನಮಾನ ನೀಡುವ ಪ್ರಸ್ತಾವವನ್ನು ಕೇಂದ್ರ ಸರ್ಕಾರ ವಿರೋಧಿಸುತ್ತಲೇ ಬಂದಿದೆ. ದಲಿತ ಕ್ರೈಸ್ತರು, ದಲಿತ ಮುಸ್ಲಿಮರನ್ನು ಪರಿಶಿಷ್ಟ ಜಾತಿಯವರು ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳು ಅಭಿಪ್ರಾಯಪಟ್ಟ ಉದಾಹರಣೆಗಳೂ ಇವೆ.

- ಭಾರತೀಯ ರಿಜಿಸ್ಟ್ರಾರ್ ಜನರಲ್ (ಆರ್‌ಜಿಐ) ಕಚೇರಿಯು ಆರಂಭದಿಂದಲೂ ಹಿಂದೂ ಅಥವಾ ಸಿಖ್ ಧರ್ಮದವರನ್ನು ಬಿಟ್ಟು ಉಳಿದವರನ್ನು ಎಸ್‌ಸಿ ವ್ಯಾಪ್ತಿಗೆ ತರುವುದನ್ನು ಆಕ್ಷೇಪಿಸುತ್ತಲೇ ಇದೆ. ಅಸ್ಪೃಶ್ಯತೆ ಆಚರಣೆಯಿಂದ ಸಾಮಾಜಿಕವಾಗಿ ತಾರತಮ್ಯ ಅನುಭವಿಸುತ್ತಿರುವ ಸಮುದಾಯಗಳಿಗೆ ಮಾತ್ರ ಪರಿಶಿಷ್ಟ ಜಾತಿ ಸ್ಥಾನಮಾನ ನೀಡಲಾಗುತ್ತದೆ ಎಂದು 1978ರಲ್ಲಿ ಅದು ಅಭಿಪ್ರಾಯ ಪಟ್ಟಿತ್ತು
- 2001ರಲ್ಲಿ ಈ ವಿಚಾರ ಮತ್ತೆ ಪ್ರಸ್ತಾಪವಾದಾಗಲೂ ಆರ್‌ಜಿಐ ತನ್ನ ಹಿಂದಿನ ಅಭಿಪ್ರಾಯವನ್ನೇ ವ್ಯಕ್ತಪಡಿಸಿತ್ತು. ಇಸ್ಲಾಂ ಮತ್ತು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ದಲಿತರು ಭಿನ್ನವಾದ ಜಾತಿಯ ಗುಂಪುಗಳಿಗೆ ಸೇರಿದವರು. ಈ ಕಾರಣದಿಂದ 'ಒಂದು ಜನಾಂಗೀಯ ಗುಂಪಿ'ಗೆ ಸೇರಿದವರು ಎಂದು ವರ್ಗೀಕರಿಸಲು ಸಾಧ್ಯವಿಲ್ಲ ಎಂದು ಆರ್‌ಜಿಐ ಪ್ರತಿಪಾದಿಸಿತ್ತು. ಅಸ್ಪೃಶ್ಯತೆ ಆಚರಣೆ ಹಿಂದೂ ಧರ್ಮ ಮತ್ತು ಅದರ ಕವಲುಗಳಲ್ಲಿ ಮಾತ್ರ ಇದೆ. ಕ್ರೈಸ್ತ ಮತ್ತು ಇಸ್ಲಾಂನಲ್ಲಿ ಅಂತಹ ಆಚರಣೆ ಇಲ್ಲದಿರುವುದರಿಂದ, ಪರಿಶಿಷ್ಟ ಜಾತಿಯವರು ಈ ಧರ್ಮಗಳಿಗೆ ಮತಾಂತರಗೊಂಡಾಗ ಅವರ ಎಸ್‌ಸಿ ಮಾನ್ಯತೆ ಹೋಗುತ್ತದೆ ಎಂಬುದು ಅದರ ಮತ್ತೊಂದು ವಾದ. ಸುಪ್ರೀಂ ಕೋರ್ಟ್‌ನಲ್ಲಿ ಕೇಂದ್ರ ಕೂಡ ಇದೇ ವಾದವನ್ನು ಮಂಡಿಸಿದೆ
- ದಲಿತ ಕ್ರೈಸ್ತರನ್ನು ಎಸ್‌ಸಿಗೆ ಸೇರಿದವರು ಎಂದು ಪರಿಗಣಿಸುವ ಪ್ರಸ್ತಾವವನ್ನು 2019ರಲ್ಲಿ ತಿರಸ್ಕರಿಸಿದ್ದ ಕೇಂದ್ರ ಸರ್ಕಾರ, ಅವರನ್ನು ಎಸ್‌ಸಿ ವರ್ಗದಿಂದ ಹೊರಗಿಡುವುದಕ್ಕೆ 1936ರ ಬ್ರಿಟಿಷ್ ಆಡಳಿತದ ಆದೇಶವನ್ನು ಉಲ್ಲೇಖಿಸಿತ್ತು. ಬ್ರಿಟಿಷ್ ಸರ್ಕಾರವು ಜಾತಿಗಳನ್ನು ಪಟ್ಟಿ ಮಾಡುವಾಗ 'ಶೋಷಿತ ವರ್ಗಗಳು' ಎಂಬ ವರ್ಗೀಕರಣ ಮಾಡಿತ್ತು. ಆದರೆ, ಈ ವರ್ಗಗಳಲ್ಲಿರುವ ಜಾತಿಯಿಂದ ಭಾರತೀಯ ಕ್ರೈಸ್ತರನ್ನು ಹೊರಗಿಟ್ಟಿತ್ತು
- ದಲಿತ ಕ್ರೈಸ್ತರು ಮತ್ತು ದಲಿತ ಮುಸ್ಲಿಮರಿಗೆ ಎಸ್‌ಸಿ ಮಾನ್ಯತೆ ನೀಡಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ವಾದಿಸುತ್ತಿರುವವರು, 2007ರಲ್ಲಿ ಯುಪಿಎ ಸರ್ಕಾರ ರಚಿಸಿದ್ದ ರಂಗನಾಥ್ ಮಿಶ್ರಾ ನೇತೃತ್ವದ ಸಮಿತಿ ಮಾಡಿದ ಶಿಫಾರಸುಗಳನ್ನು ಉಲ್ಲೇಖಿಸುತ್ತಿದ್ದಾರೆ. 'ಜನರು ಸ್ವಯಂಪ್ರೇರಿತರಾಗಿ ಮತಾಂತರಗೊಂಡಿರುವುದು ಅವರು ಹೊಂದಿರುವ ಎಸ್‌ಸಿ ಮಾನ್ಯತೆ ಮೇಲೆ ಪರಿಣಾಮ ಬೀರಬಾರದು' ಎಂದು ಸಮಿತಿ ಹೇಳಿತ್ತು. ಆದರೆ, ಈ ವರದಿಯನ್ನು ಸರ್ಕಾರ ಒಪ್ಪಿಕೊಂಡಿಲ್ಲ ಎಂದು ಎನ್‌ಡಿಎ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು
- ಕಳೆದ ವರ್ಷ ಪ್ರಕರಣವೊಂದರಲ್ಲಿ ತಮಿಳುನಾಡಿನ ಮಹಿಳೆಯೊಬ್ಬರಿಗೆ ಪರಿಶಿಷ್ಟ ಜಾತಿಯ ಮಾನ್ಯತೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿತ್ತು. ಆ ಮಹಿಳೆಯ ಕುಟುಂಬವು ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿರುವುದು ವಿಚಾರಣೆ ವೇಳೆ ದೃಢಪಟ್ಟಿತ್ತು
- ಕ್ರೈಸ್ತ ಧರ್ಮಕ್ಕೆ ಮತಾಂತರ ಆದ ತಕ್ಷಣ ಜನರು ಪರಿಶಿಷ್ಟ ಜಾತಿಯ ಮಾನ್ಯತೆ ಕಳೆದುಕೊಳ್ಳುತ್ತಾರೆ. ಆ ಬಳಿಕ ಅವರಿಗೆ ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯ ರಕ್ಷಣೆ ಸಿಗುವುದಿಲ್ಲ ಎಂದು ಆಂಧ್ರ ಪ್ರದೇಶದ ಹೈಕೋರ್ಟ್ ಈ ವರ್ಷದ ಏಪ್ರಿಲ್‌ನಲ್ಲಿ ಪ್ರಕರಣವೊಂದರಲ್ಲಿ ತೀರ್ಪು ನೀಡಿತ್ತು

ರಾಷ್ಟ್ರೀಯ

ಅದಾನಿಗೆ ಬಿಹಾರದ 1,050 ಎಕರೆ ಭೂಮಿ ಉಡುಗೊರೆ: ಕಾಂಗ್ರೆಸ್



ಪವನ್ ಖೇರಾ

ನವದೆಹಲಿ (ಪಿಟಿಐ): 'ಮುಂಬರಲಿರುವ ವಿಧಾನಸಭೆ ಚುನಾವಣೆಯಲ್ಲಿ ಸೋಲುವುದು ಖಚಿತ ಎಂದು ಅರಿತಿರುವ ಬಿಜೆಪಿ, ಚುನಾವಣೆಗೂ ಮುನ್ನವೇ ಬಿಹಾರದ ಭಾಗಲ್ಪುರದ 1,050 ಎಕರೆ ಭೂಮಿಯನ್ನು ಅದಾನಿ ಸಮೂಹ ವಿದ್ಯುತ್ ಸ್ಥಾವರ ನಿರ್ಮಿಸಲು ಉಡುಗೊರೆಯಾಗಿ ನೀಡುತ್ತಿದೆ' ಎಂದು ಕಾಂಗ್ರೆಸ್ ಸೋಮವಾರ ಆರೋಪಿಸಿದೆ.

'ಭಾಗಲ್ಪುರದ ಪಿರ್‌ಪೈಂತಿ ಗ್ರಾಮದಲ್ಲಿ ವಿದ್ಯುತ್ ಸ್ಥಾವರ ನಿರ್ಮಾಣಕ್ಕಾಗಿ 10 ಲಕ್ಷ ಮರಗಳು ಹಾಗೂ 1,050 ಎಕರೆ ಭೂಮಿಯನ್ನು 'ರಾಷ್ಟ್ರ ಸೇಟ್' ಗೌತಮ್ ಅದಾನಿಗೆ ವರ್ಷಕ್ಕೆ ₹1 ರಂತೆ 33 ವರ್ಷಗಳ ಅವಧಿಗೆ ನೀಡಲಾಗಿದೆ. ಮೋದಿ ಅವರು ಬಿಹಾರಕ್ಕೆ ಭೇಟಿ ನೀಡಿರುವ ಸಂದರ್ಭದಲ್ಲಿ ಗ್ರಾಮಸ್ಥರು ಪ್ರತಿಭಟನೆ ನಡೆಸಬಾರದು ಎಂಬ ಕಾರಣಕ್ಕೆ ಅವರನ್ನೆಲ್ಲಾ ಗೃಹಬಂಧನದಲ್ಲಿ ಇರಿಸಲಾಗಿದೆ' ಎಂದೂ ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

'₹21,400 ಕೋಟಿ ಮೊತ್ತದಲ್ಲಿ ಕೈಗೊಂಡಿರುವ 2,400 ಮೆಗಾವಾಟ್ ಯೋಜನೆ ಇದಾಗಿದ್ದು, ಆಯವ್ಯಯ ಮಂಡನೆ ವೇಳೆಯೇ ಇದನ್ನು ಘೋಷಿಸಲಾಗಿತ್ತು. ಆಗ ಸರ್ಕಾರ ತಾನೇ ಸ್ಥಾವರ ಸ್ಥಾಪಿಸುವುದಾಗಿ ಹೇಳಿತ್ತು. ನಂತರ ಹಿಂದೆ ಸರಿದ ಸರ್ಕಾರ ಯೋಜನೆಯನ್ನು ಗೌತಮ್ ಅದಾನಿಗೆ ಹಸ್ತಾಂತರಿಸಿದೆ' ಎಂದೂ ದೂರಿದ್ದಾರೆ.

ರಾಜ್ಯದ ಹಣದಿಂದ ರಾಜ್ಯದ ನೆಲದಲ್ಲೇ ಸ್ಥಾಪನೆಯಾಗಲಿರುವ ಘಟಕದಲ್ಲಿ ಅದೇ ರಾಜ್ಯದ ಕಲ್ಲಿದ್ದಲು ಬಳಸಿ ಉತ್ಪಾದನೆ ಮಾಡುವ ವಿದ್ಯುತ್ ಅನ್ನು ಬಿಹಾರದ ಜನರಿಗೆ ಪ್ರತಿ ಯೂನಿಟ್‌ಗೆ ₹6.75 ರಂತೆ ಮಾರಾಟ ಮಾಡಲಾಗುತ್ತದೆ. ಮಹಾರಾಷ್ಟ್ರ, ಉತ್ತರ ಪ್ರದೇಶದಲ್ಲಿ ಕ್ರಮವಾಗಿ ₹3 ಮತ್ತು ₹4 ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಬಿಹಾರದಲ್ಲಿ 'ದುಪ್ಪಟ್ಟು ಲೂಟಿ' ನಡೆಯುತ್ತಿದೆ ಎಂದೂ ಖೇರಾ ಕಿಡಿ ಕಾರಿದ್ದಾರೆ.

ಆದರೆ, ಈ ಬಗ್ಗೆ ಕೇಂದ್ರ ಸರ್ಕಾರ, ಬಿಹಾರ ಸರ್ಕಾರ ಹಾಗೂ ಅದಾನಿ ಸಮೂಹ ಸಂಸ್ಥೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

'ಭಾರತ– ಪಾಕಿಸ್ತಾನ ಪಂದ್ಯ: ₹1.5 ಲಕ್ಷ ಕೋಟಿ ಜೂಜಾಟ'

ಮುಂಬೈ (ಪಿಟಿಐ): ಏಷ್ಯಾ ಕಪ್ ಟೂರ್ನಿಯ ಭಾರತ– ಪಾಕಿಸ್ತಾನ ಕ್ರಿಕೆಟ್ ಪಂದ್ಯದ ವೇಳೆ ₹1.5 ಲಕ್ಷ ಕೋಟಿ ಜೂಜಾಟ ನಡೆದಿದ್ದು, ಇದರಲ್ಲಿ ₹25,000 ಕೋಟಿ ಪಾಕಿಸ್ತಾನಕ್ಕೆ ಹೋಗಿದೆ ಎಂದು ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಆರೋಪಿಸಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ತನಗೆ ಸಿಕ್ಕ ₹25,000 ಕೋಟಿ ಮೊತ್ತವನ್ನು ಪಾಕಿಸ್ತಾನವು ನಮ್ಮ ವಿರುದ್ಧ ಬಳಸುತ್ತದೆ. ಇದು ಬಿಸಿಸಿಐ ಹಾಗೂ ಸರ್ಕಾರಕ್ಕೆ ತಿಳಿದಿಲ್ಲವೇ' ಎಂದು ಪ್ರಶ್ನಿಸಿದರು.

'ಭಾರತ– ಪಾಕಿಸ್ತಾನ ಕ್ರಿಕೆಟ್ ಪಂದ್ಯದಿಂದ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ₹1,000 ಕೋಟಿ ಬಂದಿದೆ. ಈ ಹಣವನ್ನು ನಮ್ಮ ವಿರುದ್ಧವೇ ಬಳಸಲಾಗುತ್ತದೆ. ಪಂದ್ಯ ಮುಗಿದ ಬಳಿಕ ಸಾಂಪ್ರದಾಯಿಕ ಹಸ್ತಲಾಘವವನ್ನು ಮಾಡದೇ ಇರುವುದು 'ನಾಟಕೀಯ'ವಾಗಿದೆ' ಎಂದು ಹೇಳಿದರು.

ಹಿರಿಯ ನಾಗರಿಕರ ಅರ್ಜಿ ಸ್ವೀಕರಿಸಲು ನಿರಾಕರಿಸಿದ ಕೇಂದ್ರ ಸಚಿವ: ಟೀಕೆ

ತ್ರಿಶ್ಶೂರ್/ ತಿರುವನಂತಪುರ (ಪಿಟಿಐ): ಶಿಥಿಲಗೊಂಡ ಮನೆಯನ್ನು ಪುನರ್‌ನಿರ್ಮಿಸಿ ಕೊಡುವಂತೆ ಕೋರಿ ಹಿರಿಯ ನಾಗರಿಕರೊಬ್ಬರು ನೀಡಿದ ಮನವಿಯನ್ನು ಸ್ವೀಕರಿಸಲು ಕೇಂದ್ರ ಸಚಿವ ಸುರೇಶ್ ಗೋಪಿ ಅವರು ನಿರಾಕರಿಸಿದ್ದಾರೆ.

ತ್ರಿಶ್ಶೂರ್ ಜಿಲ್ಲೆಯ ಪುಲ್ಲು ಎಂಬಲ್ಲಿ ಸೆ.12ರಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೊಚುವೇಲಾಯುಧನ್ ಎಂಬವರು ಲಿಖಿತ ಮನವಿ ನೀಡಲು ಮುಂದಾಗಿದ್ದರು. ಸಾರ್ವಜನಿಕವಾಗಿ ಮನವಿ ಸ್ವೀಕರಿಸಲು ಸಚಿವರು ನಿರಾಕರಿಸಿದ್ದರು. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದು, ವ್ಯಾಪಕ ಟೀಕೆ ವ್ಯಕ್ತವಾಗಿತ್ತು.

ಇದನ್ನು ಸಮರ್ಥಿಸಿಕೊಂಡಿರುವ ಸುರೇಶ್ ಗೋಪಿ, 'ನಾನು ಈಡೇರಿಸಲಾಗದ ಭರವಸೆಗಳನ್ನು ನೀಡುವುದಿಲ್ಲ. ವಸತಿಗೆ ಸಂಬಂಧಿಸಿದ ವಿಷಯವು ರಾಜ್ಯಕ್ಕೆ ಸಂಬಂಧಿಸಿದ್ದು. ಅದನ್ನು ರಾಜ್ಯ ಸರ್ಕಾರವೇ ಪರಿಗಣಿಸಬೇಕು' ಎಂದು ಗೋಪಿ ಅವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಆ್ಯಪಲ್ ಕಂಪನಿಯು ಇತ್ತೀಚೆಗೆ 17ನೇ ಸರಣಿಯ ಐಫೋನ್‌ಗಳನ್ನು ಬಿಡುಗಡೆ ಮಾಡಿದೆ. ಇದೇ ಸಂದರ್ಭದಲ್ಲಿ 'ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಮಾನೋತ್ಸವದ ಹಿನ್ನೆಲೆಯಲ್ಲಿ ಕೇಸರಿ ಬಣ್ಣದ ಐಫೋನ್ 17 ಅನ್ನು ನಾವು ಬಿಡುಗಡೆ ಮಾಡಿದ್ದೇವೆ' ಎಂದು ಆ್ಯಪಲ್ ಸಿಇಒ ಟಿಮ್ ಕುಕ್ ಅವರು 'ಎಕ್ಸ್'ನಲ್ಲಿ ಘೋಷಣೆ ಮಾಡಿದ್ದಾರೆ ಎನ್ನಲಾದ ಪೋಸ್ಟ್ ಒಂದನ್ನು ಹಲವರು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



'ವೋಕ್‌ಫ್ಲಿಕ್ಸ್' ಎಂಬ ಪ್ಯಾರಡಿ (parody) ಖಾತೆಯಲ್ಲಿ ಮೊದಲು ಕುಕ್ ಅವರದ್ದೆನ್ನಲಾದ ಪೋಸ್ಟ್ ಅನ್ನು ಹಂಚಲಾಗಿತ್ತು. ನಂತರ ಹಲವರು ಅದನ್ನು ಹಂಚಿಕೊಂಡಿದ್ದಾರೆ. 'ವೋಕ್‌ಫ್ಲಿಕ್ಸ್'ನ ಎಕ್ಸ್ ಖಾತೆಯನ್ನು ಪರಿಶೀಲಿಸಿದಾಗ, ಅದರ ವಿವರದಲ್ಲಿ 'ನನ್ನನ್ನು ಗಂಭೀರವಾಗಿ ಪರಿಗಣಿಸಬೇಡಿ. ನಾನು ಪೋಸ್ಟ್ ಮಾಡುವ ಎಲ್ಲವೂ ಬಹುತೇಕ ನಿಜ' ಎಂದು ಬರೆಯಲಾಗಿದೆ. ಇದೊಂದು ವಿಡಂಬನೆ ಮಾಡುವ ಖಾತೆಯಾಗಿದ್ದು, ಇಂತಹ ಹಲವು ಪೋಸ್ಟ್‌ಗಳನ್ನು ಖಾತೆಯಲ್ಲಿ ಹಂಚಲಾಗಿದೆ. ಟಿಮ್ ಕುಕ್ ಅವರು ಇಂತಹ ಪೋಸ್ಟ್ ಮಾಡಿದ್ದಾರೆಯೇ ಎಂದು ಪರಿಶೀಲಿಸಲು, ಅವರ ಅಧಿಕೃತ 'ಎಕ್ಸ್' ಖಾತೆಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು. ಆದರೆ, ಆರ್‌ಎಸ್‌ಎಸ್, ಐಫೋನ್–17 ಕೇಸರಿ ಆವೃತ್ತಿಯ ಬಗ್ಗೆ ಅವರು ಎಲ್ಲೂ ಪ್ರಸ್ತಾಪಿಸಿಲ್ಲ. ಆ್ಯಪಲ್ ಕಂಪನಿಯೂ ಅಂತಹ ಘೋಷಣೆ ಮಾಡಿಲ್ಲ. ವಿಡಂಬನೆಗಾಗಿ ಮಾಡಲಾದ ಪೋಸ್ಟ್ ಅನ್ನು ಹಲವರು ತಪ್ಪಾಗಿ ಹಂಚಿಕೊಳ್ಳುತ್ತಿದ್ದಾರೆ ಎಂದು ನ್ಯೂಸ್‌ಚೆಕರ್.ಇನ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ದೃಢ ವ್ಯಕ್ತಿತ್ವದ ಮಹತ್ವ




ದೀಪಾ ಹಿರೇಗುತ್ತಿ

ಒಂದೂರಲ್ಲಿ ಒಬ್ಬ ವ್ಯಕ್ತಿಯಿದ್ದ. ಅವನದ್ದೊಂದು ಗುಣ ಏನೆಂದರೆ ಯಾರೇ ಸಿಕ್ಕಿದರೂ ಅವರಿಗೆ ನಮಸ್ಕಾರ ಹೇಳಿ, 'ಹೇಗಿದ್ದೀರಿ' ಎಂದು ಕುಶಲ ವಿಚಾರಿಸುವುದು. ಆದರೆ ಅದೇ ಊರಲ್ಲಿ ಇನ್ನೊಬ್ಬ ವಿಚಿತ್ರ ವ್ಯಕ್ತಿಯಿದ್ದ. ಈ ಎಲ್ಲರಿಗೂ ನಮಸ್ಕಾರ ಹೇಳುವವನು ಇದ್ದಾನಲ್ಲ, ಅವನೇನಾದರೂ ಸಿಕ್ಕಿ ನಮಸ್ಕಾರ ಎಂದರೆ ಇವನು ಕೆಟ್ಟ ಪದಗಳಿಂದ ಬಯ್ಯುತ್ತಿದ್ದ. ಪ್ರತೀ ಬಾರಿಯೂ ಹಾಗೆಯೇ ಆಗುತ್ತಿತ್ತು. ಒಮ್ಮೆ ಯಾರೋ ಊರಿನವರೇ ಈ ವ್ಯಕ್ತಿಗೆ ಹೇಳಿದರು, 'ಅಲ್ಲ ಮಾರಾಯ, ನೀನು ನೋಡಿದರೆ ಯಾವಾಗಲೂ ಅವನಿಗೆ ನಮಸ್ಕಾರ ಅನ್ನುತ್ತೀಯಾ. ಆದರೆ, ಅವನು ಪ್ರತೀ ಸಲ ಕೆಟ್ಟ ಮಾತನ್ನೇ ಆಡುತ್ತಾನೆ. ಬಿಟ್ಟು ಬಿಡು. ಅವನಿಗೆ ನಮಸ್ಕಾರ ಮಾಡುವುದೇಕೆ'. ಆಗ ಆ ವ್ಯಕ್ತಿ ಕೊಟ್ಟ ಉತ್ತರ ಬಹು ಸುಂದರವಾದದ್ದು. ಅವನೆಂದ, 'ನೀವು ಹೇಳುವುದೇನೋ ಸರಿ. ಆದರೆ ನನಗೋಸ್ಕರ ಅವನು ತನ್ನ ಕೆಟ್ಟ ಸ್ವಭಾವವನ್ನೇ ಬಿಡಲು ತಯಾರಿಲ್ಲ ಅಂದ ಮೇಲೆ ನಾನು ಅವನಿಗೋಸ್ಕರ ನನ್ನ ಒಳ್ಳೆಯ ಸ್ವಭಾವವನ್ನು ಯಾಕೆ ಬಿಡಲಿ?'

ಎಂತಹ ಉತ್ತರ... ಈ ಉತ್ತರ ಬಹಳ ಸರಳವಾದದ್ದು. ಆದರೆ, ಇದರ ಅರ್ಥ ತುಂಬಾ ದೊಡ್ಡದು. ನಾವು ಏನನ್ನಾದರೂ ಸಾಧಿಸಬೇಕೆಂದು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಲೇ ಇರುತ್ತೇವೆ. ಒಳ್ಳೆಯ ಸ್ವಭಾವವನ್ನು ಅಳವಡಿಸಿಕೊಳ್ಳಬೇಕೆಂದು ಕಷ್ಟಪಡುತ್ತಿರುತ್ತೇವೆ. ಮಾಡಿದ ತಪ್ಪನ್ನು ಸುಧಾರಿಸಿಕೊಳ್ಳಬೇಕೆಂದು ಬದಲಾಗಲು ಯತ್ನಿಸುತ್ತಿರುತ್ತೇವೆ. ಆದರೆ, ಕೆಲವೊಮ್ಮೆ ಅದಕ್ಕೆ ನಮ್ಮ ಸುತ್ತಲಿನವರ ಪ್ರತಿಕ್ರಿಯೆ ಅಷ್ಟು ಸ್ವಾಗತಾರ್ಹವಾಗಿರುವುದಿಲ್ಲ. ಯಾಕೆಂದರೆ ಜಗತ್ತು ನಾವು ನಿರೀಕ್ಷಿಸುವ ಹಾಗೆ ನಮ್ಮೊಂದಿಗೆ ನಡೆದುಕೊಳ್ಳುವುದಿಲ್ಲ. ಹಾಗೆಂದು ಅದಕ್ಕಾಗಿ ಕೋಪಿಸಿಕೊಂಡು ಅಥವಾ ಮನನೊಂದು ನಮ್ಮ ಪ್ರಯತ್ನ ಬಿಡಬಾರದು. ಉದಾಹರಣೆಗೆ: ನಾವು ನಮ್ಮನ್ನು ನಾವೇನು ಸಾಧಿಸಬಹುದು ಎಂಬುದರ ಮೇಲೆ ಅಳೆಯುತ್ತಿರುತ್ತೇವೆ. ನಾವೇನು ಸಾಧಿಸಿದ್ದೇವೆ ಎಂಬುದರ ಮೇಲೆ ನಮ್ಮನ್ನು ಜಗತ್ತು ಅಳೆಯುತ್ತದೆ. ಹಾಗಾಗಿ ನಮ್ಮ ಬಗ್ಗೆ ನಾವು ಅಂದುಕೊಂಡಿರುವ ಅಭಿಪ್ರಾಯದ ಮೇಲೆ ಜಗತ್ತು ನಮ್ಮನ್ನು ನಡೆಸಿಕೊಳ್ಳಬೇಕೆಂದು ಯೋಚಿಸಬಾರದು.

ಹಾಗಾಗಿ, ಯಾರೇನೇ ಪ್ರತಿಕ್ರಿಯೆ ನೀಡಿದರೂ ತಣ್ಣಗೆ ಅದನ್ನು ಸ್ವೀಕರಿಸಿ ಅದರಲ್ಲಿ ಹುರುಳಿಲ್ಲದಿದ್ದರೆ ಬಿಡುವುದು, ಏನಾದರೂ ಸುಧಾರಿಸಿಕೊಳ್ಳುವ ಅಂಶವಿದ್ದರೆ ಸ್ವೀಕರಿಸುವುದು ಇಷ್ಟೇ ಮಾಡಬೇಕೇ ವಿನಾ ಯಾರೋ ಏನೋ ಅಂದರೆಂದು ಪ್ರಯತ್ನವನ್ನೇ ಬಿಟ್ಟು ಬಿಡುವುದು, ಅವಮಾನಿತರಾಗಿ ಆತ್ಮಹತ್ಯೆಯಂತಹ ತೀರ್ಮಾನ ಕೈಗೊಳ್ಳುವುದು ಮೂರ್ಖತನ. ದೃಢ ನಿರ್ಧಾರದ ಮನುಷ್ಯರು ಇಲ್ಲದೇ ಹೋದರೆ ಈ ಜಗತ್ತು ಈಗಿರುವುದಕ್ಕಿಂತ ಸಾವಿರಾರು ವರ್ಷ ಹಿಂದಿರುತ್ತಿತ್ತು, ಮನುಷ್ಯ ಸಾಧಿಸಿದ ಅದ್ಭುತಗಳು ಕನಸಾಗಿಯೇ ಉಳಿಯುತ್ತಿದ್ದವು. ತಾಳ್ಮೆ ಮತ್ತು ವಿವೇಚನೆಯಿರುವ ವ್ಯಕ್ತಿಗಳು ಜಗತ್ತನ್ನೇ ಆಳುತ್ತಾರೆ. ಅವರು ಬೇರೆ ಯಾರಿಗೋಸ್ಕರವೋ ತಾನು ನಡೆಯುತ್ತಿರುವ ಯೋಗ್ಯ ದಾರಿಯನ್ನು ಬಿಟ್ಟು ಹೋಗುವುದಿಲ್ಲ. ಕಷ್ಟವಾದರೂ ಅದರಲ್ಲೇ ಮುನ್ನಡೆಯುತ್ತಾರೆ. ಇತರರಿಗೆ ಅರ್ಹ ಮಾದರಿಯಾಗುತ್ತಾರೆ.

ಗುಂಡಣ್ಣ



ಪದಬಂಧ 6166


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪಥದಲ್ಲಿ ಸಾಗುವಾಗ ಮಾಡಿದ ಪ್ರತಿಜ್ಞೆ(3)
6.ಹರೆಯದ ವಯಸ್ಸಿನವನು(5)
7.ಹವಳ ಇಲ್ಲಿದೆ(3)
8.ಎರಡು ರಾಶಿಗಳು ಸಮವೆಂದು ದೃಢೀಕರಿಸುವುದು(5)
13.ಚಾಂದ್ರಮಾನ ವರ್ಷದಲ್ಲಿ ಎಂಟನೆಯ ತಿಂಗಳು(3)
14.ಮಗುವಿಗೆ ಹೆಸರಿಡುವ ಶಾಸ್ತ್ರ(5)
15.ಕಾರುಳ್ಳವನು ವಿಧಿಸಿರುವ ಷರತ್ತು!(3)

ಮೇಲಿಂದ ಕೆಳಕ್ಕೆ

2.ಶ್ರೇಷ್ಠ ವರ್ಗದ ಸನ್ಯಾಸಿ(5)
3.ಸೆಕೆಯಿಂದ ಚರ್ಮರಂಧ್ರಗಳಿಂದ ಹೊರಹೊಮ್ಮುವ ದ್ರವ(3)
4.ಕಳ್ಳ ಇಲ್ಲಿದ್ದಾನೆ(3)
5.ಬಹಳ ನಾಜೂಕಾದ ಎಳೆ(4)
6.ಪ್ರಾರಂಭದ ಶಿಕ್ಷಣ ಕೊಡುವ ವಿದ್ಯಾಲಯ(7)
9.ರಾಜ್ಯದ ಆಡಳಿತಕ್ಕೆ ಸಂಬಂಧಿಸಿದ ವ್ಯವಹಾರ ಉಲ್ಟಾ ಆಗಿದೆ(5)
10.ನ್ಯಾಯಾಲಯಗಳಲ್ಲಿರುವ ಸಾಕ್ಷಿಕಟ್ಟೆ(4)
11.ಆಕಾಶದಲ್ಲಿ ಹಾರಾಡುವ ಪಕ್ಷಿ(3)
12.ಕತ್ತು ಚಾಚಿ ತೋರಿದ ಬಲ(3)



6165ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಜಾಯಮಾನ 3.ಕಮಂಡಲು 5.ಸುಗುಣ 6.ದ್ರವ 8.ಕಲಹ 10.ಸಂತ್ರಸ್ತ 11.ಅಮಲು 12.ರಮಿಸು 15.ರಸ 17.ಪರೋಕ್ಷ 18.ಅವಭೃಥ 19.ರಸಹೀನ

ಮೇಲಿಂದ ಕೆಳಕ್ಕೆ:

1.ಜಾಲಂಧ್ರ 2.ನಸುಕು 3.ಕಣಕ 7.ವರ್ಣಸಂಕರ 9.ಹಲಾಲುಕೋರ 13.ಸುಪಥ 14.ಅಕ್ಷರ 16. ಸಮ್ಮಾನ

ಸುಡೊಕು 6550

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6		4			1			3
	7					6		
5			8		9		4	7
		5	4			3		
	6			9			7	
3					8	5		9
4	1			8			3	
		2	7		4	9		1
7		9		3			2	

6549 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

16 ಸೆಪ್ಟೆಂಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ದಶಮಿ ಗಂ. 24-23 **ನಕ್ಷತ್ರ:** ಆರ್ದ್ರಾ ಗಂ. 6-46 **ಯೋಗ:** ವರಿಯಾನ್ ಗಂ. 24-34, **ಕರಣ:** ವಣಿಜ ಗಂ. 12-54 ಸಿಂಹ ಮಾಸದ 32 ನೇ ದಿನ. **ಮಳೆ ನಕ್ಷತ್ರ:** ಉತ್ತರ 1 ನೇ ಪಾದ. **ರಾಹುಕಾಲ:** ಮಧ್ಯಾಹ್ನ 03-00 04-30, **ಸೂರ್ಯೋದಯ:** 06-23 **ಸೂರ್ಯಾಸ್ತ:** 06-27, **ಮುಸ್ಲಿಂ ದಿನಾಂಕ:** 23 ರಬಿಉಲ್ಲಾವಲ್, **ಅದೃಷ್ಟ ಸಂಖ್ಯೆ:** 1, 2.

ಮೇಷ: ತೃಪ್ತಿಕರ ಜೀವನ ನಡೆಸಲು ಬೇಕಾದ ಸಂಪಾದನೆಯ ಕೆಲಸ ಸಿಕ್ಕಿ ಸಂತೋಷ ಹೊಂದುವಿರಿ. ಸಂಸಾರ ನಿರ್ವಹಣೆಗೆ ಮತ್ತು ಹೆಂಡತಿಯ ಸಂತೋಷಕ್ಕಾಗಿ ಕೆಲವು ವಸ್ತುಗಳ ಖರೀದಿ ಮಾಡಬೇಕಾಗುವುದು.

ವೃಷಭ: ವ್ಯವಸ್ಥಾಪಕರ ಜತೆ ಧೈರ್ಯದ ಮಾತುಗಳು ಇಂದಿನ ಜವಾಬ್ದಾರಿಯನ್ನು ಉತ್ತಮ ಗುಣಮಟ್ಟದ್ದಾಗಿಸುತ್ತದೆ. ದೇವಸ್ಥಾನದ ಭೇಟಿ ಹಾಗೂ ದೇವರ ದರ್ಶನದಿಂದ ಮನಸ್ಸಿಗೆ ಸಂತಸವಾಗುವುದು.

ಮಿಥುನ: ಯಶಸ್ಸನ್ನು ಹೊಂದಲು ಕಠಿಣ ಪರಿಶ್ರಮ ಅಗತ್ಯ. ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕೆಂಬುದು ತಿಳಿಯಲಿದೆ. ಅದೇ ಮಾರ್ಗದಲ್ಲಿ ನಡೆಯಿರಿ. ಫಲ ಸಿಗುವುದು. ಮನೆಯ ರಿಪೇರಿಗಾಗಿ ಖರ್ಚು ಸಂಭವಿಸಬಹುದು.

ಕರ್ಕಾಟಕ: ಕುಟುಂಬದ ಅಭಿವೃದ್ಧಿಗೆ ಅಂತಃಕಲಹ, ಹಿತಶತ್ರುಗಳ ಬಾಧೆಯು ಅನುಭವಕ್ಕೆ ಬರಲಿದೆ. ರೈತರು ತಳಿಯ ಬೆಳೆಯಿಂದ ಸಂತೋಷವನ್ನು ಹೊಂದುವರು. ಮಕ್ಕಳ ಪರೀಕ್ಷೆಯು ಸಮಸ್ಯೆಯಾಗದಿರಲಿ.

ಸಿಂಹ: ಸರ್ಕಾರಿ ಅಧಿಕಾರಿಗಳಿಂದ ಆಗಬೇಕಾದ ಕೆಲಸಗಳು ಸರಿಯಾಗಿ ಆಗುವ ಸಾಧ್ಯತೆಗಳು ಕಂಡುಬರುತ್ತವೆ. ಕಾರ್ಖಾನೆಯೊಂದನ್ನು ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳುವ ಅವಕಾಶಗಳು ಸ್ನೇಹಿತನ ಸಹಾಯದಿಂದ ಸಿಗಬಹುದು.

ಕನ್ಯಾ: ಪ್ರತಿಭೆಯ ಸಾಮರ್ಥ್ಯ ಬೆಳಕಿಗೆ ಬರಲಿದೆ. ಸೃಜನಶೀಲತೆಗೆ ಮನ್ನಣೆಯು ದೊರಕುವುದು. ಮನೆಯಲ್ಲಿ ಉದ್ವೇಗದ ವಾತಾವರಣ ಎದುರಾಗಬಹುದು. ಎಳ್ಳೆಣ್ಣೆ ದೀಪ ಹಚ್ಚುವುದರಿಂದ ಪಾಪ ಪರಿಹಾರವಾಗಲಿದೆ.

ತುಲಾ: ಕೊಡು-ಕೊಳ್ಳುವಿಕೆಗಳಿಂದ ಅಧಿಕ ಲಾಭವಿರುವುದು. ಉದ್ಯೋಗದಲ್ಲಿ ಒಳ್ಳೆಯ ಅಭಿವೃದ್ಧಿ ಹೊಂದುವಿರಿ. ಕಾರ್ಮಿಕ ಜನರಿಗೆ ಒಳ್ಳೆಯ ದಿನ. ಮನೆಯಲ್ಲಿ ಮಂಗಳಕಾರ್ಯಗಳು ನೆರವೇರುವ ಬಗ್ಗೆ ಸೂಚನೆ ಸಿಗಲಿದೆ.

ವೃಶ್ಚಿಕ: ಹಗಲು ರಾತ್ರಿ ಎಂದೆನ್ನದೆ ನೀವು ಪಟ್ಟ ಶ್ರಮವು ಉತ್ತಮ ಫಲವನ್ನು ಶೀಘ್ರ ನೀಡಲಿದೆ. ಆಪ್ತರು ಸಕಾಲಿಕ ನೆರವಿಗಾಗಿ ಧನ್ಯವಾದ ತಿಳಿಸುವರು. ದಾಖಲೆಯ ನಿರ್ವಹಣೆಯ ವಿಚಾರದಲ್ಲಿ ಕೆಲಸಗಳನ್ನು ಪೂರ್ಣಗೊಳಿಸುವಿರಿ.


ಧನು: ಕೋರ್ಟ್‌ನಲ್ಲಿ ನಡೆಯುತ್ತಿದ್ದ ವಾದ–ವಿವಾದಗಳು ಎಲ್ಲರಿಗೂ ಸರಿಯಾಗುವ ರೀತಿಯಲ್ಲಿ ಕೊನೆಗೊಳ್ಳಲಿವೆ. ತಂದೆ-ತಾಯಿಯ ಆರೋಗ್ಯದ ಕಡೆಗೆ ಗಮನ ಕೊಡುವುದು ಅನಿವಾರ್ಯ.

ಮಕರ: ಭಾವನೆಗಳಿಗೆ ಬೆಲೆ ಕೊಡದವರ ಎದುರು ದುಃಖಗಳನ್ನು ಹೇಳಿಕೊಳ್ಳುವುದರಿಂದ ಪ್ರಯೋಜನವಿರುವುದಿಲ್ಲ. ಪೂರ್ಣ ಮನಸ್ಸಿನಿಂದ ಮಾಡಿದಂಥ ಕಾರ್ಯಗಳು ಉತ್ತಮ ಫಲ ನೀಡುತ್ತವೆ.

ಕುಂಭ: ಉದ್ಯೋಗ ಕ್ಷೇತ್ರದಲ್ಲಿ ಬಂದಿರುವ ಸಮಸ್ಯೆಗಳಿಗೆ ಸಂಪನ್ಮೂಲ ವ್ಯಕ್ತಿಗಳಿಂದ ಪರಿಹಾರಗಳು ದೊರೆಯಲಿವೆ. ಉದ್ಯೋಗದಲ್ಲಿ ಸಣ್ಣದಾಗಿ ಬದಲಾವಣೆ ಕಂಡುಬರುವುದು. ಬೌದ್ಧಿಕ ಶಕ್ತಿಗೆ ಪುಷ್ಟಿ ದೊರೆಯಲಿದೆ.

ಮೀನ: ವೈಯಕ್ತಿಕ ಮನೋಭಾವವನ್ನು ಬದಲಿಸಿಕೊಳ್ಳುವಂತೆ ಆಗಲಿದೆ. ಹಣಕಾಸಿನ ವಿಚಾರದಲ್ಲಿ ಭವಿಷ್ಯದ ಕುರಿತು ಯೋಚಿಸಿ ನಿರ್ಧಾರ ಕೈಗೊಳ್ಳುವುದರಿಂದ ಮುಂದಿನ ದಿನಗಳು ನೆಮ್ಮದಿದಾಯಕವಾಗಿ ಇರುವುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,114
ಇಂದಿನ ಅಂತ್ಯ: 25,069
ದಿನದ ಗರಿಷ್ಠ: 25,048
44

ಮೊಟ್ಟೆ ಧಾರಣೆ
ಬೆಂಗಳೂರು 100ಕ್ಕೆ ₹580; 12ಕ್ಕೆ ₹80
ಮೈಸೂರು: 100ಕ್ಕೆ ₹585

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಪ್ರ.ಕೆ) ₹477-673
ದ್ವಿತಳಿ (ಬಿ.ವಿ) ₹376-799

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ)
ಆರ್‌ಎಸ್‌ಎಸ್-4 ₹183
ಆರ್‌ಎಸ್‌ಎಸ್-5 ₹178
ಗುಡ್ ಲಾಟ್ ₹163

ಮುಂಬೈ ಖಾದ್ಯ ತೈಲ (10 ಕೆ.ಜಿ)
ಶೇಂಗಾ (ರಿಫೈನ್ಡ್) ₹1350 (1360)
ಸೋಯಾ (ರಿಫೈನ್ಡ್) ₹1285 (1280)
ಸೂರ್ಯಕಾಂತಿ (ರಿಫೈನ್ಡ್) ₹1420 (1420)
ಪಾಮೋಲಿನ್ ₹1275 (1270)

ಕೊಬ್ಬರಿ ಧಾರಣೆ
ಅರಸೀಕೆರೆ ₹28000-28013
ದಾವಣಗೆರೆ ₹15400-15500
ತಿಪಟೂರು ₹26500-28500
ತುರುವೇಕೆರೆ ₹26500-28200

ಅಡಿಕೆ ಧಾರಣೆ

ಕುಮಟಾ		ರಾಶಿ	33000-60599	ತಟ್ಟಿಬೆಟ್ಟೆ	31319-40099
ಚಾಲಿ	39089-43409	ಸಿಪ್ಪೆಗೋಟು	12099-21269	**ಶಿರಸಿ**	
ಚಿಪ್ಪು	25899-32289	**ಶಿವಮೊಗ್ಗ**		ಬೆಟ್ಟೆ	34110-37700
ಕೋಕ	7089-26029	ಬೆಟ್ಟೆ	56299-66882	ಬಿಳಿಗೋಟು	27199-35499
ಫ್ಯಾಕ್ಟರಿ	3569-30469	ಗೊರಬಲು	19010-35199	ಚಾಲಿ	38609-44000
ಹೊಸಚಾಲಿ	36890-44029	ಹೊಸ	53399-56299	ಕೆಂಪುಗೋಟು	26199-30899
ಪುತ್ತೂರು		ರಾಶಿ	46568-60399	ರಾಶಿ	47799-49218
ಕೋಕ	20000-28000	ಸರಕು	57100-91896	**ಯಲ್ಲಾಪುರ**	
ಹೊಸತು	26000-49000	**ಸಿದ್ದಾಪುರ**		ಬಿಳಿಗೋಟು	17600-30989
ಹಳತು	37500-52500	ಬಿಳಿಗೋಟು	24690-32389	ಚಾಲಿ	33506-44309
ಸಾಗರ		ಚಾಲಿ	35899-43139	ಕೋಕ	10510-19510
ಬಿಳಿಗೋಟು	10169-30666	ಕೋಕ	20319-27869	ಕೆಂಪುಗೋಟು	22806-27699
ಚಾಲಿ	28999-39755	ಕೆಂಪುಗೋಟು	23119-25900	ರಾಶಿ	43199-56799
ಕೋಕ	9669-26299	ರಾಶಿ	41489-48899	ತಟ್ಟಿಬೆಟ್ಟೆ	30016-38100
ಕೆಂಪುಗೋಟು	26989-35499				

ಸಗಟು ಹಣದುಬ್ಬರ ಏರಿಕೆ

ಆಹಾರ ಪದಾರ್ಥಗಳ ಬೆಲೆ ಹೆಚ್ಚಳದಿಂದ ಹಣದುಬ್ಬರ ಏರಿಕೆ: ಕೇಂದ್ರ

ನವದೆಹಲಿ (ಪಿಟಿಐ): ದೇಶದ ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರವು ಆಗಸ್ಟ್‌ನಲ್ಲಿ ನಾಲ್ಕು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದ್ದು, ಶೇ 0.52ರಷ್ಟು ಆಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಆಹಾರ ಪದಾರ್ಥಗಳು ಮತ್ತು ತಯಾರಿಕಾ ವಸ್ತುಗಳ ಬೆಲೆ ಹೆಚ್ಚಳದಿಂದ ಸಗಟು ಹಣದುಬ್ಬರವು ಏರಿಕೆಯಾಗಿದೆ ಎಂದು ಅದು ತಿಳಿಸಿದೆ. ಸಗಟು ಹಣದುಬ್ಬರ ಪ್ರಮಾಣವು ಜುಲೈ ಮತ್ತು ಜೂನ್‌ನಲ್ಲಿ ಕ್ರಮವಾಗಿ ಶೇ (–)0.58 ಮತ್ತು ಶೇ (–) 0.19ರಷ್ಟಿತ್ತು. ಏಪ್ರಿಲ್‌ನಲ್ಲಿ ಇದು ಶೇ 0.85ರಷ್ಟಿತ್ತು. ಕಳೆದ ಆಗಸ್ಟ್‌ನಲ್ಲಿ ಶೇ 1.25ರಷ್ಟು ಇತ್ತು ಎಂದು ತಿಳಿಸಿದೆ.


ಆಹಾರ ಪದಾರ್ಥಗಳು, ತಯಾರಿಕಾ ವಲಯದ ವಸ್ತುಗಳು, ಆಹಾರೇತರ ಉತ್ಪನ್ನಗಳು, ಸಾರಿಗೆ ಉಪಕರಣಗಳ ಬೆಲೆ ಹೆಚ್ಚಳವಾಗಿದೆ. ಇದು ಸಗಟು ಹಣದುಬ್ಬರ ಏರಿಕೆಗೆ ಪ್ರಮುಖ ಕಾರಣ ಎಂದು ಕೇಂದ್ರ ತಿಳಿಸಿದೆ.

ಜುಲೈನಲ್ಲಿ ಆಹಾರ ಪದಾರ್ಥಗಳ ಬೆಲೆ ಇಳಿಕೆ ಪ್ರಮಾಣ ಶೇ 6.29ರಷ್ಟಿತ್ತು. ಇದು ಆಗಸ್ಟ್‌ನಲ್ಲಿ ಶೇ 3.06ಕ್ಕೆ ತಗ್ಗಿದೆ. ತರಕಾರಿಗಳು ಮತ್ತು ಧಾನ್ಯಗಳ ಬೆಲೆ ಇಳಿಕೆ ಪ್ರಮಾಣ ಕ್ರಮವಾಗಿ ಶೇ 14.18 ಮತ್ತು ಶೇ 14.85ರಷ್ಟು ಆಗಿದೆ. ಜುಲೈನಲ್ಲಿ ಇದು ಕ್ರಮವಾಗಿ ಶೇ 28.96 ಮತ್ತು ಶೇ 15.12ರಷ್ಟು ಇತ್ತು.

ಜಿಎಸ್‌ಟಿ ಪರಿಷ್ಕರಣೆಯಿಂದ ಹಣದುಬ್ಬರವು ಇಳಿಕೆಯಾಗುವ ನಿರೀಕ್ಷೆ ಇದೆ ಎಂದು ಪಿಎಚ್‌ಡಿಸಿಸಿಐ ಅಧ್ಯಕ್ಷ ಹೇಮಂತ್ ಜೈನ್ ಹೇಳಿದ್ದಾರೆ.

ಕಚ್ಚಾ ತೈಲ, ಸರಕುಗಳ ಬೆಲೆ ಏರಿಕೆ ಮತ್ತು ಡಾಲರ್ ಎದುರು ರೂಪಾಯಿ ಮೌಲ್ಯವು ಇಳಿಕೆಯಿಂದಾಗಿ ಸೆಪ್ಟೆಂಬರ್‌ನಲ್ಲಿ ಸಗಟು ಹಣದುಬ್ಬರವು ಏರಿಕೆ ಕಾಣುವ ನಿರೀಕ್ಷೆ ಇದೆ ಎಂದು ಐಸಿಆರ್‌ಎ ಅಂದಾಜಿಸಿದೆ.

ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದ ಚಿಲ್ಲರೆ ಹಣದುಬ್ಬರವು ಆಗಸ್ಟ್‌ನಲ್ಲಿ ಶೇ 2.07ರಷ್ಟು ದಾಖಲಾಗಿತ್ತು.



ಮುಖ್ಯಾಂಶಗಳು

- ಆಗಸ್ಟ್ ತಿಂಗಳಿನಲ್ಲಿ ನಾಲ್ಕು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ
- ಜಿಎಸ್‌ಟಿ ಪರಿಷ್ಕರಣೆಯಿಂದ ಹಣದುಬ್ಬರ ಇಳಿಕೆ ನಿರೀಕ್ಷೆ
- ಆಗಸ್ಟ್‌ನಲ್ಲಿ ಶೇ 2.07ರಷ್ಟು ದಾಖಲಾಗಿದ್ದ ಚಿಲ್ಲರೆ ಹಣದುಬ್ಬರ

ಅಮೆರಿಕಕ್ಕೆ ರಫ್ತು ಆಗಸ್ಟ್‌ನಲ್ಲಿ ಇಳಿಕೆ

ಭಾರತದಿಂದ ಅಮೆರಿಕಕ್ಕೆ ಆಗುವ ರಫ್ತುಗಳ ಪ್ರಮಾಣವು ಜುಲೈಗೆ ಹೋಲಿಸಿದರೆ ಆಗಸ್ಟ್‌ನಲ್ಲಿ ಶೇಕಡ 14ರಷ್ಟು ಕಡಿಮೆ ಆಗಿದೆ.

ಭಾರತದ ಸರಕುಗಳ ಮೇಲೆ ಅಮೆರಿಕವು ಆಗಸ್ಟ್‌ನಿಂದ ಶೇ 50ರಷ್ಟು ತೆರಿಗೆ ವಿಧಿಸುತ್ತಿದೆ. ಆಗಸ್ಟ್‌ನಲ್ಲಿ ಭಾರತದಿಂದ ಅಮೆರಿಕಕ್ಕೆ ₹60,464 ಕೋಟಿ ಮೌಲ್ಯದ ಸರಕುಗಳು, ಸೇವೆಗಳು ರಫ್ತಾಗಿವೆ. ಜುಲೈನಲ್ಲಿ ರಫ್ತು ಮೊತ್ತವು ₹70,512 ಕೋಟಿ ಆಗಿತ್ತು.

ಅಮೆರಿಕಕ್ಕೆ ಆಗುವ ರಫ್ತಿನ ಮೊತ್ತ ಕಡಿಮೆ ಆಗಿದ್ದರೂ, ಭಾರತದ ರಫ್ತು ಪಟ್ಟಿಯಲ್ಲಿ ಅಮೆರಿಕವು ಆಗಸ್ಟ್‌ನಲ್ಲಿಯೂ ಮೊದಲ ಸ್ಥಾನದಲ್ಲಿ ಮುಂದುವರಿದಿದೆ.

ಹಿಂದಿನ ವರ್ಷದ ಆಗಸ್ಟ್‌ಗೆ ಹೋಲಿಸಿದರೆ ಈ ವರ್ಷದ ಆಗಸ್ಟ್‌ನಲ್ಲಿ ಅಮೆರಿಕಕ್ಕೆ ರಫ್ತು ಪ್ರಮಾಣವು ಶೇ 7.15ರಷ್ಟು ಹೆಚ್ಚಾಗಿದೆ ಎಂದು ವಾಣಿಜ್ಯ ಸಚಿವಾಲಯದ ಅಂಕಿ–ಅಂಶಗಳು ಹೇಳಿವೆ.

ಅಮೆರಿಕದ ನಂತರದ ಸ್ಥಾನದಲ್ಲಿ ಯುಎಇ, ನೆದರ್ಲೆಂಡ್ಸ್, ಚೀನಾ, ಬ್ರಿಟನ್ ಇವೆ.

ಆಗಸ್ಟ್ 7ರಿಂದ ಅನ್ವಯ ಆಗುವಂತೆ ಅಮೆರಿಕವು ಭಾರತದ ಸರಕುಗಳ ಮೇಲೆ ಶೇ 25ರಷ್ಟು ತೆರಿಗೆ ವಿಧಿಸಿದೆ. ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿರುವುದಕ್ಕಾಗಿ ಅಮೆರಿಕವು ಆಗಸ್ಟ್ 27ರಿಂದ ಅನ್ವಯ ಆಗುವಂತೆ ಭಾರತದ ಸರಕುಗಳ ಮೇಲೆ ಹೆಚ್ಚುವರಿಯಾಗಿ ಶೇ 25ರಷ್ಟು ತೆರಿಗೆ ವಿಧಿಸುತ್ತಿದೆ.

ಐಟಿಆರ್ ಸಲ್ಲಿಕೆ ಇಂದು ಕೊನೇ ದಿನ

ನವದೆಹಲಿ (ಪಿಟಿಐ): ದಂಡವಿಲ್ಲದೆ ಆದಾಯ ತೆರಿಗೆ ವಿವರ (ಐಟಿಆರ್) ಸಲ್ಲಿಕೆಗೆ ನೀಡಿದ್ದ ಸೆಪ್ಟೆಂಬರ್ 15ರ ಗಡುವನ್ನು ಸೆ.16ವರೆಗೆ ವಿಸ್ತರಿಸಲಾಗಿದೆ ಎಂದು ಆದಾಯ ತೆರಿಗೆ ಇಲಾಖೆ ಸೋಮವಾರ ‘ಎಕ್ಸ್’ನಲ್ಲಿ ತಿಳಿಸಿದೆ.

ಐ.ಟಿ ವಿವರ ಸಲ್ಲಿಸಲು ಪೋರ್ಟಲ್‌ನಲ್ಲಿ ಸಮಸ್ಯೆ ಆಗುತ್ತಿದೆ, ಗಡುವನ್ನು ವಿಸ್ತರಿಸಬೇಕು ಎಂದು ಬಳಕೆದಾರರು ಇಲಾಖೆಯನ್ನು ಒತ್ತಾಯಿಸಿದ್ದರು. ಹೀಗಾಗಿ, ಒಂದು ದಿನದ ಮಟ್ಟಿಗೆ ಗಡುವು ವಿಸ್ತರಿಸಲಾಗಿದೆ.

ಈ ಮೊದಲು ಸೆಪ್ಟೆಂಬರ್ 15ರವರೆಗೆ ದಂಡ ಇಲ್ಲದೆ ಐಟಿಆರ್ ಸಲ್ಲಿಕೆಗೆ ಅವಕಾಶವಿತ್ತು . ಈ ವೇಳೆಗೆ 7 ಕೋಟಿಗೂ ಹೆಚ್ಚು ಐಟಿಆರ್ ಸಲ್ಲಿಕೆಯಾಗಿವೆ. ಕಳೆದ ವರ್ಷದ ಜುಲೈ 31ರ ವೇಳೆಗೆ 7.28 ಕೋಟಿ ಐಟಿಆರ್ ಸಲ್ಲಿಕೆ ಆಗಿದ್ದವು ಎಂದು ಇಲಾಖೆ ತಿಳಿಸಿದೆ.

ಐ.ಟಿ ವಿವರ ಸಲ್ಲಿಕೆಗೆ ನೀಡಿದ್ದ ಗಡುವು ಅಂತಿಮಗೊಳ್ಳುತ್ತಿರುವ ಸಂದರ್ಭದಲ್ಲಿ ಪೋರ್ಟಲ್‌ಗೆ ಲಾಗಿನ್ ಆಗಲು ಸಾಧ್ಯವಾಗುತ್ತಿಲ್ಲ ಎಂದು ಹಲವಾರು ಬಳಕೆದಾರರು ಸಾಮಾಜಿಕ ಜಾಲತಾಣಗಳ ಮೂಲಕ ದೂರಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಇಲಾಖೆ, ಪೋರ್ಟಲ್ ಸರಿಯಾಗಿ ಕೆಲಸ ನಿರ್ವಹಿಸುತ್ತಿದೆ ಎಂದು ಹೇಳಿದೆ.

ಮುಂಬೈ ಧಾರಣೆ (ಶೇಂಗಾ)

15-09-2025

ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	9800-99000
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1360 (1370)
ಒಂದು ವಾರದ ಡೆಲಿವರಿ	1355 (1365)
ಪಾಮ್ ವಾರದ ಡೆಲಿವರಿ	1273 (1268)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (1340)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,09,200 (1,09,300)
ಬೆಳ್ಳಿ ಕೆ.ಜಿಗೆ	1,27,600 (1,28,300)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೆನರಾ ಬ್ಯಾಂಕ್ ಡೊಮೇನ್ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ತನ್ನ ಕಾರ್ಪೊರೇಟ್ ವೆಬ್‌ಸೈಟ್ ವಿಳಾಸವನ್ನು .bank.in ಡೊಮೇನ್‌ಗೆ ವರ್ಗಾವಣೆ ಮಾಡಿದೆ.

ಈಗ ಕೆನರಾ ಬ್ಯಾಂಕ್‌ನ ವೆಬ್‌ಸೈಟ್ https://canarabank.bank.in ಆಗಿದೆ ಎಂದು ಪ್ರಕಟಣೆ ತಿಳಿಸಿದೆ. ಆರ್‌ಬಿಐ ಸುತ್ತೋಲೆಗೆ ಅನುಗುಣವಾಗಿ ಈ ಬದಲಾವಣೆ ಮಾಡಲಾಗಿದೆ ಎಂದು ಹೇಳಿದೆ.

bank.in ಡೊಮೇನ್‌ಗಳನ್ನು ಬ್ಯಾಂಕ್‌ಗಳಿಗಾಗಿ ಮೀಸಲಾಗಿ ಇರಿಸಲಾಗಿದೆ. ಸೈಬರ್ ಬೆದರಿಕೆಗಳು ಮತ್ತು ಡೊಮೇನ್ ಒತ್ತೆಯಂತಹ ಅಪರಾಧ ಕೃತ್ಯಗಳಿಂದ ರಕ್ಷಣೆ ಒದಗಿಸುವ ಉದ್ದೇಶದಿಂದ ಹೀಗೆ ಮಾಡಲಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಸೆಬಿ ತೀರ್ಮಾನ: ಉದ್ಯಮ ವಲಯ ಸ್ವಾಗತ

ಆರ್‌ಇಐಟಿ ‘ಈಕ್ವಿಟಿ’ ಎಂದು ಪರಿಗಣನೆ

ನವದೆಹಲಿ (ಪಿಟಿಐ): ಮ್ಯೂಚುವಲ್ ಫಂಡ್‌ಗಳ ಪಾಲಿಗೆ ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್‌ಗಳನ್ನು (ಆರ್‌ಇಐಟಿ) ‘ಈಕ್ವಿಟಿ’ ಎಂದು ವರ್ಗೀಕರಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ತೀರ್ಮಾನಿಸಿರುವುದು ಪ್ರಗತಿಪರ ನಡೆ ಎಂದು ಉದ್ಯಮ ವಲಯ ಹೇಳಿದೆ.

ಸೆಬಿ ನಡೆಯು ಆರ್‌ಇಐಟಿಗಳಲ್ಲಿ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಬಲಪಡಿಸುತ್ತದೆ ಎಂದು ಉದ್ಯಮದ ಪ್ರತಿನಿಧಿಗಳು ಹೇಳಿದ್ದಾರೆ.

ಆರ್‌ಇಐಟಿಗಳಲ್ಲಿ ಮ್ಯೂಚುವಲ್ ಫಂಡ್‌ಗಳ ಹೂಡಿಕೆಯನ್ನು ಹೆಚ್ಚು ಮಾಡುವ ಉದ್ದೇಶದಿಂದ ಸೆಬಿ ಕಳೆದ ವಾರ, ‘ಸೆಬಿ (ಮ್ಯೂಚುವಲ್ ಫಂಡ್ಸ್) ನಿಯಮ – 1996’ಕ್ಕೆ ತಿದ್ದುಪಡಿ ತರಲು ಒಪ್ಪಿಗೆ ನೀಡಿದೆ. ತಿದ್ದುಪಡಿ ತಂದು ಆರ್‌ಇಐಟಿಗಳನ್ನು ‘ಈಕ್ವಿಟಿ’ ಎಂದು ವರ್ಗೀಕರಿಸಲಾಗುತ್ತದೆ. ಆದರೆ ಮೂಲಸೌಕರ್ಯ ಹೂಡಿಕೆ ಟ್ರಸ್ಟ್‌ಗಳ ವರ್ಗೀಕರಣವನ್ನು ‘ಹೈಬ್ರಿಡ್’ ಎಂದೇ ಉಳಿಸಿಕೊಳ್ಳಲಾಗುತ್ತದೆ.



ಸೆಬಿ ಕೈಗೊಂಡಿರುವ ತೀರ್ಮಾನದ ಪರಿಣಾಮವಾಗಿ ರಿಯಲ್ ಎಸ್ಟೇಟ್ ವಲಯದಲ್ಲಿ ಹೂಡಿಕೆ ಇನ್ನಷ್ಟು ಹೆಚ್ಚಾಗುತ್ತದೆ, ಇನ್ನಷ್ಟು ಹೆಚ್ಚು ಆರ್‌ಇಐಟಿಗಳು ಭಾರತದ ಷೇರುಪೇಟೆಗಳಲ್ಲಿ ನೋಂದಾಯಿತವಾಗಲು ಇದು ಉತ್ತೇಜನ ನೀಡುತ್ತದೆ ಎಂದು ಭಾರತೀಯ ಆರ್‌ಇಐಟಿಗಳ ಸಂಘಟನೆಯು (ಐಆರ್‌ಎ) ಹೇಳಿದೆ. ಷೇರುಪೇಟೆ ನೋಂದಾಯಿತ ಆರ್‌ಇಐಟಿಗಳ ಪ್ರತಿನಿಧಿಗಳು ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆರ್‌ಇಐಟಿಗಳು ಆದಾಯ ತಂದುಕೊಡುವ ರಿಯಲ್ ಎಸ್ಟೇಟ್ ಆಸ್ತಿಗಳ ಮಾಲೀಕತ್ವ ಹೊಂದಿರುತ್ತವೆ ಅಥವಾ ಅಂತಹ ಆಸ್ತಿಗಳನ್ನು ನಿರ್ವಹಿಸುತ್ತಿರುತ್ತವೆ. ಅವು ಹೂಡಿಕೆದಾರರಿಗೆ ಆಸ್ತಿಯನ್ನು ನೇರವಾಗಿ ಖರೀದಿಸದೆಯೇ ಅವುಗಳ ಆದಾಯದಲ್ಲಿ ಒಂದು ಪಾಲನ್ನು ಪಡೆದುಕೊಳ್ಳಲು ನೆರವಾಗುತ್ತವೆ.

ಜಾಗತಿಕ ಮಟ್ಟದಲ್ಲಿ ಕೂಡ ಆರ್‌ಇಐಟಿಗಳು ಈಕ್ವಿಟಿ ಸೂಚ್ಯಂಕಗಳ ಭಾಗವಾಗಿವೆ, ಸೆಬಿ ಈಗ ತೆಗೆದು ಕೊಂಡಿರುವ ತೀರ್ಮಾನವು ಪ್ರಗತಿಪರವಾದುದು ಎಂದು ಐಆರ್‌ಎ ಹೇಳಿದೆ. ದೇಶದಲ್ಲಿ ಈಗ ಐದು ಆರ್‌ಇಐಟಿಗಳು ಷೇರುಪೇಟೆಯಲ್ಲಿ ನೋಂದಾಯಿತ ಆಗಿವೆ.

ಆರು ಕಂಪನಿಗಳ ಐಪಿಒಗೆ ಸೆಬಿ ಒಪ್ಪಿಗೆ

ನವದೆಹಲಿ (ಪಿಟಿಐ): ಕೆನರಾ ರೊಬೆಕೊ ಅಸೆಟ್ ಮ್ಯಾನೇಜ್‌ಮೆಂಟ್, ಹೀರೊ ಮೋಟರ್ಸ್ ಸೇರಿ ಆರು ಕಂಪನಿಗಳು ಸಾರ್ವಜನಿಕರಿಗೆ ಷೇರು ಮಾರಾಟ ಮಾಡುವ ಪ್ರಕ್ರಿಯೆಗೆ (ಐಪಿಒ) ಸೆಬಿ ಒಪ್ಪಿಗೆ ಪಡೆದಿವೆ.

ಪೈನ್ ಲ್ಯಾಬ್ಸ್, ಓರ್ಕ್ಲಾ ಇಂಡಿಯಾ, ಮಣಿಪಾಲ್ ಪೇಮೆಂಟ್ ಆ್ಯಂಡ್ ಐಡೆಂಟಿಟಿ ಸಲ್ಯೂಷನ್ಸ್ ಮತ್ತು ಎಮ್ವೀ ಫೋಟೊವೋಲ್ಟಾಯಿಕ್ ಪವರ್ ಐಪಿಒಗೆ ಅನುಮತಿ ಪಡೆದ ಇತರೆ ಕಂಪನಿಗಳಾಗಿವೆ.

ಈ ಕಂಪನಿಗಳು ಸೆಬಿಗೆ ಏಪ್ರಿಲ್ ಮತ್ತು ಜುಲೈನಲ್ಲಿ ಐಪಿಒಗೆ ದಾಖಲೆಗಳನ್ನು ಸಲ್ಲಿಸಿದ್ದವು. ಸೆಬಿ ಈ ದಾಖಲೆಗಳನ್ನು ಪರಿಶೀಲಿಸಿದೆ.

ಹೀರೊ ಮೋಟರ್ಸ್ ₹1,200 ಕೋಟಿ ಬಂಡವಾಳ ಸಂಗ್ರಹಿಸಲು ನಿರ್ಧರಿಸಿದೆ. ಈಕ್ವಿಟಿ ಷೇರು ಮೂಲಕ ₹800 ಕೋಟಿ ಮತ್ತು ಒಎಫ್‌ಎಸ್‌ನಿಂದ ₹400 ಕೋಟಿ ಸಂಗ್ರಹಿಸಲಿದೆ.

ಚಂದ್ರಮೌಳಿ ಹತ್ಯೆ ಆರೋಪಿ ವಿರುದ್ಧ ಕ್ರಮ: ಟ್ರಂಪ್

ಹ್ಯೂಸ್ಟನ್/ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಡಲ್ಲಾಸ್‌ನಲ್ಲಿದ್ದ ಮೋಟೆಲ್ ಮ್ಯಾನೇಜರ್, ಕರ್ನಾಟಕದ ಚಂದ್ರಮೌಳಿ ನಾಗಮಲ್ಲಯ್ಯ (50) ಅವರ ಹತ್ಯೆಯ ಆರೋಪಿ ವಿರುದ್ಧ ಉದ್ದೇಶಪೂರ್ವಕ ಕೊಲೆ ಆರೋಪದಡಿ ಪ್ರಕರಣ ದಾಖಲಿಸಲಾಗುವುದು. ಆತನ ವಿರುದ್ಧ ಸಂಪೂರ್ಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಈ ಬಗ್ಗೆ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ‘ಟೆಕ್ಸಾಸ್‌ನ ಡಲ್ಲಾಸ್‌ನಲ್ಲಿದ್ದ, ಗೌರವಾನ್ವಿತ ವ್ಯಕ್ತಿಯಾಗಿದ್ದ ಚಂದ್ರಮೌಳಿ ಅವರ ಹತ್ಯೆ ಕುರಿತ ಮಾಹಿತಿ ನನಗೆ ತಿಳಿದಿದೆ. ನಮ್ಮ ದೇಶದಲ್ಲಿ ಎಂದಿಗೂ ಇರಬಾರದಾಗಿದ್ದ, ಕ್ಯೂಬಾದ ಅಕ್ರಮ ವಲಸಿಗನೊಬ್ಬ, ಚಂದ್ರಮೌಳಿ ಅವರ ಪತ್ನಿ, ಪುತ್ರನ ಎದುರು ಅವರ ಶಿರಚ್ಛೇದ ಮಾಡಿ ಹತ್ಯೆ ಮಾಡಿದ್ದಾನೆ’ ಎಂದು ಬರೆದುಕೊಂಡಿದ್ದಾರೆ.

ಹಿಂದಿನ ಅಧ್ಯಕ್ಷ ಜೋ ಬೈಡನ್ ಅವರ ವಲಸೆ ನೀತಿಯನ್ನು ದೂಷಿಸಿದ ಟ್ರಂಪ್, ‘ದಾಳಿಕೋರರನ್ನು ಅಕ್ರಮ ವಿದೇಶಿ ವಲಸಿಗರು ಎಂದು ಕರೆಯಲಾಗಿತ್ತು. ಇಂತಹವರನ್ನು ಗಡೀಪಾರು ಮಾಡಬೇಕಿತ್ತು. ಅಕ್ರಮ ವಲಸಿಗ ಅಪರಾಧಿಗಳನ್ನು ಮೃದುವಾಗಿ ಕಾಣುವ ಸಮಯ ಮುಗಿದಿದೆ’ ಎಂದಿದ್ದಾರೆ.

ಡಲ್ಲಾಸ್‌ನ ‘ಡೌನ್‌ಟೌನ್ ಸ್ಯೂಟ್’ ಮೋಟೆಲ್‌ನಲ್ಲಿ ಸಹೋದ್ಯೋಗಿಯಾಗಿದ್ದ, ಕ್ಯೂಬಾದ ಯೋರ್ಡನಿಸ್ ಕೊಬಾಸ್ ಮಾರ್ಟಿನೆಜ್ ಎಂಬಾತ ಚಂದ್ರಮೌಳಿ ಅವರ ತಲೆಯನ್ನು ಮಚ್ಚಿನಿಂದ ಕಡಿದು ಕೊಲೆ ಮಾಡಿದ್ದ, ಆತನನ್ನು ಪೊಲೀಸರು ಬಂಧಿಸಿದ್ದಾರೆ.

‘₹10 ಸಾವಿರ ಕೋಟಿ ಚಿಟ್ ಫಂಡ್ ಗುರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಟ್ ಫಂಡ್ ವಹಿವಾಟು ಮೊತ್ತವನ್ನು 2026ರ ವೇಳೆಗೆ ₹5,000 ಕೋಟಿಗೆ ಹೆಚ್ಚು ಮಾಡುವ ಗುರಿಯನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಹೊಂದಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್ ಹೇಳಿದ್ದಾರೆ.

2028ರ ವೇಳೆಗೆ ಈ ಮೊತ್ತವನ್ನು ₹10 ಸಾವಿರ ಕೋಟಿಗೆ ಹೆಚ್ಚು ಮಾಡುವ ಗುರಿಯನ್ನು ಕೂಡ ಸಂಸ್ಥೆಯು ಹೊಂದಿದೆ. ಈಗ ಎಂಎಸ್‌ಐಎಲ್ ₹1 ಲಕ್ಷದಿಂದ ಆರಂಭಿಸಿ ₹1 ಕೋಟಿಗಿಂತ ಹೆಚ್ಚಿನ ಮೊತ್ತದ ಚಿಟ್ ಫಂಡ್‌ಗಳನ್ನು ನಿರ್ವಹಣೆ ಮಾಡುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ಚಿಟ್ ಫಂಡ್ ಅಸೋಸಿಯೇಷನ್ ಈಚೆಗೆ ಆಯೋಜಿಸಿದ್ದ ‘ಅಖಿಲ ಭಾರತ ಚಿಟ್ ಫಂಡ್ಸ್ ಶೃಂಗಸಭೆ – 2025’ರ ಉದ್ಘಾಟನಾ ಕಾರ್ಯಕ್ರಮದಲ್ಲಿ ಮನೋಜ್ ಕುಮಾರ್ ಅವರು ಈ ವಿಷಯ ತಿಳಿಸಿದ್ದಾರೆ. ‘ಚಿಟ್ ಫಂಡ್‌ಗಳನ್ನು ಹೆಚ್ಚು ಪಾರದರ್ಶಕ ಆಗಿಸಿ, ಅವು ಎಲ್ಲರನ್ನೂ ಒಳಗೊಳ್ಳುವಂತೆ ಮಾಡಿ ಮತ್ತು ರಾಜ್ಯದಾದ್ಯಂತ ಮನೆಮನೆಗಳಿಗೆ ವಿಸ್ತರಿಸುವಂತೆ ಮಾಡುವ ಉದ್ದೇಶ ಇದೆ’ ಎಂದರು.

ಮಾರ್ಗದರ್ಶಿ ಚಿಟ್ ಫಂಡ್‌ನ ವ್ಯವಸ್ಥಾಪಕ ನಿರ್ದೇಶಕಿ ಶೈಲಜಾ ಕಿರಣ್, ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



‘ಅಖಿಲ ಭಾರತ ಚಿಟ್ ಫಂಡ್ಸ್ ಶೃಂಗಸಭೆ – 2025’ರ ಉದ್ಘಾಟನಾ ಕಾರ್ಯಕ್ರಮ ಈಚೆಗೆ ನಡೆಯಿತು

ಸುದ್ದಿ 2 ನಿಮಿಷ

‘ಸಾಲ ನೀಡಿಕೆ ಹೆಚ್ಚಳ ನಿರೀಕ್ಷೆ’

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ದ್ವಿತೀಯಾರ್ಧದಲ್ಲಿ ಬ್ಯಾಂಕ್‌ಗಳ ಸಾಲ ನೀಡಿಕೆ ಪ್ರಮಾಣ ಶೇ 12ರಷ್ಟು ಹೆಚ್ಚಳವಾಗಲಿದೆ ಎಂದು ರೇಟಿಂಗ್ ಸಂಸ್ಥೆ ಕ್ರಿಸಿಲ್ ಸೋಮವಾರ ತಿಳಿಸಿದೆ. ಕಾರ್ಪೊರೇಟ್ ಕಂಪನಿಗಳಿಗೆ ನೀಡುವ ಸಾಲದ ಪ್ರಮಾಣ ಕಡಿಮೆಯಾಗಲಿದೆ ಎಂದು ಹೇಳಿದೆ.

ಬ್ಯಾಂಕ್‌ಗಳಲ್ಲಿ ಕುಟುಂಬಗಳು ಇರಿಸುತ್ತಿರುವ ಠೇವಣಿ ಪ್ರಮಾಣ ಕಡಿಮೆ ಆಗಿದೆ. ಇದು ಒಟ್ಟಾರೆ ಠೇವಣಿ ಸ್ಥಿರತೆ ಮತ್ತು ಸಣ್ಣ ಉದ್ದಿಮೆಗಳಿಗೆ ನೀಡುವ ಸಾಲದ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದೆ.

‘ಜೂನ್ ತ್ರೈಮಾಸಿಕದಲ್ಲಿ ಸಾಲ ನೀಡಿಕೆ ಪ್ರಮಾಣ ಶೇ 9.5ರಷ್ಟಿತ್ತು. ಈಗ ಅದು ಶೇ 10ರಷ್ಟಿದೆ. ಪ್ರಸಕ್ತ ಆರ್ಥಿಕ ವರ್ಷದ ದ್ವಿತೀಯಾರ್ಧದಲ್ಲಿ ಸಾಲದ ನೀಡಿಕೆಯು ತ್ವರಿತ ಬೆಳವಣಿಗೆ ಕಾಣಲಿದ್ದು, ಶೇ 11ರಿಂದ ಶೇ 12ರಷ್ಟಾಗಬಹುದು’ ಎಂದು ಕ್ರಿಸಿಲ್‌ನ ಮುಖ್ಯ ರೇಟಿಂಗ್ ಅಧಿಕಾರಿ ಕೃಷ್ಣನ್ ಸೀತಾರಾಮನ್ ಹೇಳಿದ್ದಾರೆ.



2025–26ರ ಆರ್ಥಿಕ ವರ್ಷದಲ್ಲಿ ಒಟ್ಟು ವಸೂಲಾಗದ ಸಾಲದ ಸರಾಸರಿ ಪ್ರಮಾಣ (ಜಿಎನ್‌ಪಿಎ) ಶೇ 2.3ರಿಂದ ಶೇ 2.5ಕ್ಕೆ ಏರಿಕೆ ಆಗಲಿದೆ ಎಂದು ತಿಳಿಸಿದೆ.

ಅಮೆರಿಕದ ‘ಬೆದರಿಕೆ’ ಕ್ರಮ: ಚೀನಾ ಟೀಕೆ

ಬೀಜಿಂಗ್ (ಪಿಟಿಐ): ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವ ರಾಷ್ಟ್ರಗಳ ವಿರುದ್ಧ ಸುಂಕ ವಿಧಿಸುವಂತೆ ಜಿ7 ಮತ್ತು ನ್ಯಾಟೊ ದೇಶಗಳಿಗೆ ಅಮೆರಿಕ ಕರೆ ನೀಡಿರುವುದನ್ನು ಚೀನಾ ಖಂಡಿಸಿದೆ.

ಅಮೆರಿಕದ ನಿಲುವನ್ನು ‘ಏಕಪಕ್ಷೀಯ ಬೆದರಿಕೆ’ ಎಂದು ಚೀನಾ ಸೋಮವಾರ ಬಣ್ಣಿಸಿದ್ದು, ‘ವಾಷಿಂಗ್ಟನ್‌ನ ಕರೆಗೆ ಮಣಿದು ಸುಂಕ ಹೇರಿದರೆ ಪ್ರತಿಸುಂಕ ಹಾಕಲಾಗುವುದು’ ಎಂದು ಎಚ್ಚರಿಸಿದೆ.

ಆರ್ಥಿಕ ಮತ್ತು ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಚೀನಾ ಹಾಗೂ ಅಮೆರಿಕದ ನಿಯೋಗಗಳು ಸೋಮವಾರ ಸ್ಪೇನ್‌ನಲ್ಲಿ ಎರಡನೇ ಸುತ್ತಿನ ಸಭೆ ನಡೆಸಿದ ಸಂದರ್ಭದಲ್ಲೇ ಈ ಬೆಳವಣಿಗೆ ನಡೆದಿದೆ. ‘ರಷ್ಯಾ ಸೇರಿದಂತೆ ವಿಶ್ವದ ವಿವಿಧ ದೇಶಗಳೊಂದಿಗೆ ಚೀನಾದ ಆರ್ಥಿಕ ಮತ್ತು ಇಂಧನ ಸಹಕಾರವು ಕಾನೂನುಬದ್ಧವಾಗಿಯೇ ಇದೆ’ ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಲಿನ್ ಜಿಯಾನ್ ಹೇಳಿದ್ದಾರೆ.

ಚೀನಾ ಸೇರಿದಂತೆ ರಷ್ಯಾದಿಂದ ತೈಲ ಖರೀದಿಸುವ ರಾಷ್ಟ್ರಗಳ ವಿರುದ್ಧ ಹೆಚ್ಚಿನ ಸುಂಕ ವಿಧಿಸುವಂತೆ ಅಮೆರಿಕವು ಈಚೆಗೆ ತನ್ನ ಮಿತ್ರ ರಾಷ್ಟ್ರಗಳಿಗೆ ಕರೆ ನೀಡಿರುವುದಕ್ಕೆ ಸಂಬಂಧಿಸಿದ ಪ್ರಶ್ನೆಗೆ ಅವರು ಈ ರೀತಿ ಪ್ರತಿಕ್ರಿಯಿಸಿದ್ದಾರೆ.

‘ಅಮೆರಿಕದ ಬಲವಂತದ ಕ್ರಮವು ಅಂತರರಾಷ್ಟ್ರೀಯ ವ್ಯಾಪಾರ ನಿಯಮಗಳ ಉಲ್ಲಂಘನೆಯಾಗಿದೆ. ಜಾಗತಿಕ ಆಮದು ಮತ್ತು ರಫ್ತು ಪ್ರಕ್ರಿಯೆಯ ಸುರಕ್ಷತೆ ಹಾಗೂ ಸ್ಥಿರತೆಗೆ ಬೆದರಿಕೆ ಉಂಟುಮಾಡಿದೆ’ ಎಂದು ದೂರಿದ್ದಾರೆ.

‘ಜಪಾನ್ ಕಂಪನಿಗಳಿಂದ ₹4 ಸಾವಿರ ಕೋಟಿ ಹೂಡಿಕೆ ಖಾತ್ರಿ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಕಳೆದ ವಾರ ಕೈಗೊಂಡ ಜಪಾನ್ ಭೇಟಿಯ ಪರಿಣಾಮ, ಆ ದೇಶದ ವಿವಿಧ ಉದ್ಯಮಗಳು ರಾಜ್ಯದಲ್ಲಿ ₹4 ಸಾವಿರ ಕೋಟಿಗೂ ಹೆಚ್ಚು ಹೂಡಿಕೆ ಮಾಡುವುದು ಖಾತ್ರಿಯಾಗಿದೆ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಹೂಡಿಕೆ ಆಕರ್ಷಿಸುವ ದೃಷ್ಟಿಯಿಂದ ಜಪಾನ್‌ಗೆ ಎರಡನೇ ಬಾರಿಗೆ ಭೇಟಿ ನೀಡಲಾಗಿತ್ತು. ಜಪಾನಿನ ಉದ್ಯಮಗಳ ಪ್ರಮುಖರು ಸಾಂಪ್ರದಾಯಿಕ ಆಲೋಚನೆ ಇರುವವರು. ಅವರು ಯೋಚಿಸಿ ನಿರ್ಧಾರಕ್ಕೆ ಬರುತ್ತಾರೆ. ದೇಶದಲ್ಲಿರುವ ಜಪಾನ್‌ನ ಉದ್ದಿಮೆಗಳಲ್ಲಿ ಶೇಕಡ 50ರಷ್ಟು ಕಂಪನಿಗಳು ಕರ್ನಾಟಕದಲ್ಲೇ ಇವೆ. ಹಿಂದೆ ನಾನು ಜಪಾನ್ ಮತ್ತು ದಕ್ಷಿಣ ಕೊರಿಯಾಗೆ ಭೇಟಿ ನೀಡಿದ್ದಾಗ ₹6,500 ಕೋಟಿ ಮೊತ್ತದ ಹೂಡಿಕೆ ಸೆಳೆಯಲಾಗಿತ್ತು’ ಎಂದರು.

‘ಈ ಬಾರಿಯ ಭೇಟಿಯಲ್ಲಿ ಹೋಂಡಾ ಮುಂತಾದ ಕಂಪನಿಗಳು ರಾಜ್ಯದಲ್ಲಿ ವಿಸ್ತರಣೆ, ಮುಕುಂದ್ ಸುಮಿ ಸ್ಟೀಲ್ಸ್ ಕಂಪನಿ ಜತೆ ಸಹಭಾಗಿತ್ವ ಮುಂತಾದ ವಿಚಾರ ಕುರಿತು ಚರ್ಚಿಸಲಾಗಿದೆ. ಈ ಮಧ್ಯೆ, ಅಮೆರಿಕವು ಎಲೆಕ್ಟ್ರಾನಿಕ್ ಮತ್ತು ಫಾರ್ಮಾ ಉತ್ಪನ್ನಗಳನ್ನು ಬಿಟ್ಟು ಭಾರತದ ಉಳಿದ ಉತ್ಪನ್ನಗಳ ಮೇಲೆ ಶೇ 50ರಷ್ಟು ಆಮದು ಸುಂಕ ವಿಧಿಸಿದೆ. ಇದರಿಂದ ಬಿಕ್ಕಟ್ಟು ಸೃಷ್ಟಿಯಾಗಿದೆ. ಇಂತಹ ಸಂದರ್ಭದಲ್ಲಿ ಹೂಡಿಕೆದಾರರು ನಿರ್ಧಾರಕ್ಕೆ ಬರುವುದು ಕಷ್ಟವಾಗುತ್ತದೆ’ ಎಂದರು.

‘ಕೆಲವು ಕಂಪನಿಗಳು ರಾಜ್ಯದಲ್ಲಿ ಕಡಿಮೆ ಬಂಡವಾಳ ಹೂಡಬಹುದು. ಆದರೆ, ಅವೆಲ್ಲವೂ ನಮ್ಮ ಕೈಗಾರಿಕಾ ಕಾರ್ಯ ಪರಿಸರದ ಮೌಲ್ಯವರ್ಧನೆಗೆ ಅನುಕೂಲ ಆಗಲಿದೆ. ಜೊತೆಗೆ, ಉದ್ದಿಮೆದಾರರು ಹೂಡಿಕೆಯ ವಿಚಾರಕ್ಕೆ ಬಂದಾಗ ಶಾಂತಿಯುತ ವಾತಾವರಣ ಇಷ್ಟಪಡುತ್ತಾರೆ. ಇದನ್ನು ಕೂಡ ಎಲ್ಲರೂ ಗಮನಕ್ಕೆ ತೆಗೆದುಕೊಳ್ಳಬೇಕು. ದೇಶದ ಯಾವ ಭಾಗದಲ್ಲೂ ಹೂಡಿಕೆಗೆ ಪ್ರತಿಕೂಲ ಎನಿಸುವಂಥ ಪರಿಸ್ಥಿತಿ ನಿರ್ಮಾಣ ಆಗಬಾರದು’ ಎಂದು ಅವರು ಆಶಯ ವ್ಯಕ್ತಪಡಿಸಿದರು.

ನೇಪಾಳ: ಸುಶೀಲಾ ಸಂಪುಟಕ್ಕೆ ಸಚಿವರು

ಕಠ್ಮಂಡು (ಪಿಟಿಐ): ನೇಪಾಳದ ಉಸ್ತುವಾರಿ ಪ್ರಧಾನಿ ಸುಶೀಲಾ ಕಾರ್ಕಿ ಅವರ ಸಂಪುಟಕ್ಕೆ ಸೇರ್ಪಡೆಗೊಂಡ ಮೂವರಿಗೆ ಅಧ್ಯಕ್ಷ ರಾಮಚಂದ್ರ ಪೌಡೆಲ್ ಅವರು ಸೋಮವಾರ ಪ್ರಮಾಣ ವಚನ ಬೋಧಿಸಿದರು.

ದೇಶದ ಮೊದಲ ಮಹಿಳಾ ಪ್ರಧಾನಿಯಾಗಿ ಭಾನುವಾರ ಅಧಿಕಾರ ಸ್ವೀಕರಿಸಿದ್ದ ಸುಶೀಲಾ ಅವರು ಕುಲ್ಮನ್ ಘಿಸಿಂಗ್, ರಾಮೇಶ್ವರ್ ಖಾನಾಲ್ ಹಾಗೂ ಓಂ ಪ್ರಕಾಶ್ ಆರ್ಯಲ್ ಅವರನ್ನು ಸಚಿವರನ್ನಾಗಿ ನೇಮಿಸಿದ್ದರು.

ಮಹಾರಾಜಗುಂಜ್‌ನ ಶೀತಲ್ ನಿವಾಸ್‌ನಲ್ಲಿನ ಅಧ್ಯಕ್ಷರ ಕಚೇರಿಯಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಿತು.



ಸುಶೀಲಾ ಕಾರ್ಕಿ

ಹಣಕಾಸು ಇಲಾಖೆಯ ನಿವೃತ್ತ ಕಾರ್ಯದರ್ಶಿ ಖಾನಾಲ್ ಹಣಕಾಸು ಸಚಿವರಾಗಿ, ವಿದ್ಯುತ್ ಪ್ರಾಧಿಕಾರದ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಘಿಸಿಂಗ್ ಇಂಧನ, ಜಲಸಂಪನ್ಮೂಲ ಮತ್ತು ನೀರಾವರಿ, ಮೂಲಸೌಕರ್ಯ ಮತ್ತು ಸಾರಿಗೆ, ನಗರಾಭಿವೃದ್ಧಿ ಖಾತೆಗಳ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ವಕೀಲರಾದ ಆರ್ಯಲ್ ಅವರು ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ನಂತರ ಮೂವರೂ ಸಚಿವರು ತಮ್ಮ ಕಚೇರಿಗಳಲ್ಲಿ ಅಧಿಕಾರ ವಹಿಸಿಕೊಂಡರು.

ಅತ್ಯಾಚಾರ ಪ್ರಕರಣ: ಶಂಕಿತನ ಸೆರೆ

ಲಂಡನ್ (ಪಿಟಿಐ): ಜನಾಂಗೀಯ ದ್ವೇಷಕ್ಕಾಗಿ ಬ್ರಿಟಿಷ್ ಸಿಖ್ ಯುವತಿಯ ಮೇಲೆ ನಡೆದಿದೆ ಎನ್ನಲಾಗಿರುವ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ರಿಟನ್ ಪೊಲೀಸರು ಶಂಕಿತ ವ್ಯಕ್ತಿ (30) ಒಬ್ಬನನ್ನು ಬಂಧಿಸಿದ್ದಾರೆ.

ಶಂಕಿತನನ್ನು ಭಾನುವಾರವೇ ಬಂಧಿಸಲಾಗಿದ್ದು, ತನಿಖೆಯ ಭಾಗವಾಗಿ ಆತನನ್ನು ಪೊಲೀಸರ ವಶದಲ್ಲೇ ಇರಿಸಿಕೊಳ್ಳಲಾಗಿದೆ. ಸಂತ್ರಸ್ತ ಯುವತಿಯ ಸಮುದಾಯವು ತನಿಖೆಗೆ ಸಹಕರಿಸುತ್ತಿದೆ ಎಂದೂ ಪೊಲೀಸರು ತಿಳಿಸಿದ್ದಾರೆ.

ಇಂಗ್ಲೆಂಡ್‌ನ ವೆಸ್ಟ್ ಮಿಡ್‌ಲ್ಯಾಂಡ್ ಪ್ರಾಂತ್ಯದ ಓಲ್ಡ್‌ಬರಿ ಎಂಬಲ್ಲಿ ಕಳೆದ ಮಂಗಳವಾರ ಸಿಖ್ ಯುವತಿಯೊಬ್ಬರ ಮೇಲೆ ಅತ್ಯಾಚಾರ ನಡೆದಿತ್ತು. ಈ ಸಂಬಂಧ ಪ್ರಕರಣ ದಾಖಲಾಗಿತ್ತು.

ಅತ್ಯಾಚಾರ ಎಸಗಿರುವ ಆರೋಪಿಗಳು ಸಂತ್ರಸ್ತೆಗೆ ‘ನೀನು ಈ ನೆಲದವಳಲ್ಲ’ ಎಂದು ಜನಾಂಗೀಯ ನಿಂದನೆಯನ್ನೂ ಮಾಡಿದ್ದರು ಎನ್ನಲಾಗಿತ್ತು. ಜನಾಂಗೀಯ ದ್ವೇಷದಿಂದಲೇ ಈ ಅತ್ಯಾಚಾರ ಎಸಗಿದ್ದಾರೆಂಬ ಶಂಕೆ ವ್ಯಕ್ತಪಡಿಸಿರುವ ಪೊಲೀಸರು, ಇತರ ಆರೋಪಿಗಳಿಗಾಗಿ ಹುಡುಕಾಟ ನಡೆಸುತ್ತಿರುವುದಾಗಿಯೂ ಹೇಳಿದ್ದಾರೆ.

ಕುಕಿ ನಾಯಕನ ಮನೆಗೆ ಬೆಂಕಿ, ಉದ್ವಿಗ್ನ ಪರಿಸ್ಥಿತಿ

ಇಂಫಾಲ್ (ಪಿಟಿಐ): ಮಣಿಪುರದ ಚುರಾಚಾಂದಪುರ ಜಿಲ್ಲೆಯಲ್ಲಿ ಗುಂಪೊಂದು ಕುಕಿ ರಾಷ್ಟ್ರೀಯ ಸಂಘಟನೆ (ಕೆಎನ್‌ಒ) ನಾಯಕ ಕ್ಯಾಲ್ವಿನ್ ಐಖೆಂತಾಂಗ್ ಅವರ ಮನೆಗೆ ಭಾನುವಾರ ರಾತ್ರಿ ಬೆಂಕಿ ಹಚ್ಚಿದೆ. ಇದರಿಂದ, ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ.

ಆದರೆ, ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಿದೆ ಎಂದು ಸ್ಥಳೀಯರು ಹೇಳಿದ್ದಾರೆ.

ಕುಕಿ ಜೋ ಮಂಡಳಿಯ (ಕೆಜಡ್‌ಸಿ) ವಕ್ತಾರ ಗಿಂಜಾ ವಲ್ಜಾಂಗ್ ಅವರ ನಿವಾಸವೂ ದುಷ್ಕರ್ಮಿಗಳ ಕೆಂಗಣ್ಣಿಗೆ ಗುರಿಯಾಗಿತ್ತು. ಆದರೆ, ಸ್ಥಳೀಯರ ಸಮಯೋಚಿತ ಮಧ್ಯಪ್ರವೇಶದಿಂದಾಗಿ ಬೆಂಕಿ ಹಚ್ಚುವುದು ತಪ್ಪಿದೆ.

ಮಣಿಪುರದಲ್ಲಿ ಶಾಶ್ವತವಾಗಿ ಶಾಂತಿ ಮತ್ತು ಸ್ಥಿರತೆ ಸ್ಥಾಪಿಸುವುದೂ ಸೇರಿದಂತೆ ಹಲವು ನಿಯಮಗಳ ಕುರಿತಾದ ಕಾರ್ಯಾಚರಣೆ ನಿಗ್ರಹ (ಎಸ್‌ಒಒ) ಒಪ್ಪಂದಕ್ಕೆ ಕೇಂದ್ರ ಸರ್ಕಾರ ಹಾಗೂ ಕೆಎನ್‌ಒ, ಯುನೈಟೆಡ್ ಪೀಪಲ್ಸ್ ಫ್ರಂಟ್ ಸೆ.4ರಂದು ಸಹಿ ಹಾಕಿದ್ದವು. ಇದು, ಗಲಭೆಪೀಡಿತ ರಾಜ್ಯದಲ್ಲಿ ಶಾಂತಿ ಸ್ಥಾಪನೆಯ ಪ್ರಯತ್ನದ ಮೇಲೆ ಸಕಾರಾತ್ಮಕ ಪರಿಣಾಮ ಬೀರಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ದೋಹಾದ ಇಸ್ರೇಲ್ ದಾಳಿ ಖಂಡಿಸಿ ಕತಾರ್‌ನಲ್ಲಿ ಶೃಂಗಸಭೆ– ಕತಾರ್ ದೊರೆ ಶೇಖ್ ತಮೀಮ್ ಆಕ್ರೋಶ

‘ಹತ್ಯೆ ಮಾಡುವ ಉದ್ದೇಶವಿದ್ದರೆ, ಮಾತುಕತೆ ಏಕೆ?’

ದುಬೈ (ಎಪಿ): ಕಳೆದ ವಾರ ದೋಹಾದಲ್ಲಿ ಹಮಾಸ್ ಮುಖಂಡರನ್ನು ಗುರಿಯಾಗಿರಿಸಿಕೊಂಡು ಇಸ್ರೇಲ್ ದಾಳಿ ನಡೆಸಿದ್ದಕ್ಕೆ ಪ್ರತಿಯಾಗಿ ಅರಬ್ ಹಾಗೂ ಇಸ್ಲಾಮಿಕ್ ರಾಷ್ಟ್ರಗಳ ಒಗ್ಗಟ್ಟು ಪ್ರದರ್ಶಿಸುವ ನಿಟ್ಟಿನಲ್ಲಿ ಕತಾರ್ ಸೋಮವಾರ ಶೃಂಗಸಭೆ ಆಯೋಜಿಸಿತು.

ಕತಾರ್ ದೊರೆ ಕಿಡಿ: ಶೃಂಗಸಭೆಗೆ ಚಾಲನೆ ನೀಡಿ ಉಗ್ರ ಭಾಷಣ ಮಾಡಿದ ಕತಾರ್ ದೊರೆ ಶೇಖ್ ತಮೀಮ್ ಬಿನ್ ಹಮದ್ ಅಲ್ ಥಾನಿ, ‘ಗಾಜಾದಲ್ಲಿರುವ ತನ್ನ ಒತ್ತೆಯಾಳುಗಳ ಬಗ್ಗೆ ಇಸ್ರೇಲ್ ಯಾವುದೇ ಕಾಳಜಿ ಹೊಂದಿಲ್ಲ. ಬದಲಾಗಿ, ಗಾಜಾ ಇನ್ನು ಮುಂದೆ ವಾಸಿಸಲು ಯೋಗ್ಯವಾಗಿಲ್ಲ ಎಂಬುದನ್ನು ಖಾತರಿಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ’ ಎಂದು ಕಿಡಿಕಾರಿದರು.



ಶೇಖ್ ತಮೀಮ್ ಬಿನ್ ಹಮದ್ ಅಲ್ ಥಾನಿ

‘ಹಮಾಸ್‌ನ ಎಲ್ಲ ನಾಯಕರನ್ನು ಹತ್ಯೆ ಮಾಡುವ ಉದ್ದೇಶ ಹೊಂದಿದ್ದರೆ, ಮಾತುಕತೆಗೆ ಏಕೆ ಮುಂದಾಯಿತು? ಒತ್ತೆಯಾಳುಗಳ ವಿಮೋಚನೆಯನ್ನು ನೀವು ಬಯಸಿದ್ದರೆ, ಎಲ್ಲಾ ಸಂಧಾನಕಾರರನ್ನು ಹತ್ಯೆ ಮಾಡಿದ್ದು ಏಕೆ?’ ಎಂದು ಭಾಷಣದಲ್ಲಿ ಪ್ರಶ್ನಿಸಿದ್ದಾರೆ.

ಸಾಮಾನ್ಯವಾಗಿ ಸಮಾಧಾನದಿಂದ ಭಾಷಣ ಮಾಡುವ ದೊರೆ ಶೇಖ್ ತಮೀಮ್ ಅವರು ಇದೇ ಮೊದಲ ಬಾರಿಗೆ ಶೃಂಗಸಭೆಯಲ್ಲಿ 45 ನಿಮಿಷಗಳ ಕಾಲ ಉಗ್ರ ಭಾಷಣ ಮಾಡಿದ್ದಾರೆ. ಇಸ್ರೇಲ್–ಪ್ಯಾಲೆಸ್ಟೀನ್ ಸಂಘರ್ಷ ಕೊನೆಗೊಳಿಸಿ, ಕದನ ವಿರಾಮ ಜಾರಿಗೆ ತರುವ ನಿಟ್ಟಿನಲ್ಲಿ ಶೇಖ್ ಅವರು ಪ್ರಮುಖ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿದ್ದಾರೆ.

ಹಮಾಸ್ ಬಂಡುಕೋರರು ನಡೆಸಿದ ದಾಳಿಗೆ ಪ್ರತಿಕ್ರಿಯೆಯಾಗಿ 2023ರ ಅಕ್ಟೋಬರ್ 7ರಿಂದಲೂ ಇಸ್ರೇಲ್ ಸೇನೆ ಗಾಜಾದ ಮೇಲೆ ವ್ಯಾಪಕ ದಾಳಿ ನಡೆಸುತ್ತಿದೆ. ನಂತರ, ಇರಾನ್‌ನ ಆಕ್ಸಿಸ್ ಆಫ್ ರೆಸಿಸ್ಟೆನ್ಸ್, ಇರಾನ್, ಲೆಬನಾನ್, ಸಿರಿಯಾ, ಯೆಮನ್ ಮೇಲೆ ದಾಳಿ ನಡೆಸಿದ್ದ ಇಸ್ರೇಲ್, ಇದೀಗ ಕತಾರ್ ಮೇಲೂ ದಾಳಿ ನಡೆಸಿದೆ.

ಗಾಜಾದಲ್ಲಿ ಇದುವರೆಗೆ 64 ಸಾವಿರ ಮಂದಿಯನ್ನು ಹತ್ಯೆ ಮಾಡಿರುವುದಕ್ಕೆ ಪಶ್ಚಿಮ ಏಷ್ಯಾ ರಾಷ್ಟ್ರಗಳು ಈಗಾಗಲೇ ಆಕ್ರೋಶ ವ್ಯಕ್ತಪಡಿಸಿವೆ. ಗಲ್ಫ್ ಅರಬ್ ರಾಷ್ಟ್ರಗಳು ರಕ್ಷಿಸುವ ಅಮೆರಿಕ ಬದ್ಧತೆ ಸಾಕಷ್ಟು ಬಲವಾಗಿಲ್ಲ ಎಂಬ ಆತಂಕವು ಹೆಚ್ಚಾಗಿದೆ. ಆದರೂ, ಸೋಮವಾರ ನಡೆದ ಶೃಂಗಸಭೆಯು ನಿರ್ದಿಷ್ಟ ಗುರಿ ಸಾಧಿಸಲು ಸಫಲವಾಗಿದೆಯೆ ಎಂಬುದು ಖಚಿತಪಟ್ಟಿಲ್ಲ.

‘ಇಸ್ರೇಲ್‌ನಿಂದ ದಾಳಿ ನಡೆದ ವಾರದೊಳಗಾಗಿ ಗಲ್ಫ್ ಹಾಗೂ ಇತರೆ ರಾಷ್ಟ್ರಗಳ ಮುಖ್ಯಸ್ಥರು ಒಂದೆಡೆ ಸೇರಿರುವುದು ಗಮನಾರ್ಹ ಸಾಧನೆಯಾಗಿದೆ. ಮಧ್ಯಪ್ರಾಚ್ಯದಲ್ಲಿ ಎದುರಾಗಿರುವ ತುರ್ತು ಪರಿಸ್ಥಿತಿಯು ಒಗ್ಗಟ್ಟಿನ ಅರ್ಥವನ್ನು ಒತ್ತಿ ಹೇಳಿದೆ’ ಎಂದು ನ್ಯೂಯಾರ್ಕ್‌ನ ಜಾಗತಿಕ ಭದ್ರತೆಗಳ ಕುರಿತ ಸಂಶೋಧನಾ ಸಂಸ್ಥೆ ‘ಸೌಫನ್ ಸೆಂಟರ್’ ತಿಳಿಸಿದೆ.



ಧನಂಜಯ

ಮಲೈಕಾಗೆ ಟಾಲಿವುಡ್ ಆಹ್ವಾನ

• ಅಭಿಲಾಷ್ ಪಿ.ಎಸ್.



ಮಲೈಕಾ

ನಟ ಚಿಕ್ಕಣ್ಣ ನಟನೆಯ 'ಉಪಾಧ್ಯಕ್ಷ' ಸಿನಿಮಾ ಮೂಲಕ ಕಿರುತೆರೆಯಿಂದ ಚಂದನವನದ ಪಯಣ ಆರಂಭಿಸಿದ್ದ ನಟಿ ಮಲೈಕಾ ಟಿ.ವಸುಪಾಲ್ ನಟನೆಯ 'ಕಲ್ಟ್' ಬಿಡುಗಡೆಗೆ ಸಜ್ಜಾಗುತ್ತಿದೆ. ಸಿನಿಮಾದ 'ಅಯ್ಯೋ ಶಿವನೇ' ಹಾಡು ಇತ್ತೀಚೆಗೆ ಬಿಡುಗಡೆಯಾಗಿದೆ. ಸಿನಿಮಾದ ನಿರ್ದೇಶಕ ಅನಿಲ್ ಕುಮಾರ್ ಅವರೇ ಬರೆದಿರುವ ಈ ಹಾಡಿನಲ್ಲಿ ಝೈದ್ ಖಾನ್ ಹಾಗೂ ಮಲೈಕಾ ಹೆಜ್ಜೆ ಹಾಕಿದ್ದಾರೆ. ಸಿನಿಮಾ ಕುರಿತು ಮಲೈಕಾ ಮಾತಿಗಿಳಿದಾಗ...

'ಕಿರುತೆರೆಯಲ್ಲಿ 'ಹಿಟ್ಲರ್ ಕಲ್ಯಾಣ' ಎಂಬ ಧಾರಾವಾಹಿ ಬಳಿಕ 'ಉಪಾಧ್ಯಕ್ಷ' ಹಾಗೂ ನಟ ನಾಗಭೂಷಣ್ ನಟನೆಯ 'ವಿದ್ಯಾಪತಿ' ಸಿನಿಮಾದಲ್ಲಿ ನಟಿಸಿದೆ. ಮೊದಲೆರಡು ಪ್ರಾಜೆಕ್ಟ್‌ಗಳ ಅನುಭವ, ಕಲಿತ ಪಾಠದಲ್ಲೇ ಸಿನಿಪಯಣ ಮುಂದುವರಿದಿದೆ. ಶಿಸ್ತಿನ ವೃತ್ತಿಜೀವನ ನನ್ನದು. ಹೀಗಾಗಿ ಕಿರುತೆರೆಯಿಂದ ಬಂದ ನನಗೆ ಸಿನಿಮಾ ಪಯಣ ಸುಲಭವಾಯ್ತು. ಮೂರು ಕನ್ನಡ ಸಿನಿಮಾಗಳ ಬಳಿಕ ತೆಲುಗಿನ ಸಿನಿಮಾಗಳ ಆಫರ್‌ಗಳೂ ಬಂದಿವೆ. ಅವುಗಳು ಮಾತುಕತೆ ಹಂತದಲ್ಲಿವೆ. ಸದ್ಯಕ್ಕೆ ಯಾವುದನ್ನೂ ಒಪ್ಪಿಕೊಂಡಿಲ್ಲ. ಕನ್ನಡದಲ್ಲೇ ಹೆಚ್ಚಿನ ಸಿನಿಮಾಗಳನ್ನು ಮಾಡುತ್ತೇನೆ' ಎಂದು ಮಾತು ಆರಂಭಿಸಿದ ಮಲೈಕಾ 'ಕಲ್ಟ್' ಸಿನಿಮಾದತ್ತ ಮಾತು ಹೊರಳಿಸಿದರು.

'ಕಲ್ಟ್' ಸಿನಿಮಾದ ಕಥೆ ಕೇಳಲು ನಿರ್ದೇಶಕರಾದ ಅನಿಲ್ ಕುಮಾರ್ ಅವರು ಕರೆದ ಸಂದರ್ಭದಲ್ಲಿ ಝೈದ್ ಖಾನ್ ಅವರ ಪಾತ್ರದ ಪೋಸ್ಟರ್ ರಿಲೀಸ್ ಆಗಿತ್ತು. ಆ ಪೋಸ್ಟರ್ ನೋಡಿ ಈ ಸಿನಿಮಾ ಮಾಡಬೇಕೇ ಬೇಡವೇ ಎಂಬ ಗೊಂದಲ ಮೂಡಿತ್ತು. ನಾನು ಈ ಸಿನಿಮಾದಲ್ಲಿ ನಟಿಸಬೇಕೇ ಎನ್ನುವ ಪ್ರಶ್ನೆಯನ್ನು ಪೋಸ್ಟರ್ ಹುಟ್ಟುಹಾಕಿತ್ತು. ನನ್ನ ಪಾತ್ರವನ್ನು ಹೇಗೆ ಬರೆದಿದ್ದಾರೆ ಎನ್ನುವ ಕುತೂಹಲವೂ ಇತ್ತು. ಸಿನಿಮಾದ ಕಥೆ ಕೇಳಿದ ಬಳಿಕ ಪಾತ್ರವನ್ನು ಮೆಚ್ಚಿಕೊಂಡೆ, ಒಪ್ಪಿಕೊಂಡೆ. ವಾವ್ ಎನ್ನುವಂತಹ ಕಥೆ ಸಿನಿಮಾದಲ್ಲಿಲ್ಲ. ಸರಳವಾದ ಕಥೆ ಇಲ್ಲಿದ್ದು ಪಾತ್ರಗಳ ಬರವಣಿಗೆ, ಅವುಗಳ ಸಂಭಾಷಣೆ ಹಾಗೂ ಜೋಡಿಸಿರುವ ರೀತಿ, ನಟನೆಯೇ ಸಿನಿಮಾಗೆ ಆಧಾರ' ಎಂದರು ಮಲೈಕಾ.

'ನನ್ನ ಹಿಂದಿನ ಸಿನಿಮಾಗಳಿಗೆ ಹೋಲಿಸಿದರೆ ಈ ಪಾತ್ರದ ಬರವಣಿಗೆ ಬಹಳ ಭಿನ್ನವಾಗಿದೆ. 'ವಿದ್ಯಾಪತಿ'ಯಲ್ಲಿ ಒಬ್ಬ ಸೂಪರ್‌ಸ್ಟಾರ್ ಆಗಿ ಕಾಣಿಸಿಕೊಂಡಿದ್ದೆ. ಇದು ಗ್ಲ್ಯಾಮರಸ್ ಪಾತ್ರವಾಗಿತ್ತು. 'ಉಪಾಧ್ಯಕ್ಷ' ಸಿನಿಮಾದಲ್ಲಿ 18 ವರ್ಷದ ಯುವತಿಯ ಪಾತ್ರ ಮಾಡಿದ್ದೆ. ಈ ಪಾತ್ರದ ನಟನೆಗೆ ಹೆಚ್ಚಿನ ಶ್ರಮ ಹಾಕಿರಲಿಲ್ಲ. ಆದರೆ 'ಕಲ್ಟ್'ನಲ್ಲಿ ನನ್ನ ನಟನೆಯ ಸಾಮರ್ಥ್ಯ ಪ್ರದರ್ಶನಕ್ಕೆ ಅವಕಾಶ ದೊರೆಯಿತು. ಎರಡು ಶೇಡ್‌ಗಳಲ್ಲಿ ನನ್ನ ಪಾತ್ರವಿದೆ. ಇದರಲ್ಲಿ ಒಂದು ಶೇಡ್ ನನ್ನ ವ್ಯಕ್ತಿತ್ವಕ್ಕೆ ತದ್ವಿರುದ್ಧವಾಗಿದೆ. ಇದನ್ನು ನಿಭಾಯಿಸುವುದು ಸವಾಲೇ ಆಗಿತ್ತು' ಎನ್ನುತ್ತಾರೆ.

'ಅಯ್ಯೋ ಶಿವನೇ' ಬಿಡುಗಡೆ ಬಳಿಕ ನನ್ನ ಹಾಗೂ ಝೈದ್ ಖಾನ್ ಜೋಡಿಯನ್ನು ಸಾಕಷ್ಟು ಜನ ಮೆಚ್ಚಿಕೊಂಡಿದ್ದಾರೆ. ಸಚಿವರ ಮಗನಾದರೂ ಝೈದ್ ಬಹಳ ಸರಳ ವ್ಯಕ್ತಿ. ನಟನೆಯಲ್ಲಿ ಪಳಗಿದ್ದಾರೆ. 'ಕಲ್ಟ್'ನಲ್ಲಿ ರಚಿತಾ ರಾಮ್ ಅವರೂ ಎರಡು ಶೇಡ್‌ಗಳಲ್ಲಿ ಕಾಣಿಸಿಕೊಂಡರೆ ಝೈದ್ ಅವರ ಪಾತ್ರಕ್ಕೆ ಮೂರು ಶೇಡ್‌ಗಳಿವೆ' ಎಂದರು ಮಲೈಕಾ.

> **ಎಸ್.ಕೆ. ಬಾಹುಬಲಿ ನಿರ್ದೇಶನದ ಕೃಷ್ಣ ಅಜಯ್ ರಾವ್ ನಟನೆಯ ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಇದರ ಜೊತೆಗೆ ಮತ್ತೊಂದು ಕನ್ನಡ ಸಿನಿಮಾದ ಮಾತುಕತೆ ನಡೆಯುತ್ತಿದೆ.**
> **ಮಲೈಕಾ ಟಿ.ವಸುಪಾಲ್**, ನಟಿ

ಜಸ್ಕರಣ್ ದನಿಯಲ್ಲಿ ಹಾಡು

'ಕಲ್ಟ್' ಸಿನಿಮಾದ ಈ ಹಾಡಿಗೆ ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿದ್ದು, 'ದ್ವಾಪರ..' ಖ್ಯಾತಿಯ ಜಸ್ಕರಣ್ ಸಿಂಗ್ ಹಾಗೂ ಪೃಥ್ವಿ ಭಟ್ ಹಾಡಿದ್ದಾರೆ. ಕೆ.ವಿ.ಎನ್ ಪ್ರೊಡಕ್ಷನ್ಸ್ ಅರ್ಪಿಸಿರುವ ಈ ಸಿನಿಮಾವನ್ನು ಲೋಕಿ ಸಿನಿಮಾಸ್ ನಿರ್ಮಿಸಿದೆ.

ಇದೇ ನೋಡಿ 'ಆಪರೇಷನ್' ಲುಕ್

'**ಟಗರು**' ಜೋಡಿಯ ಹೊಸ ಪ್ರಾಜೆಕ್ಟ್‌ನ ಶೂಟಿಂಗ್ ಬೆಂಗಳೂರಿನಲ್ಲಿ ಭರ್ಜರಿಯಾಗಿ ನಡೆಯುತ್ತಿದೆ. 'ಕವಲುದಾರಿ', 'ಸಪ್ತಸಾಗರದಾಚೆ ಎಲ್ಲೋ' ಸಿನಿಮಾ ನಿರ್ದೇಶಕ ಹೇಮಂತ್ ಎಂ.ರಾವ್ ಆ್ಯಕ್ಷನ್ ಕಟ್ ಹೇಳುತ್ತಿರುವ '666 ಆಪರೇಷನ್ ಡ್ರೀಮ್ ಥಿಯೇಟರ್'ನ ಮೇಕಿಂಗ್ ಫೋಟೊಗಳನ್ನು ಚಿತ್ರತಂಡ ಹಂಚಿಕೊಂಡಿದ್ದು, ಇದು ಸಿನಿಮಾ ಮೇಲೆ ನಿರೀಕ್ಷೆ ಹೆಚ್ಚಿಸಿದೆ.

ಸಿನಿಮಾದ ಮುಖ್ಯಭೂಮಿಕೆಯಲ್ಲಿ ನಟಿಸುತ್ತಿರುವ ನಟರಾದ ಶಿವರಾಜ್‌ಕುಮಾರ್ ಹಾಗೂ ಧನಂಜಯ ರೆಟ್ರೋ ಲುಕ್‌ನಲ್ಲಿ ಕಾಣಿಸಿಕೊಂಡಿದ್ದು, ಇದು ವರನಟ ರಾಜ್‌ಕುಮಾರ್ ಅವರ 'ಬಾಂಡ್ ಸರಣಿ'ಯ ಸಿನಿಮಾಗಳ ನೆನಪು ಮೂಡಿಸಿದೆ. ಸಿನಿಮಾದ ಮೊದಲ ಹಂತದ ಚಿತ್ರೀಕರಣ ಮುಗಿಸಿ, ಎರಡನೇ ಹಂತಕ್ಕೆ ತಂಡ ಸಜ್ಜಾಗುತ್ತಿದೆ. ಎರಡನೇ ಹಂತದ ಚಿತ್ರೀಕರಣಕ್ಕಾಗಿ ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿ ಅದ್ದೂರಿ ಸೆಟ್ ಹಾಕಲಾಗಿದೆ. ಈ ಸೆಟ್‌ನಲ್ಲಿ ಬರೋಬ್ಬರಿ 100 ದಿನ ಶೂಟಿಂಗ್ ನಡೆಸಲಾಗುವುದು ಎಂದು ಚಿತ್ರತಂಡ ತಿಳಿಸಿದೆ.

'ಈ ಸಿನಿಮಾ ಇಂದಿನ ಪೀಳಿಗೆಯನ್ನು ಬೆರಗುಗೊಳಿಸಲಿದ್ದು, ಹಿಂದಿನ ಪೀಳಿಗೆಗೆ ನೆನಪುಗಳನ್ನು ಮೆಲುಕು ಹಾಕುವಂತೆ ಮಾಡಲಿದೆ. ಹೊಸ ಜಗತ್ತನ್ನೇ ಈ ಸೆಟ್‌ನೊಳಗೆ ನಿರ್ಮಾಣ ಮಾಡಿದ್ದೇವೆ. ಸೆಟ್‌ನೊಳಗೆ ಏನಿದೆ ಎನ್ನುವುದನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ. ಇದನ್ನು ಬೃಹತ್ ಪರದೆಯ ಮೇಲೆ ನೋಡಿಯೇ ಅನುಭವಿಸಬೇಕು. ಬಿಗ್ ಬಜೆಟ್‌ನಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದೆ' ಎನ್ನುತ್ತಾರೆ ನಿರ್ಮಾಪಕ ವೈಶಾಖ್ ಜೆ. ಗೌಡ.

ಚಿತ್ರಕ್ಕೆ ಚರಣ್ ರಾಜ್ ಸಂಗೀತ ನಿರ್ದೇಶನ, ಅದ್ವೈತ ಗುರುಮೂರ್ತಿ ಛಾಯಾಚಿತ್ರಗ್ರಹಣವಿದೆ. ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶನದಲ್ಲಿ ಸೆಟ್‌ಗಳು ನಿರ್ಮಾಣವಾಗಿವೆ.



ಶಿವರಾಜ್‌ಕುಮಾರ್, ಹೇಮಂತ್ ಎಂ.ರಾವ್

KD ಅಡ್ಡದಲ್ಲಿ ಸುದೀಪ್

2025ರ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾದ ಪ್ರೇಮ್ ನಿರ್ದೇಶನದ, ಧ್ರುವ ಸರ್ಜಾ ನಟನೆಯ 'KD' ಸಿನಿಮಾದಲ್ಲಿ ನಟ ಸುದೀಪ್ ಪಾತ್ರವೊಂದನ್ನು ನಿರ್ವಹಿಸಿದ್ದಾರೆ. ಈ ಮೂಲಕ ಸಿನಿಮಾದ ಶೂಟಿಂಗ್ ಕೂಡಾ ಪೂರ್ಣಗೊಂಡಿದೆ. 'ಶೀಘ್ರದಲ್ಲೇ ಸಿನಿಮಾ ತೆರೆಗೆ ಬರಲಿದೆ' ಎಂದು ಪ್ರೇಮ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇತ್ತೀಚೆಗೆ ಹೈದರಾಬಾದ್‌ನಲ್ಲಿ ನಡೆದ ಸಿನಿಮಾದ ಶೂಟಿಂಗ್‌ನಲ್ಲಿ ಸುದೀಪ್ ಭಾಗವಹಿಸಿದ್ದಾರೆ. ಅತಿಥಿ ಪಾತ್ರದಲ್ಲಿ ಸುದೀಪ್ ಕಾಣಿಸಿಕೊಳ್ಳಲಿದ್ದು, ಅವರ ಪಾತ್ರದ ಬಗ್ಗೆ ಸದ್ಯದಲ್ಲೇ ಮಾಹಿತಿ ನೀಡಲಾಗುವುದು ಎಂದು ಚಿತ್ರತಂಡ ತಿಳಿಸಿದೆ. ಅಕ್ಟೋಬರ್ ಮಾಸಾಂತ್ಯದಲ್ಲಿ ಸಿನಿಮಾ ತೆರೆಗೆ ಬರುವ ಸಾಧ್ಯತೆ ಇದೆ. ಕಳೆದ ತಿಂಗಳಲ್ಲಿ ಹಂಗರಿ ರಾಜಧಾನಿ ಬುಡಾಪೆಸ್ಟ್‌ನಲ್ಲಿ ಚಿತ್ರದ ಹಿನ್ನೆಲೆ ಸಂಗೀತದ ಕೆಲಸವನ್ನು ಚಿತ್ರತಂಡ ಪೂರ್ಣಗೊಳಿಸಿತ್ತು.

'ಏಕ್ ಲವ್ ಯಾ' ಸಿನಿಮಾ ನಂತರ ಪ್ರೇಮ್ ನಿರ್ದೇಶನದ ಪ್ಯಾನ್ ಇಂಡಿಯಾ ಚಿತ್ರ ಇದಾಗಿದ್ದು, ರೀಷ್ಮಾ ನಾಣಯ್ಯ, ಸಂಜಯ್ ದತ್, ರವಿಚಂದ್ರನ್, ಶಿಲ್ಪಾ ಶೆಟ್ಟಿ, ರಮೇಶ್ ಅರವಿಂದ್ ಚಿತ್ರದಲ್ಲಿದ್ದಾರೆ.



ಸುದೀಪ್, ಪ್ರೇಮ್ ಹಾಗೂ ಧ್ರುವ ಸರ್ಜಾ

ಚಿಟಿಕೆ ಸುದ್ದಿ

ಬೆಟ್ಟಿಂಗ್ ಆ್ಯಪ್ ಪ್ರಕರಣ: ವಿಚಾರಣೆಗೆ ಮಿಮಿ ಹಾಜರು

ನವದೆಹಲಿ (ಪಿಟಿಐ): ತೃಣ ಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಮಾಜಿ ಸಂಸದೆ ಮಿಮಿ ಚಕ್ರವರ್ತಿ ಅವರು ಸೋಮವಾರ ಜಾರಿ ನಿರ್ದೇಶನಾಲಯದ (ಇ.ಡಿ) ಎದುರು ವಿಚಾರಣೆಗೆ ಹಾಜರಾಗಿದ್ದಾರೆ. '1xಬೆಟ್' ಎಂಬ ಬೆಟ್ಟಿಂಗ್ ಆ್ಯಪ್‌ಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣ ಇದಾಗಿದ್ದು, ಮಿಮಿ ಅವರ ಹೇಳಿಕೆಗಳನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅನ್ವಯ ದಾಖಲಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.



ಮಿಮಿ ಚಕ್ರವರ್ತಿ

ಮಿಮಿ ಅವರು ಆ್ಯಪ್ ಜತೆಗೆ ಕೆಲವು ಹಣಕಾಸು ವಹಿವಾಟುಗಳನ್ನು ನಡೆಸಿದ್ದಾರೆ ಎಂಬುದು ತಿಳಿದುಬಂದಿದೆ. ಅಕ್ರಮ ಆ್ಯಪ್ ಜತೆಗೆ ಅವರಿಗಿರುವ ನಂಟನ್ನು ತಿಳಿಯುವ ಸಲುವಾಗಿ ಇ.ಡಿ ಈ ವಿಚಾರಣೆ ನಡೆಸಿದೆ ಎನ್ನಲಾಗಿದೆ.

ಠಾಣೆಗಳ ಸಿ.ಸಿ.ಟಿ.ವಿ ಕ್ಯಾಮೆರಾಕ್ಕೆ ನಿಗಾ

ಮೇಲುಸ್ತುವಾರಿ ವಹಿಸಲು ಕೇಂದ್ರ, ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಸೂಚನೆ

ನವದೆಹಲಿ (ಪಿಟಿಐ): ದೇಶದ ಎಲ್ಲ ಪೊಲೀಸ್ ಠಾಣೆಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾಗಳ ಮೇಲುಸ್ತುವಾರಿ ಕುರಿತು ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಮಾನವನ ಹಸ್ತಕ್ಷೇಪವಿಲ್ಲದ ಏಕೀಕೃತ ನಿಯಂತ್ರಣ ಕೊಠಡಿ ಸ್ಥಾಪಿಸಿ, ಅವುಗಳ ಮೇಲ್ವಿಚಾರಣೆ ನಡೆಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದೆ.

ಠಾಣೆಗಳಲ್ಲಿ ನಿಷ್ಕ್ರಿಯ ಸಿ.ಸಿ.ಟಿವಿ ಕ್ಯಾಮೆರಾಗಳ ಕುರಿತು ಸೆ.26ರಂದು ಆದೇಶ ಪ್ರಕಟಿಸುವುದಾಗಿ ನ್ಯಾಯಮೂರ್ತಿ ವಿಕ್ರಮ್‌ನಾಥ್ ಹಾಗೂ ಸಂದೀಪ್ ಮೆಹ್ತಾ ಅವರ ನ್ಯಾಯಪೀಠವು ತಿಳಿಸಿದೆ.

'ಕ್ಯಾಮೆರಾಗಳ ಮೇಲುಸ್ತುವಾರಿಯೇ ಮುಖ್ಯ ವಿಷಯವಾಗಿದೆ' ಎಂದು ಪೀಠವು ಈ ವೇಳೆ ಅಭಿಪ್ರಾಯಪಟ್ಟಿತು.

'ಮನುಷ್ಯನ ಹಸ್ತಕ್ಷೇಪವಿಲ್ಲದ ನಿಯಂತ್ರಣ ಕೊಠಡಿ ಕುರಿತು ನಾವು ಯೋಚಿಸುತ್ತಿದ್ದೇವೆ. ಎಲ್ಲ ವಿಡಿಯೊಗಳನ್ನು ನಿಯಂತ್ರಣ ಕೊಠಡಿಗೆ ರವಾನಿಸುವಂತಿರಬೇಕು. ಒಂದೊಮ್ಮೆ ಯಾವುದೇ ಕ್ಯಾಮೆರಾ ಸ್ಥಗಿತಗೊಂಡರೆ, ತಕ್ಷಣವೇ ಎಚ್ಚರಿಸಬೇಕು. ಈ ರೀತಿ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ಉಳಿದಂತೆ ಬೇರೆ ದಾರಿಯಿಲ್ಲ' ಎಂದು ನ್ಯಾಯಮೂರ್ತಿ ಮೆಹ್ತಾ ತಿಳಿಸಿದರು.

2020ರ ಡಿಸೆಂಬರ್‌ನಲ್ಲಿ ಸುಪ್ರೀಂಕೋರ್ಟ್ ಆದೇಶ ಹೊರಡಿಸಿದ ಪ್ರತ್ಯೇಕ ವಿಷಯದಲ್ಲಿ 'ಅಮಿಕಸ್ ಕ್ಯೂರಿ' ಆಗಿ ನೇಮಕಗೊಂಡಿದ್ದ ಹಿರಿಯ ವಕೀಲ ಸಿದ್ಧಾರ್ಥ ದವೆ ಅವರ ವಾದವನ್ನು ನ್ಯಾಯಪೀಠವು ಪರಿಗಣಿಸಿತು.

ಕೇಂದ್ರೀಯ ತನಿಖಾ ಸಂಸ್ಥೆ (ಸಿಬಿಐ), ಜಾರಿ ನಿರ್ದೇಶನಾಲಯ (ಇ.ಡಿ) ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಸೇರಿದಂತೆ ಎಲ್ಲ ತನಿಖಾ ಕಚೇರಿಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಕಡ್ಡಾಯ ವಾಗಿ ಅಳವಡಿಸಬೇಕು, ರೆಕಾರ್ಡಿಂಗ್ ಉಪಕರಣಗಳನ್ನು ಅಳವಡಿಸಬೇಕು ಎಂದು ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿದ್ದ ಆದೇಶದಲ್ಲಿ ತಿಳಿಸಿತ್ತು. ನ್ಯಾಯಾಲಯದ ಸೂಚನೆ ಹೊರತಾಗಿಯೂ ಎನ್‌ಐಎ, ಇ.ಡಿ., ಸಿಬಿಐ ಸೇರಿದಂತೆ ಮೂರರಿಂದ ನಾಲ್ಕು ಸಂಸ್ಥೆಗಳು ತಮ್ಮ ನಿರ್ದೇಶನ ಪಾಲಿಸಿಲ್ಲ ಎಂದು ಸಿದ್ಧಾರ್ಥ ದವೆ ಅವರು ನ್ಯಾಯಪೀಠದ ಎದುರು ಬೇಸರ ವ್ಯಕ್ತಪಡಿಸಿದರು.

ರಾಜಸ್ಥಾನದಲ್ಲಿ ಕಳೆದ ಎಂಟು ತಿಂಗಳಲ್ಲಿ ಪೊಲೀಸ್ ಕಸ್ಟಡಿಯಲ್ಲಿ 11 ಮಂದಿ ಮೃತಪಟ್ಟಿದ್ದಾರೆ. ಇದರಲ್ಲಿ 7 ಪ್ರಕರಣಗಳು ಉದಯಪುರದಲ್ಲಿಯೇ ವರದಿಯಾಗಿದೆ ಎಂದು ಮಾಧ್ಯಮಗಳ ವರದಿ ಆಧರಿಸಿ, ಸೆ.4ರಂದು ಸುಪ್ರೀಂಕೋರ್ಟ್, ಸ್ವಯಂಪ್ರೇರಿತವಾಗಿ ವಿಚಾರಣೆ ಕೈಗೆತ್ತಿಕೊಂಡು ಈ ಸೂಚನೆ ನೀಡಿದೆ.



ಐಐಟಿಗಳ ನೆರವು ಪಡೆಯಲು ಸಲಹೆ

ಸ್ವತಂತ್ರ ಸಂಸ್ಥೆಯಿಂದ ಪ್ರತಿ ಪೊಲೀಸ್ ಠಾಣೆಯಲ್ಲೂ ತಪಾಸಣೆ ನಡೆಸುವಂತಿರಬೇಕು ಎಂದು ತಿಳಿಸಿರುವ ನ್ಯಾಯಪೀಠ, ಈ ಸಮಸ್ಯೆ ಪರಿಹಾರ ಹುಡುಕಲು ಕೆಲವು ಭಾರತೀಯ ತಂತ್ರಜ್ಞಾನ ಸಂಸ್ಥೆಗಳನ್ನು (ಐಐಟಿ) ಒಳಗೊಳ್ಳಲು ನಾವು ಯೋಚಿಸಬಹುದು ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಸಂಪೂರ್ಣವಾಗಿ ಕೃತಕ ಬುದ್ಧಿಮತ್ತೆ (ಎ.ಐ) ಆಧರಿಸಿ ನಿರ್ದಿಷ್ಟ ಪ್ರದೇಶದ ಸಿ.ಸಿ.ಟಿ.ವಿ ಕ್ಯಾಮೆರಾಗಳ ವಿಡಿಯೊಗಳ ಮೇಲುಸ್ತುವಾರಿ ವಹಿಸಬಹುದು. ಈ ಮೂಲಕ, ಮನುಷ್ಯರ ಹಸ್ತಕ್ಷೇಪವಿಲ್ಲದಂತೆ ನೋಡಿಕೊಳ್ಳಬಹುದು. ಒಂದೊಮ್ಮೆ ಕ್ಯಾಮೆರಾಗಳು ತಕ್ಷಣವೇ ಸ್ಥಗಿತಗೊಂಡರೆ, ಸಂಬಂಧಿಸಿದ ಕಾನೂನು ಸೇವಾ ಪ್ರಾಧಿಕಾರ ಅಥವಾ ಮೇಲುಸ್ತುವಾರಿ ಸಂಸ್ಥೆಗೆ ಮಾಹಿತಿ ಕಳುಹಿಸುವಂತಿರಬೇಕು' ಎಂದು ಹೇಳಿದೆ.

ತನಿಖಾ ತಂಡದ ವರದಿ ತೃಪ್ತಿ ನೀಡಿದೆ: ಸುಪ್ರೀಂ ಕೋರ್ಟ್

'ವಂತಾರ'ಕ್ಕೆ ಎಸ್‌ಐಟಿ ಕ್ಲೀನ್‌ಚಿಟ್

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ವನ್ಯಜೀವಿ ರಕ್ಷಣಾ ಮತ್ತು ಪುನರ್ವಸತಿ ಕೇಂದ್ರ 'ವಂತಾರ'ದ ವಿರುದ್ಧದ ಆರೋಪಗಳ ಬಗ್ಗೆ ತನಿಖೆ ನಡೆಸಿರುವ ಸುಪ್ರೀಂ ಕೋರ್ಟ್ ನೇಮಿಸಿದ್ದ ವಿಶೇಷ ತನಿಖಾ ತಂಡ (ಎಸ್‌ಐಟಿ) ಕ್ಲೀನ್ ಚಿಟ್ ನೀಡಿದೆ.

'ಅನಂತ್ ಅಂಬಾನಿ ಅವರು ಜಾಮ್‌ನಗರದಲ್ಲಿ ನಡೆಸುತ್ತಿರುವ 'ವಂತಾರ'ದಲ್ಲಿ ನಿಯಮಗಳನ್ನು ಪಾಲನೆ ಮಾಡಲಾಗುತ್ತಿದೆ ಎಂದು ಎಸ್‌ಐಟಿ ವರದಿ ನೀಡಿದ್ದು, ಅದನ್ನು ಸ್ವೀಕರಿಸಲಾಗಿದೆ' ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

'ವಂತಾರದ ಕಾರ್ಯಚಟುವಟಿಕೆ ಬಗ್ಗೆ ನಿವೃತ್ತ ನ್ಯಾಯಮೂರ್ತಿ ಜೆ. ಚಲಮೇಶ್ವರ್ ಅವರ ನೇತೃತ್ವದ ಎಸ್‌ಐಟಿ ನೀಡಿರುವ ವರದಿ ತೃಪ್ತಿ ನೀಡಿದೆ. ಈ ಪ್ರಕರಣವನ್ನು ಮುಕ್ತಾಯಗೊಳಿಸುತ್ತಿದ್ದೇವೆ' ಎಂದು ನ್ಯಾಯಮೂರ್ತಿಗಳಾದ ಪಂಕಜ್ ಮಿತ್ತಲ್, ಪಿ.ಬಿ.ವರಾಳೆ ಅವರ ಪೀಠ ತಿಳಿಸಿದೆ.



'ಇಂತಹ ಆರೋಪಗಳನ್ನು ಇನ್ನೂ ಮುಂದೆ ಪರಿಗಣಿಸಲಾಗುವುದಿಲ್ಲ. ತಜ್ಞರ ಸಹಕಾರದೊಂದಿಗೆ ತನಿಖಾ ತಂಡವು ಎಲ್ಲ ವಿಧದಲ್ಲಿ ಪರಿಶೀಲನೆ ನಡೆಸಿದೆ. ತನಿಖಾ ತಂಡ ನೀಡಿರುವ ವರದಿಯ ಆಧಾರದಲ್ಲಿಯೇ ನಾವು ಮುಂದಿನ ಕ್ರಮಕೈಗೊಳ್ಳುತ್ತೇವೆ. ಈ ವರದಿಯ ಶಿಫಾರಸು ಮತ್ತು ಸಲಹೆಗಳ ಆಧಾರದಲ್ಲಿ ಕ್ರಮಕೈಗೊಳ್ಳಲು ಎಲ್ಲ ಅಧಿಕಾರಿಗಳು ಸ್ವತಂತ್ರರಾಗಿರುತ್ತಾರೆ' ಎಂದು ಹೇಳಿದೆ.

ಭಾರತ ಮತ್ತು ವಿದೇಶಗಳಿಂದ ಕಾನೂನುಬಾಹಿರವಾಗಿ 'ವಂತಾರ'ವು ವನ್ಯಪ್ರಾಣಿಗಳನ್ನು ಪಡೆದುಕೊಳ್ಳುತ್ತಿದೆ ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಮಾಡಲಾಗಿರುವ ಆರೋಪಗಳು ಮತ್ತು ಈ ಬಗ್ಗೆ ಎನ್‌ಜಿಒ ಮತ್ತು ವನ್ಯಜೀವಿ ಸಂಘಟನೆಗಳು ನೀಡಿದ್ದ ದೂರುಗಳ ಆಧಾರದಲ್ಲಿ ಸಲ್ಲಿಕೆಯಾಗಿದ್ದ ಎರಡು ಅರ್ಜಿಗಳನ್ನು ಪರಿಗಣಿಸಿದ್ದ ಸುಪ್ರೀಂ ಕೋರ್ಟ್, ಈ ಕುರಿತ ತನಿಖೆಗಾಗಿ ಆಗಸ್ಟ್ 25ರಂದು ಎಸ್‌ಐಟಿ ರಚಿಸಿತ್ತು.

ನ್ಯಾ. ಚಲಮೇಶ್ವರ್ ಅವರ ನೇತೃತ್ವದ ಎಸ್‌ಐಟಿಗೆ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ರಾಘವೇಂದ್ರ ಚೌಹಾಣ್, ಮುಂಬೈನ ಮಾಜಿ ಪೊಲೀಸ್ ಆಯುಕ್ತ ಹೇಮಂತ್ ನಗ್ರಾಲೆ ಮತ್ತು ಕಂದಾಯ ಸೇವೆಗಳ ಹಿರಿಯ ಅಧಿಕಾರಿ ಅನಿಶ್ ಗುಪ್ತಾ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿತ್ತು.

ವಂತಾರದಲ್ಲಿನ ಬಂಧಿತ ಆನೆಗಳನ್ನು ಅವುಗಳ ಮಾಲೀಕರಿಗೆ ಹಿಂದಿರುಗಿಸಲು ಮೇಲ್ವಿಚಾರಣಾ ಸಮಿತಿ ರಚಿಸಬೇಕು ಎಂದು ಕೋರಿ ಸಿ.ಆರ್. ಜಯ ಸುಕಿನ್ ಸಲ್ಲಿಸಿರುವ ಅರ್ಜಿ ಅಸ್ಪಷ್ಟವಾಗಿದೆ ಎಂದು ಸುಪ್ರೀಂಕೋರ್ಟ್ ಆ.14ರಂದು ಹೇಳಿತ್ತು.

ಹೈಕೋರ್ಟ್‌ಗೆ ನ್ಯಾಯಮೂರ್ತಿಗಳ ನೇಮಕ: ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಮೂವರು ನ್ಯಾಯಾಂಗ ಅಧಿಕಾರಿಗಳನ್ನು ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿಗಳನ್ನಾಗಿ ನೇಮಿಸುವ ಪ್ರಸ್ತಾವಕ್ಕೆ ಸುಪ್ರೀಂ ಕೋರ್ಟ್ ಕೊಲಿಜಿಯಂ ಸೋಮವಾರ ಅನುಮೋದನೆ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಐವರು ನ್ಯಾಯಮೂರ್ತಿಗಳ ಕೊಲಿಜಿಯಂ ಸೋಮವಾರ ಸಭೆ ಸೇರಿ ಈ ಶಿಫಾರಸು ಮಾಡಿದೆ.

ನ್ಯಾಯಾಂಗ ಅಧಿಕಾರಿಗಳಾದ ಗೀತಾ ಭರತರಾಜ ಶೆಟ್ಟಿ ಕಡಬ, ಮುರಳೀಧರ ಪೈ ಬೊರ್ಕಟ್ಟೆ ಹಾಗೂ ತ್ಯಾಗರಾಜ ನಾರಾಯಣ ಇನವಳ್ಳಿ ಅವರ ಹೆಸರನ್ನು ಶಿಫಾರಸು ಮಾಡಲಾಗಿದೆ. ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿ ಕುರುಬರಹಳ್ಳಿ ವೆಂಕಟರಾಮರೆಡ್ಡಿ ಅರವಿಂದ್ ಅವರನ್ನು ಕಾಯಂ ನ್ಯಾಯಮೂರ್ತಿಯನ್ನಾಗಿ ನೇಮಿಸುವ ಪ್ರಸ್ತಾವಕ್ಕೂ ಕೊಲಿಜಿಯಂ ಅನುಮೋದನೆ ಕೊಟ್ಟಿದೆ.

ವಕ್ಫ್ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ ಎತ್ತಿಹಿಡಿಯಲಾಗಿದೆ: ಬಿಜೆಪಿ

'ಸುಪ್ರೀಂ' ಆದೇಶ: ನ್ಯಾಯಕ್ಕೆ ಸಂದ ಜಯ'

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಕಾಯ್ದೆ–2025ರ ಸಂಬಂಧ ಸುಪ್ರೀಂ ಕೋರ್ಟ್ ನೀಡಿರುವ ಮಧ್ಯಂತರ ಆದೇಶವನ್ನು ರಾಜಕೀಯ ಪಕ್ಷಗಳು ಸೋಮವಾರ ಸ್ವಾಗತಿಸಿವೆ.

ಮುಸ್ಲಿಮರ ಹಕ್ಕುಗಳನ್ನು 'ಉಲ್ಲಂಘಿಸುವ' ವಿವಾದಾತ್ಮಕ ಷರತ್ತುಗಳನ್ನು ತಡೆಹಿಡಿಯಲಾಗಿದೆ ಎಂದು ಪ್ರತಿಪಕ್ಷಗಳು ಹೇಳಿವೆ. 'ಸುಪ್ರೀಂ ಕೋರ್ಟ್ ಆದೇಶವು ಸಂವಿಧಾನದ ಮೌಲ್ಯಗಳಾದ ನ್ಯಾಯ, ಸಮಾನತೆ ಮತ್ತು ಭ್ರಾತೃತ್ವಕ್ಕೆ ಸಂದ ಜಯ' ಎಂದು ಕಾಂಗ್ರೆಸ್ ಬಣ್ಣಿಸಿದೆ. 'ವಕ್ಫ್ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ ಎತ್ತಿಹಿಡಿಯಲಾಗಿದೆ' ಎಂದು ಬಿಜೆಪಿ ಪ್ರತಿಪಾದಿಸಿದೆ.

ಪ್ರಮುಖ ಕೆಲವು ಮುಸ್ಲಿಂ ಸಂಘಟನೆಗಳು ಕೂಡ ಸುಪ್ರೀಂ ಕೋರ್ಟ್ ಆದೇಶವನ್ನು ಸ್ವಾಗತಿಸಿದ್ದು, ಅಂತಿಮ ತೀರ್ಪು ಪ್ರಕಟವಾದ ನಂತರ ಈ ವಿಷಯದಲ್ಲಿ 'ಸಂಪೂರ್ಣ ನ್ಯಾಯ' ಪಡೆಯುವ ಭರವಸೆ ವ್ಯಕ್ತಪಡಿಸಿವೆ.

'ಇದು ಸ್ವಾಗತಾರ್ಹ ಆದೇಶ. ವಕ್ಫ್ ಕಾಯ್ದೆಗೆ ಸರ್ಕಾರ ತಂದಿರುವ ತಿದ್ದುಪಡಿಗಳನ್ನು ಸುಪ್ರೀಂ ಕೋರ್ಟ್ ಪೀಠ ಅಂಗೀಕರಿಸಿದ್ದು, ಅದರ ವಿರುದ್ಧದ ಅರ್ಜಿಗಳನ್ನು ತಿರಸ್ಕರಿಸಿದೆ. ಇಡೀ ಕಾಯ್ದೆಗೆ ತಡೆಯಾಜ್ಞೆ ನೀಡಿಲ್ಲ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ನಳಿನ್ ಕೊಹ್ಲಿ ಪ್ರತಿಕ್ರಿಯಿಸಿದ್ದಾರೆ.

'ವಕ್ಫ್ ಕಾಯ್ದೆ ಅಸಾಂವಿಧಾನಿಕ ಮತ್ತು ನಿರ್ದಿಷ್ಟ ಸಮುದಾಯವೊಂದನ್ನು 'ಗುರಿ' ಮಾಡಲು ರೂಪಿಸಲಾಗಿದೆ ಎಂಬ ಪಕ್ಷದ ನಿಲುವನ್ನು ಸುಪ್ರೀಂ ಕೋರ್ಟ್‌ನ ಮಧ್ಯಂತರ ಆದೇಶವು ಸಮರ್ಥಿಸುತ್ತದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೇಳಿದ್ದಾರೆ.

ಅತೃಪ್ತಿಕರ: ಎಐಎಂಪಿಎಲ್‌ಬಿ

ಸುಪ್ರೀಂ ಕೋರ್ಟ್‌ನ ಮಧ್ಯಂತರ ಆದೇಶದ ಬಗ್ಗೆ ನಿರಾಶೆ ವ್ಯಕ್ತಪಡಿಸಿರುವ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು 'ಅತೃಪ್ತಿಕರ' ಎಂದು ಪ್ರತಿಕ್ರಿಯಿಸಿದೆ. ಇಡೀ ಕಾಯ್ದೆಗೆ ತಡೆಯಾಜ್ಞೆ ನೀಡಲು ನಿರಾಕರಿಸಿರುವುದರಿಂದ 'ಬಳಕೆಯ ಕಾರಣದಿಂದಾಗಿ ವಕ್ಫ್' ಸೇರಿದಂತೆ ಹಲವು ವಿವಾದಿತ ಅಂಶಗಳು ಕಾರ್ಯರೂಪಕ್ಕೆ ಬರಲು ಹಾದಿಯೊದಗಿಸಿದೆ ಎಂದು ಹೇಳಿದೆ. ವಕ್ಫ್ ತಿದ್ದುಪಡಿ ಕಾಯ್ದೆಗೆ ಸಂಪೂರ್ಣ ತಡೆಯಾಜ್ಞೆ ನೀಡಬೇಕು ಎಂದು ಮಂಡಳಿಯ ವಕ್ತಾರ ಎಸ್.ಕ್ಯು.ಆರ್ ಇಲ್ಯಾಸ್ ಒತ್ತಾಯಿಸಿದ್ದಾರೆ.

> **ಕಾಯ್ದೆಯು ಮುಸ್ಲಿಮರನ್ನು ಗುರಿಯಾಗಿಸಿಕೊಂಡಿದೆ ಎಂದು ನಾವು ಹೇಳುತ್ತಾ ಬಂದಿದ್ದೇವೆ. ಸುಪ್ರೀಂ ಕೋರ್ಟ್ ಅದನ್ನು ಅರ್ಥಮಾಡಿಕೊಂಡಿರುವುದು ಸಮಾಧಾನಕರ**
> **ಒಮರ್ ಅಬ್ದುಲ್ಲಾ,** ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ

> **ಮಧ್ಯಂತರ ಆದೇಶವು ಮೋದಿ ಸರ್ಕಾರ ಮಾಡಿದ ಕಾಯ್ದೆಯಿಂದ ವಕ್ಫ್ ಆಸ್ತಿಯನ್ನು ರಕ್ಷಿಸುವುದಿಲ್ಲ. ಸುಪ್ರೀಂ ಕೋರ್ಟ್ ಶೀಘ್ರ ಅಂತಿಮ ತೀರ್ಪು ಪ್ರಕಟಿಸಲಿದೆ ಎಂದು ಭಾವಿಸುತ್ತೇವೆ**
> **ಅಸಾದುದ್ದೀನ್ ಓವೈಸಿ,** ಎಐಎಂಐಎಂ ಅಧ್ಯಕ್ಷ

ಶಿಕ್ಷಕರ ಕೊರತೆ: 65 ಕಿ.ಮೀ ಪಾದಯಾತ್ರೆ

ಇಟಾನಗರ, ಅರುಣಾಚಲ ಪ್ರದೇಶ (ಪಿಟಿಐ): ಇಲ್ಲಿನ ಪಕ್ಕೆ ಕೆಸ್ಸಾಂಗ್ ಜಿಲ್ಲೆಯ ನಂಗ್‌ನ್ಯೊ ಕಸ್ತೂರ್ಬಾ ಗಾಂಧಿ ಬಾಲಿಕಾ ವಿದ್ಯಾಲಯದಲ್ಲಿ (ಕೆಜಿಬಿವಿ) ಶಿಕ್ಷಕರ ಕೊರತೆ ಇರುವುದನ್ನು ಸರ್ಕಾರದ ಗಮನಕ್ಕೆ ತರುವ ನಿಟ್ಟಿನಲ್ಲಿ 90 ವಿದ್ಯಾರ್ಥಿನಿಯರು 65 ಕಿ.ಮೀ ಪಾದಯಾತ್ರೆ ನಡೆಸಿದರು.

'ಶಾಲಾ ಸಮವಸ್ತ್ರ ಧರಿಸಿಕೊಂಡೇ, ತಮ್ಮ ಗ್ರಾಮದಿಂದ ಭಾನುವಾರ ಹೊರಟ ವಿದ್ಯಾರ್ಥಿಗಳು ಇಡೀ ರಾತ್ರಿ ಕಾಲ್ನಡಿಗೆಯ ಮೂಲಕ ಜಿಲ್ಲಾ ಕೇಂದ್ರಕ್ಕೆ ಸೋಮವಾರ ಬೆಳಿಗ್ಗೆ ತಲುಪಿದರು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತರಗತಿಗಳು ಆರಂಭಗೊಂಡು ಅರ್ಧ ವರ್ಷ ಕಳೆದಿವೆ. ಆದರೂ ರಾಜಕೀಯ ಶಾಸ್ತ್ರ, ಭೂಗೋಳ ವಿಜ್ಞಾನಕ್ಕೆ ಅಧ್ಯಾಪಕರು ಇಲ್ಲ. ಈ ಬಗ್ಗೆ ಮನವಿ ಮಾಡಿದರೂ ಪ್ರಯೋಜನವಾಗಿರಲಿಲ್ಲ. ಹೀಗಾಗಿ ಪಾದಯಾತ್ರೆ ನಡೆಸುವಂತಾಯಿತು ಎಂದು ವಿದ್ಯಾರ್ಥಿನಿಯರು ಹೇಳಿದರು.

ಇನ್ಮುಂದೆ ಎನ್‌ಡಿಎ ತೊರೆಯಲ್ಲ: ನಿತೀಶ್

ಪ್ರಜಾವಾಣಿ ವಾರ್ತೆ/ ಪಿಟಿಐ

ಪೂರ್ಣಿಯಾ (ಪಿಟಿಐ): 'ಇನ್ಮುಂದೆ ಎನ್‌ಡಿಎ ತೊರೆಯಲ್ಲ' ಎಂದು ಬಿಹಾರ ಸಿ.ಎಂ ನಿತೀಶ್ ಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೋಮವಾರ ಇಲ್ಲಿ ಭರವಸೆ ನೀಡಿದರು.

ಬಿಹಾರ ವಿಧಾನಸಭೆಗೆ ಚುನಾವಣೆ ಘೋಷಣೆಯಾಗುವ ಒಂದೆರಡು ವಾರಗಳಿಗೂ ಮುನ್ನ ಕೇಂದ್ರ ಸರ್ಕಾರದ ₹36 ಸಾವಿರ ಕೋಟಿ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡುವ ಸಮಾರಂಭದಲ್ಲಿ ಮಾತನಾಡಿದರು.

'ಈ ಹಿಂದೆ ಒಂದೆರಡು ಬಾರಿ ಮೈತ್ರಿಯನ್ನು ಬದಲಿಸಿ ತಪ್ಪು ಮಾಡಿರುವೆ. ಇನ್ಮುಂದೆ ಎಲ್ಲಿಗೂ ಹೋಗಲ್ಲ' ಎಂದು ಮೋದಿ ಅವರತ್ತ ಕೈಮುಗಿದು ಹೇಳಿದರು.



ಬಿಹಾರದ ಪೂರ್ಣಿಯಾದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ನಿತೀಶ್ ಕುಮಾರ್ ಭಾಗಿಯಾಗಿದ್ದರು –ಪಿಟಿಐ ಚಿತ್ರ

'ವಿಪಕ್ಷಗಳಿಂದ ಜನಸಂಖ್ಯಾ ಬಿಕ್ಕಟ್ಟು: 'ಬಿಹಾರ, ಅಸ್ಸಾಂ, ಪಶ್ಚಿಮ ಬಂಗಾಳದಲ್ಲಿ ವಿರೋಧ ಪಕ್ಷಗಳು ಜನಸಂಖ್ಯಾ ಸ್ವರೂಪ ವನ್ನು ಬದಲಾಯಿಸಲು ಪ್ರಯತ್ನಿಸುತ್ತಿವೆ. ವಿಪಕ್ಷಗಳು ಅಕ್ರಮ ವಲಸಿಗರನ್ನು ರಕ್ಷಿಸುತ್ತಿರುವುದರಿಂದ ದೇಶದ ಪೂರ್ವ ರಾಜ್ಯಗಳ ಜನರು ತಮ್ಮ ಸಹೋದರಿಯರು ಮತ್ತು ಹೆಣ್ಣುಮಕ್ಕಳ ಗೌರವದ ಬಗ್ಗೆ ಆತಂಕಗೊಂಡಿದ್ದಾರೆ' ಎಂದು ಪ್ರಧಾನಿ ಮೋದಿ ದೂರಿದರು.

'ಅಕ್ರಮವಿದ್ದರೆ ಎಸ್‌ಐಆರ್ ರದ್ದು'

ಒಂದನೇ ಪುಟದಿಂದ...

ಚುನಾವಣಾ ಆಯೋಗವು ಸಾಂವಿಧಾನಿಕ ಪ್ರಾಧಿಕಾರವಾಗಿದ್ದು, ಬಿಹಾರದಲ್ಲಿ ಎಸ್‌ಐಆರ್ ಸಮಯದಲ್ಲಿ ಕಾನೂನನ್ನು ಅನುಸರಿಸುತ್ತಿದೆ ಎಂದು ಭಾವಿಸುವುದಾಗಿ ಪೀಠ ಹೇಳಿತು.

'ಬಿಹಾರದ ಎಸ್‌ಐಆರ್ ಕುರಿತ ನಮ್ಮ ತೀರ್ಪು ಇಡೀ ದೇಶಕ್ಕೆ ಅನ್ವಯಿಸುತ್ತದೆ. ದೇಶದಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸುವುದರಿಂದ ಚುನಾವಣಾ ಆಯೋಗವನ್ನು ತಡೆಯಲು ಸಾಧ್ಯವಿಲ್ಲ' ಎಂದು ಸ್ಪಷ್ಟಪಡಿಸಿತು.

ಅಕ್ಟೋಬರ್ 7ರ ವಿಚಾರಣೆಯ ಸಂದರ್ಭದಲ್ಲಿ ನಿರ್ದಿಷ್ಟವಾಗಿ ಬಿಹಾರದ ಎಸ್‌ಐಆರ್ ಹಾಗೂ ದೇಶದಾದ್ಯಂತದ ಎಸ್‌ಐಆರ್ ಕುರಿತು ವಾದಿಸಲು ಅರ್ಜಿದಾರರಿಗೆ ಪೀಠ ಅನುಮತಿ ನೀಡಿತು.

ಬಿಹಾರದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆಯಲ್ಲಿ ಆಧಾರ್ ಕಾರ್ಡ್ ಅನ್ನು 12ನೇ ದಾಖಲೆಯಾಗಿ ಸೇರಿಸಲು ಮತ್ತು ಆಧಾರ್ ಅನ್ನು ಗುರುತಿನ ಪುರಾವೆಯಾಗಿ ಮಾತ್ರ ಬಳಸಬಹುದು ಎಂದು ಸೆಪ್ಟೆಂಬರ್ 8 ರಂದು ಹೊರಡಿಸಿದ ಆದೇಶವನ್ನು ಮಾರ್ಪಡಿಸಲು ನ್ಯಾಯಪೀಠ ನಿರಾಕರಿಸಿತು. ಜತೆಗೆ, ಈ ಆದೇಶ ಹಿಂಪಡೆಯಬೇಕು ಎಂದು ಕೋರಿ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಸಲ್ಲಿಸಿರುವ ಅರ್ಜಿಯ ಸಂಬಂಧ ನೋಟಿಸ್ ಜಾರಿ ಮಾಡಿತು.

'ನಮ್ಮ ನಿರ್ದೇಶನವು ಕೇವಲ ಮಧ್ಯಂತರ ಸ್ವರೂಪದ್ದಾಗಿದೆ. ಪುರಾವೆಯಾಗಿ ದಾಖಲೆಯ ಸಿಂಧುತ್ವದ ವಿಷಯವನ್ನು ಎಸ್‌ಐಆರ್‌ಗೆ ಸಂಬಂಧಿಸಿದ ವಿಷಯದಲ್ಲಿ ಇನ್ನಷ್ಟೇ ನಿರ್ಧರಿಸಬೇಕಾಗಿದೆ' ಎಂದು ಸ್ಪಷ್ಟಪಡಿಸಿತು.

ಕಾವೇರಿದ ಹಸ್ತಲಾಘವದ ಚರ್ಚೆ

ಟಾಸ್ ವೇಳೆ ಹಸ್ತಲಾಘವ ಮಾಡದ ಸೂರ್ಯಕುಮಾರ್
• ಪಂದ್ಯದ ಬಳಿಕ ಪಾಕ್ ಆಟಗಾರರ ಕೈಕುಲುಕದ ಭಾರತ ತಂಡ

• ಆರ್. ಕೌಶಿಕ್

ದುಬೈ: ಭಾನುವಾರ ರಾತ್ರಿ ನಡೆದ ಏಷ್ಯಾಕಪ್ ಕ್ರಿಕೆಟ್ ಪಂದ್ಯದಲ್ಲಿ ಭಾರತವು ಪಾಕಿಸ್ತಾನ ತಂಡದ ವಿರುದ್ಧ ಪೂರ್ಣ ಪಾರಮ್ಯ ಮೆರೆಯಿತು. ಆದರೆ ಇದಕ್ಕಿಂತಲೂ ಹೆಚ್ಚಾಗಿ ವ್ಯಾಪಕ ಚರ್ಚೆಗೆ ಗ್ರಾಸವಾದ ಕೆಲವು ಅಂಶಗಳು ಇವೆ. ಅದರಲ್ಲಿ ಪಂದ್ಯಕ್ಕೂ ಮುನ್ನ ಮತ್ತು ನಂತರ ಉಭಯ ನಾಯಕರು ಕೈಕುಲುಕದಿರುವುದು ಮುಖ್ಯವಾಗಿದೆ.

ಟಾಸ್ ಹಾಕುವ ಸಂದರ್ಭದಲ್ಲಿ ಉಭಯ ತಂಡದ ನಾಯಕರು ಪರಸ್ಪರ ಕೈಕುಲುಕಿ ತಮ್ಮ ತಂಡಗಳ ಪಟ್ಟಿಯನ್ನು ವಿನಿಮಯ ಮಾಡಿಕೊಳ್ಳುವುದು ಸಂಪ್ರದಾಯ. ಪಂದ್ಯ ಮುಗಿದ ನಂತರ ಉಭಯ ತಂಡಗಳ ಆಟಗಾರರು ಸಾಲಾಗಿ ಹೋಗಿ ಕೈಕುಲುಕಿ ಹಾರೈಸುವುದು ವಾಡಿಕೆ. ಪಂದ್ಯದ ಫಲಿತಾಂಶಗಳು ಏನೇ ಆಗಿರಲಿ, ಈ ಪದ್ಧತಿಗಳು ಗೌರವದ ಸಂಕೇತಗಳೂ ಹೌದು. ಕ್ರಿಕೆಟ್‌ನಲ್ಲಿರುವ ಹಲವಾರು ಅಲಿಖಿತ ನಿಯಮಗಳಲ್ಲಿ ಇವು ಕೂಡ ರೂಢಿಗತವಾಗಿವೆ.

ಕಾಲದಿಂದ ಕಾಲಕ್ಕೆ ಇಂತಹ ಘಟನೆಗಳು ಬೇರೆ ಕ್ರೀಡೆಗಳಲ್ಲಿಯೂ ಕಂಡು ಬಂದಿವೆ. ಉಕ್ರೇನ್‌ನ ಎಲಿನಾ ಸ್ವಿಟೊಲಿನಾ ಅವರು ರಷ್ಯಾ ದೇಶವು (2022) ತಮ್ಮ ರಾಷ್ಟ್ರದ ಮೇಲೆ ಯುದ್ಧ ಸಾರಿದ್ದನ್ನು ವಿರೋಧಿಸಿದ್ದರು. ಪ್ರತಿಷ್ಠಿತ ಟೂರ್ನಿಗಳಲ್ಲಿ ಅವರು ರಷ್ಯಾ ಮತ್ತು ಅದರ ಮಿತ್ರರಾಷ್ಟ್ರ ಬೆಲಾರೂಸ್‌ನ ಆಟಗಾರ್ತಿಯರೊಂದಿಗೆ ಹಸ್ತಲಾಘವ ಮಾಡಿರಲಿಲ್ಲ.

2008ರ ಜೂನ್‌ನಲ್ಲಿ ಓವಲ್ ಮೈದಾನದಲ್ಲಿ ನಡೆದಿದ್ದ ಏಕದಿನ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವು ಎದುರಾಳಿ ಇಂಗ್ಲೆಂಡ್ ತಂಡಕ್ಕೆ ಶುಭಹಾರೈಸಲು ತಮ್ಮ ಡ್ರೆಸಿಂಗ್ ರೂಮ್‌ನಿಂದ ಹೊರಬರಲು ನಿರಾಕರಿಸಿತ್ತು. ಅದಕ್ಕೆಕಾರಣವೆಂದರೆ ಆ ಪಂದ್ಯದಲ್ಲಿ ಕಿವೀಸ್ ಬ್ಯಾಟರ್ ಗ್ರ್ಯಾಂಟ್ ಎಲಿಯಟ್ ಅವರು ಒಂದು ರನ್‌ಗಾಗಿ ಓಡುವ ಸಂದರ್ಭದಲ್ಲಿ ಇಂಗ್ಲೆಂಡ್ ಬೌಲರ್ ರಿಯಾನ್ ಸೈಡ್‌ಬಾಟಂ ಅವರು ಅಡ್ಡಬಂದು ಡಿಕ್ಕಿ ಹೊಡೆದಿದ್ದರು. ಬಾಟಂ ಮತ್ತು ಗ್ರ್ಯಾಂಟ್ ಇಬ್ಬರೂ ಬಿದ್ದರು. ಆದರೆ ಇಂಗ್ಲೆಂಡ್ ಫೀಲ್ಡರ್‌ಗಳು ಗ್ರ್ಯಾಂಟ್ ಎದ್ದು ಕ್ರೀಸ್ ಮುಟ್ಟುವ ಮುನ್ನ ರನ್‌ಔಟ್ ಮಾಡಿದರು. ಇದು ಕ್ರೀಡಾಸ್ಫೂರ್ತಿಯಲ್ಲ ಎಂಬನಿಲುವನ್ನುಕಿವೀಸ್‌ವ್ಯಕ್ತಪಡಿಸಿತ್ತು.

2023ರ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ತಮ್ಮ ನಾಯಕ ಏಂಜೆಲೊ ಮ್ಯಾಥ್ಯೂಸ್ ಅವರು ಕ್ರೀಸ್‌ಗೆ ಬರುವುದು ತಡವಾಗಿದ್ದಕ್ಕೆ 'ಟೈಮ್ ಔಟ್' ಮಾಡಿಸಿದ್ದ ಬಾಂಗ್ಲಾದೇಶದ ವಿರುದ್ಧ ಶ್ರೀಲಂಕಾ ಕೂಡ ಅಸಮಾಧಾನ ವ್ಯಕ್ತಪಡಿಸಿತ್ತು.

ಕ್ರಿಕೆಟ್ ಅಂಗಳದ ಈ ಎರಡೂ ಉದಾಹರಣೆಗಳು ಆಟದೊಳಗಿನ ಸಂಗತಿಗಳಷ್ಟೇ. ಆದರೆ ಭಾರತದ ಆಟಗಾರರು ಪಾಕ್ ತಂಡದವರ ಕೈಕುಲುಕದಿರುವುದು ಕ್ರಿಕೆಟ್ ಸಂಬಂಧಿತ ವಿಷಯವಲ್ಲ. ಅದು ಈ ವರ್ಷದ ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ನಡೆದಿದ್ದ ಭಯೋತ್ಪಾದಕರ ದಾಳಿಯನ್ನು ಖಂಡಿಸಿದ ನಡೆಯಾಗಿತ್ತು.

ಟೂರ್ನಿಗೂ ಮುನ್ನ ನಡೆದಿದ್ದ ಎಲ್ಲ ತಂಡಗಳ ನಾಯಕರ ಜಂಟಿ ಪತ್ರಿಕಾ ಗೋಷ್ಠಿಯಲ್ಲಿ ಸೂರ್ಯಕುಮಾರ್ ಅವರು ಏಷ್ಯನ್ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಮುಖ್ಯಸ್ಥರೂ ಆಗಿರುವ ಪಾಕಿಸ್ತಾನ ಕ್ರಿಕೆಟ್ ಮಂಡಳಿಯ ಅಧ್ಯಕ್ಷ ಮೊಹಸಿನ್ ನಕ್ವಿ ಹಾಗೂ ಪಾಕ್ ತಂಡದ ನಾಯಕ ಸಲ್ಮಾನ್ ಆಘಾ ಅವರ ಕೈಕುಲುಕಿದ್ದರು. ಅದಕ್ಕೂ ಹಲವು ಟೀಕೆಗಳು ವ್ಯಕ್ತವಾಗಿದ್ದವು. ಪಾಕ್ ವಿರುದ್ಧದ ಪಂದ್ಯವನ್ನು ಬಹಿಷ್ಕರಿಸುವ ಒತ್ತಾಯಗಳು ಭಾರತದಲ್ಲಿ ವ್ಯಾಪಕವಾಗಿ ಕೇಳಿಬಂದಿದ್ದವು.

ಆದರೆ, ಭಾರತ ಮತ್ತು ಪಾಕ್ ದ್ವಿಪಕ್ಷೀಯ ಸರಣಿಗಳಿಗೆ ಅವಕಾಶವಿಲ್ಲ. ಆದರೆ ಬಹುರಾಷ್ಟ್ರಗಳು ಭಾಗವಹಿಸುವ ಟೂರ್ನಿಯಲ್ಲಿ ಆಡುವುದನ್ನು ತಡೆಯಲಾಗುವುದಿಲ್ಲ ಎಂದು ಕೇಂದ್ರ ಕ್ರೀಡಾ ಸಚಿವಾಲಯವು ಸ್ಪಷ್ಟಪಡಿಸಿತ್ತು.



ಟಾಸ್ ಬಳಿಕ ಪೆವಿಲಿಯನ್‌ನತ್ತ ತೆರಳುತ್ತಿರುವ ಪಾಕ್ ನಾಯಕ ಸಲ್ಮಾನ್ ಆಘಾ ಮತ್ತು ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಎಪಿ ಚಿತ್ರ

ರೆಫ್ರಿ ಪೈಕ್ರಾಫ್ಟ್ ಕೈಬಿಡಿ: ಪಿಸಿಬಿ ಆಗ್ರಹ

ದುಬೈ (ಪಿಟಿಐ): ಮ್ಯಾಚ್ ರೆಫ್ರಿ ಆ್ಯಂಡಿ ಪೈಕ್ರಾಫ್ಟ್ ಅವರನ್ನು ಹಾಲಿ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಿಂದ ತಕ್ಷಣ ತೆಗೆದುಹಾಕಬೇಕು ಎಂದು ಪಾಕಿಸ್ತಾನ ಕ್ರಿಕೆಟ್ ನಿಯಂತ್ರಣ ಮಂಡಳಿ ಸೋಮವಾರ ಆಗ್ರಹಿಸಿದೆ.

ಭಾರತ ತಂಡದ ವಿರುದ್ಧ ಭಾನುವಾರ ನಡೆದ ಪಂದ್ಯದ ವೇಳೆ ಅವರ ವರ್ತನೆ ಐಸಿಸಿ ನೀತಿಸಂಹಿತೆಯ ಉಲ್ಲಂಘನೆಯಾಗಿದೆ ಎಂದು ಪಿಬಿಸಿ ಹೇಳಿದೆ. ಭಾರತದ ಆಟಗಾರರು ಪಂದ್ಯದ ನಂತರ ಪಾಕಿಸ್ತಾನ ಆಟಗಾರರ ಜೊತೆ ಹಸ್ತಲಾಘವ ಮಾಡದೇ ಸೀದಾ ಪೆವಿಲಿಯನ್‌ಗೆ ತೆರಳಿದ್ದರು.

69 ವರ್ಷದ ಪೈಕ್ರಾಫ್ಟ್ ಅವರು ಜಿಂಬಾಬ್ವೆಯ ಮಾಜಿ ಬ್ಯಾಟರ್. 'ಕ್ರಿಕೆಟ್ ಸ್ಫೂರ್ತಿಗೆ ಸಂಬಂಧಿಸಿ ಐಸಿಸಿ ಮತ್ತು ಎಂಸಿಸಿ ನಿಯಮಗಳನ್ನು ಪೈಕ್ರಾಫ್ಟ್ ಉಲ್ಲಂಘನೆ ಮಾಡಿದ್ದಾರೆ. ಅವರನ್ನು ಏಷ್ಯಾಕಪ್‌ನಿಂದ ತಕ್ಷಣ ವಜಾಗೊಳಿಸಬೇಕು' ಎಂದು ಪಿಸಿಬಿ ಮುಖ್ಯಸ್ಥ ಮೊಹ್ಸಿನ್ ನಕ್ವಿ 'ಎಕ್ಸ್'ನಲ್ಲಿ ತಿಳಿಸಿದ್ದಾರೆ. ನಕ್ವಿ ಅವರು ಹಾಲಿ ಎಸಿಸಿ ಅಧ್ಯಕ್ಷ ಸಹ.

'ಹಸ್ತಲಾಘವ ನೀಡದ ಭಾರತದ ಆಟಗಾರರ ವರ್ತನೆಗೆ ಪಾಕ್ ತಂಡದ ಮ್ಯಾನೇಜರ್ ನವೀದ್ ಚೀಮಾ ಪ್ರಬಲ ಪ್ರತಿಭಟನೆ ದಾಖಲಿಸಿದ್ದಾರೆ. ಈ ನಡತೆ ಕ್ರೀಡಾ ಮನೋಭಾವಕ್ಕೆ ವಿರುದ್ಧವಾಗಿದೆ' ಎಂದು ಪಿಸಿಬಿ ಹೇಳಿಕೆ ತಿಳಿಸಿದೆ.

ಪಂದ್ಯಕ್ಕೆ ಮೊದಲು ಟಾಸ್ ವೇಳೆಯೂ ಭಾರತ ತಂಡದ ನಾಯಕ ಸೂರ್ಯಕುಮಾರ್ ಮತ್ತು ಪಾಕ್ ನಾಯಕ ಸಲ್ಮಾನ್ ಅಲಿ ಆಘಾ ಸಾಂಪ್ರದಾಯಿಕ ಹಸ್ತಲಾಘವ ಮಾಡಿರಲಿಲ್ಲ. ಪರಸ್ಪರರ ಮುಖ ನೋಡಿರಲಿಲ್ಲ. ಇದು ಕ್ರಿಕೆಟ್ ವಲಯದಲ್ಲಿ ಚರ್ಚೆಯಾಯಿತು.

ಈ ನಿರ್ಧಾರ ಸಮರ್ಥಿಸಿದ್ದ ಸೂರ್ಯ ಅವರು, 'ಇದು ಪಹಲ್ಗಾಮ್ ಉಗ್ರರ ದಾಳಿಗೆ ಬಲಿಯಾದವರ ಕುಟುಂಬಗಳ ಜೊತೆ ನಾವಿದ್ದೇವೆ ಎಂಬುದನ್ನು ಸೂಚಿಸುವ ಕ್ರಮವಾಗಿತ್ತು' ಎಂದು ಹೇಳಿದ್ದರು. ಆ ಭೀಕರ ದಾಳಿಯಲ್ಲಿ 26 ಮಂದಿ ಪ್ರವಾಸಿಗರು ಮೃತಪಟ್ಟಿದ್ದರು. ಪಂದ್ಯದ ನಂತರ ನಡೆದ ಸಮಾರಂಭವನ್ನು ಪಾಕಿಸ್ತಾನ ತಂಡದ ನಾಯಕ ಸಲ್ಮಾನ್ ಆಘಾ ಬಹಿಷ್ಕರಿಸಿದ್ದರು.

ಏಷ್ಯಾ ಕಪ್ ಕ್ರಿಕೆಟ್ : ವಾಸೀಮ್, ಶರಾಫು ಅರ್ಧಶತಕ

ಯುಎಇಗೆ ಸುಲಭ ಜಯ

ಅಬುಧಾಬಿ (ಎಎಫ್‌ಪಿ): ನಾಯಕ ಮುಹಮ್ಮದ್ ವಾಸೀಮ್ ಮತ್ತು ಅಲಿಶಾನ್ ಶರಾಫು ಅವರ ಆಕ್ರಮಣಕಾರಿ ಅರ್ಧ ಶತಕಗಳ ನೆರವಿನಿಂದ ಯುಎಇ ತಂಡ ಸೋಮವಾರ ಏಷ್ಯಾ ಕಪ್ 'ಎ' ಗುಂಪಿನ ಪಂದ್ಯದಲ್ಲಿ ಒಮಾನ್ ತಂಡವನ್ನು 42 ರನ್‌ಗಳಿಂದ ಸುಲಭವಾಗಿ ಮಣಿಸಿತು.

ಅದರೊಂದಿಗೆ, ಕಪ್ ಗೆಲ್ಲುವ ನೆಚ್ಚಿನ ತಂಡವಾಗಿರುವ ಭಾರತ 'ಎ' ಗುಂಪಿನಿಂದ ಸೂಪರ್ ಫೋರ್ ಹಂತಕ್ಕೆ ಪ್ರವೇಶ ಖಚಿತಪಡಿಸಿ ಕೊಂಡಿದೆ. ಭಾರತ ತಂಡವು ಎರಡು ಪಂದ್ಯಗಳಲ್ಲಿ ಗೆದ್ದಿದ್ದು ಗುಂಪಿನಲ್ಲಿ ಅಗ್ರಸ್ಥಾನ ದಲ್ಲಿದೆ. ಪಾಕಿಸ್ತಾನ ಹಾಗೂ ಯುಎಇ ನಡುವೆ ಬುಧವಾರ ನಡೆಯಲಿರುವ ಪಂದ್ಯವು ಎ ಗುಂಪಿನಿಂದ ಸೂಪರ್ ಫೋರ್‌ಗೆ ಪ್ರವೇಶ ಪಡೆಯಲಿರುವ ಮತ್ತೊಂದು ತಂಡ ನಿರ್ಧರಿಸಲಿದೆ.

ಏಷ್ಯಾ ಕಪ್ 2025

ಬ್ಯಾಟಿಂಗಿಗೆ ಇಳಿಸಲ್ಪಟ್ಟ ಮೇಲೆ ಶರಾಫು 51 ರನ್ (38ಎ, 4x7, 6x1) ಮತ್ತು ವಾಸೀಮ್ 69 ರನ್ (54ಎ, 4x6, 6x3) ಬಾರಿಸಿದರು. ಇವರಿಬ್ಬರು ಮೊದಲ ವಿಕೆಟ್‌ಗೆ 11 ಓವರುಗಳಲ್ಲಿ 88 ರನ್ ಪೇರಿಸಿ ಉತ್ತಮ ಆರಂಭ ನೀಡಿದರು. ತಂಡ 5 ವಿಕೆಟ್‌ಗೆ 172 ರನ್‌ಗಳ ಉತ್ತಮ ಮೊತ್ತ ಗಳಿಸಿತು.

ತವರಿನ ನೆಲದಲ್ಲಿ ಯುಎಇ ಬೌಲರ್‌ಗಳು ಒಮಾನ್ ತಂಡವನ್ನು 18.4 ಓವರುಗಳಲ್ಲಿ 130 ರನ್ನಿಗೆ ಉರುಳಿಸಿದರು. ಇದು ಟೂರ್ನಿಯಲ್ಲಿ ಯುಎಇಗೆ ಮೊದಲ ಜಯ. ಒಮಾನ್‌ಗೆ ಎರಡನೇ ಸೋಲು. ವೇಗದ ಬೌಲರ್ ಜುನೇದ್ ಸಿದ್ದಿಕಿ (23ಕ್ಕೆ 4) ಪರಿಣಾಮಕಾರಿಯಾದರು.

ಸಂಕ್ಷಿಪ್ತ ಸ್ಕೋರು: ಯುಇಎ: 20 ಓವರುಗಳಲ್ಲಿ 5ಕ್ಕೆ172 (ಅಲಿಶಾನ್ ಶರಾಫು 51, ಮುಹಮ್ಮದ್ ವಾಸಿಂ 69, ಜಿತೆನ್ ರಾಮನಂದಿ 24ಕ್ಕೆ2); ಒಮಾನ್: 18.4 ಓವರುಗಳಲ್ಲಿ 130 (ಆರ್ಯನ್ ಬಿಷ್ಟ್ 24; ಜುನೇದ್ ಸಿದ್ದಿಕಿ 23ಕ್ಕೆ4, ಹೈದರ್ ಅಲಿ 22ಕ್ಕೆ2, ಮುಹಮ್ಮದ್ ಜವಾದುಲ್ಲಾ 18ಕ್ಕೆ2).

ಪಂದ್ಯದ ಆಟಗಾರ: ಅಲಿಶಾನ್ ಶರಾಫು

ಇಂದಿನ ಪಂದ್ಯ: ಬಾಂಗ್ಲಾದೇಶ – ಅಫ್ಗಾನಿಸ್ತಾನ

ನೇರ ಪ್ರಸಾರ: ಸೋನಿ ನೆಟ್‌ವರ್ಕ್. ರಾತ್ರಿ 8



ಯುಎಇ ತಂಡ ಆಲಿಶಾನ್ ಶರಾಫು (ಬಲಗಡೆ) ಅರ್ಧಶತಕ ಬಾರಿಸಿದ ನಂತರ ನಾಯಕ ಮುಹಮ್ಮದ್ ವಾಸಿಂ ಜೊತೆ ಸಂತಸ ಹಂಚಿಕೊಂಡರು ಎಎಫ್‌ಪಿ ಚಿತ್ರ

ನಿಸಾಂಕ ಮಿಂಚು: ಲಂಕಾಕ್ಕೆ ಎರಡನೇ ಜಯ

ದುಬೈ (ಪಿಟಿಐ): ಪಥುಮ್ ನಿಸಾಂಕ (68; 44ಎ) ಅವರ ಅರ್ಧಶತಕದ ನೆರವಿನಿಂದ ಶ್ರೀಲಂಕಾ ತಂಡವು ಸೋಮವಾರ ನಡೆದ ಎರಡನೇ ಪಂದ್ಯದಲ್ಲಿ ನಾಲ್ಕು ವಿಕೆಟ್‌ಗಳಿಂದ ಅನನುಭವಿ ಹಾಂಗ್‌ಕಾಂಗ್ ತಂಡವನ್ನು ಮಣಿಸಿತು.

ಟಾಸ್ ಸೋತು ಬ್ಯಾಟಿಂಗಿಗೆ ಇಳಿಸಲ್ಪಟ್ಟ ಹಾಂಗ್‌ಕಾಂಗ್ ನಿಝುಕತ್ ಖಾನ್ (ಔಟಾಗದೆ 52) ಮತ್ತು ಅಂಶುಮನ್ ರಥ್ ಅವರ 48 (46 ಎ) ಉಪಯುಕ್ತ ಕೊಡುಗೆಯ ನೆರವಿನಿಂದ 4 ವಿಕೆಟ್‌ಗೆ 149 ರನ್‌ಗಳ ಸವಾಲಿನ ಮೊತ್ತ ಗಳಿಸಿತು. ಅದಕ್ಕುತ್ತರವಾಗಿ ಶ್ರೀಲಂಕಾ 18.5 ಓವರ್‌ಗಳಲ್ಲಿ ಆರು ವಿಕೆಟ್ ನಷ್ಟಕ್ಕೆ 153 ರನ್ ಗಳಿಸಿ ಗೆಲುವಿನ ಕೇಕೆ ಹಾಕಿತು.

3 ವಿಕೆಟ್ ನಷ್ಟಕ್ಕೆ 118 ರನ್ ಗಳಿಸಿದ್ದ ಲಂಕಾ, ಸುಲಭವಾಗಿ ಗೆಲ್ಲುವತ್ತ ಮುನ್ನಡೆಯುತ್ತಿತ್ತು. ಈ ನಡುವೆ 8 ರನ್‌ಗಳ ಅಂತರದಲ್ಲಿ 4 ವಿಕೆಟ್ ಕಳೆದು ಕೊಂಡಾಗ ಹಾಂಗ್‌ಕಾಂಗ್ ಪವಾಡದ ನಿರೀಕ್ಷೆಯಲ್ಲಿತ್ತು. ಆದರೆ, ವನಿಂದು ಅವರು (ಔಟಾಗದೆ 20; 9ಎ) ಲಂಕಾವನ್ನು ಗೆಲುವಿನ ದಡ ಸೇರಿಸಿದರು.

ಸ್ಕೋರುಗಳು: ಹಾಂಗ್‌ಕಾಂಗ್: 20 ಓವರುಗಳಲ್ಲಿ 4ಕ್ಕೆ149 (ಜೀಶಾನ್ ಅಲಿ 23, ಅಂಶುಮನ್ ರಥ್ 48, ನಿಝುಕತ್ ಖಾನ್ ಔಟಾಗದೇ 52; ದುಷ್ಮಂತ ಚಮೀರ 29ಕ್ಕೆ2) ಶ್ರೀಲಂಕಾ: 18.5 ಓವರ್‌ಗಳಲ್ಲಿ 6ಕ್ಕೆ 153 (ಪಥುಮ್ ನಿಸಾಂಕ 68, ಕುಶಾಲ್ ಪೆರೇರಾ 20, ವನಿಂದು ಹಸರಂಗ ಔಟಾಗದೇ 20, ಯಾಸೀಂ ಮುರ್ತಾಝಾ 37ಕ್ಕೆ 2)

ಚಿಟಿಕೆ ಸುದ್ದಿ

ಸಿರಾಜ್ 'ಐಸಿಸಿ ತಿಂಗಳ ಆಟಗಾರ'

ದುಬೈ (ಪಿಟಿಐ): ಇಂಗ್ಲೆಂಡ್ ವಿರುದ್ಧ ಐದನೇ ಹಾಗೂ ಅಂತಿಮ ಕ್ರಿಕೆಟ್ ಟೆಸ್ಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಭಾರತ ತಂಡದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರು ಐಸಿಸಿ ಆಗಸ್ಟ್ ತಿಂಗಳ ಆಟಗಾರನಾಗಿ ಆಯ್ಕೆಯಾಗಿದ್ದಾರೆ. ಐರ್ಲೆಂಡ್ ತಂಡದ ಆಲ್‌ರೌಂಡರ್ ಓರ್ಲಾ ಪ್ರೆಂಡರ್ಗಾಸ್ಟ್ ಅವರನ್ನು ತಿಂಗಳ ಆಟಗಾರ್ತಿ ಗೌರವಕ್ಕೆ ಹೆಸರಿಸಲಾಗಿದೆ.



ಕೊಡಗು ಎಫ್‌ಸಿಗೆ ಜಯ

ಬೆಂಗಳೂರು: ಮೃಣಾಲ್ ಮುತುನ್ನಾ (69ನೇ ನಿ.) ಹಾಗೂ ಮೊಹಮ್ಮದ್ ಉನ್ನೈಸ್ (86ನೇ ನಿ.)ಅವರು ಗಳಿಸಿದ ಗೋಲಿನ ನೆರವಿನಿಂದ ಕೊಡಗು ಎಫ್‌ಸಿ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–0 ಗೋಲುಗಳಿಂದ ಸೌತ್ ಯುನೈಟೆಡ್ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಇತರ ಪಂದ್ಯದಲ್ಲಿ ರೂಟ್ಸ್ ಫುಟ್‌ಬಾಲ್ ಕ್ಲಬ್ ತಂಡವು 3–0ಯಿಂದ ಎಂಎಫ್‌ಎಆರ್ ಸ್ಟುಡೆಂಟ್ಸ್ ಯೂನಿಯನ್ ಎಫ್‌ಸಿ ವಿರುದ್ಧ ಹಾಗೂ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು 2–0 ಗೋಲುಗಳಿಂದ ಎಚ್‌ಎಎಲ್ ಎಫ್‌ಸಿ ತಂಡದ ವಿರುದ್ಧ ಜಯ ಸಾಧಿಸಿದವು.

ಎಎಲ್‌ವಿ ತಂಡಕ್ಕೆ ಜಯ

ಬೆಂಗಳೂರು: ಎಎಲ್‌ವಿ ತಂಡವು ರಾಜ್ಯ ಫುಟ್‌ಬಾಲ್ ಸಂಸ್ಥೆಯ ಆಶ್ರಯದಲ್ಲಿ ಎ. ಲೋಕೇಶ್ ಗೌಡ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಸೀನಿಯರ್ ವಾಲಿಬಾಲ್ ಚಾಂಪಿಯನ್‌ಷಿಪ್‌ನ ಲೀಗ್ ಪಂದ್ಯದಲ್ಲಿ ಸೋಮವಾರ 3–0ಯಿಂದ ಎಂಎಲ್‌ಸಿ ತಂಡವನ್ನು ಸೋಲಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ದಿನದ ಇತರ ಪಂದ್ಯಗಳಲ್ಲಿ ಎಸ್‌ಡಿಎಂ ತಂಡವು 3–0ಯಿಂದ ಬಿಎಂಎಸ್ ವಿರುದ್ಧ; ಸಿಸಿಎಂ ತಂಡವು 3–0ಯಿಂದ ಎಸ್‌ಎಚ್‌ಯು ವಿರುದ್ಧ; ಐಸಿಟಿ ತಂಡವು 3–1ರಿಂದ ಜೆಎಸ್‌ಎಸ್ ವಿರುದ್ಧ ಹಾಗೂ ಪಿಒಎಸ್ ತಂಡವು 3–0ಯಿಂದ ಆರ್‌ಎಸ್‌ಸಿ ವಿರುದ್ಧ ಜಯ ಸಾಧಿಸಿದವು.

ಕೇಂದ್ರ ವಲಯಕ್ಕೆ ದುಲೀಪ್ ಟ್ರೋಫಿ

• ಗಿರೀಶದೊಡ್ಡಮನಿ

ಬೆಂಗಳೂರು: ಹನ್ನೊಂದು ವರ್ಷಗಳ ದೀರ್ಘ ಕಾಯುವಿಕೆಯ ನಂತರ ಕೇಂದ್ರ ವಲಯ ತಂಡವು ದುಲೀಪ್ ಟ್ರೋಫಿಗೆ ಮುತ್ತಿಕ್ಕಿತು.

ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಸೋಮವಾರ ಬೆಳಿಗ್ಗೆ 65 ರನ್‌ಗಳ ಗುರಿಯನ್ನು ಸುಮಾರು ಒಂದೂವರೆ ಗಂಟೆಯಲ್ಲಿ ತಲುಪಿದ ಕೇಂದ್ರ ತಂಡವು ಏಳನೇ ಬಾರಿ ಈ ಟ್ರೋಫಿ ತನ್ನದಾಗಿಸಿ ಕೊಂಡಿತು. ಈ ಸುಲಭ ಗುರಿಯನ್ನು ಮುಟ್ಟುವ ಹಾದಿಯಲ್ಲಿ ತಂಡವು ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡಿತು. 20.3 ಓವರ್‌ಗಳಲ್ಲಿ ಗುರಿಸಾಧಿಸಿತು. ಅಷ್ಟರ-ಮಟ್ಟಿಗೆ ದಕ್ಷಿಣ ವಲಯದ ಬೌಲರ್‌ಗಳು 'ದಿಟ್ಟ ಹೋರಾಟ' ತೋರಿದರು. ವೇಗಿ ಗುರ್ಜಪನೀತ್ ಸಿಂಗ್ (21ಕ್ಕೆ2) ಮತ್ತು ಸ್ಪಿನ್ನರ್ ಅಂಕಿತ್ ಶರ್ಮಾ (22ಕ್ಕೆ2) ಅವರು ತಮ್ಮ ತಂಡಕ್ಕೆ 'ಪವಾಡಸದೃಶ' ಜಯದ ಕಾಣಿಕೆ ನೀಡಲು ಪ್ರಯತ್ನಿಸಿದರು. ಆದರೆ ಕೇಂದ್ರ ತಂಡವನ್ನು ಆರಂಭಿಕ ಬ್ಯಾಟರ್ ಅಕ್ಷಯ್ ವಾಡಕರ್ (ಅಜೇಯ 19; 52ಎ, 4X3) ಜಯದತ್ತ ಮುನ್ನಡೆಸಿದರು.

ಭಾನುವಾರ ದಿನದಾಟದ ಮುಕ್ತಾಯದ ಕೆಲವೇ ಕ್ಷಣಗಳ ಮುನ್ನ ದಕ್ಷಿಣ ವಲಯವು ಆಲೌಟ್ ಆಗಿತ್ತು. ಸೋಮವಾರ ಬೆಳಿಗ್ಗೆ ಸುಲಭವಾಗಿ ಗುರಿಸಾಧಿಸುವ ಭರವಸೆಯೊಂದಿಗೆ ಕೇಂದ್ರ ವಲಯ ಬ್ಯಾಟಿಂಗ್ ಆರಂಭಿಸಿತು. ಆದರೆ ಎಡಗೈ ಸ್ಪಿನ್ನರ್ ಅಂಕಿತ್ ಶರ್ಮಾ ಅವರು ನಾಲ್ಕನೇ ಓವರ್‌ನಲ್ಲಿಯೇ ದನೀಶ್ ಮಾಳೆವರ್ ವಿಕೆಟ್ ಗಳಿಸಿದರು. ಇದಾಗಿ ನಾಲ್ಕು ಓವರ್‌ಗಳ ನಂತರ ಶುಭಂ ಶರ್ಮಾ ಅವರೂ ಗುರ್ಜಪನೀತ್ ಸಿಂಗ್ ಬೌಲಿಂಗ್‌ನಲ್ಲಿ ಅವಸರದ ಹೊಡೆತಕ್ಕೆ ಕೈಹಾಕಿ ಅಜರುದ್ದೀನ್‌ಗೆ ಕ್ಯಾಚ್ ಕೊಟ್ಟರು.

ಅದೇ ಓವರ್‌ನಲ್ಲಿ ಸಾರಾಂಶ್ ಜೈನ್ ಅವರೂ ಸಿದ್ಧಾರ್ಥ್ ಪಡೆದ ಆಕರ್ಷಕ ಕ್ಯಾಚ್‌ಗೆ ನಿರ್ಗಮಿಸಿದರು.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ನಾಯಕ ರಜತ್ (13; 27ಎ, 4X2) ಅವರು ಅಕ್ಷಯ್ ಜೊತೆಗೆ ತಾಳ್ಮೆಯಿಂದ ಆಡಿದರು. ಆದರೆ ಅಂಕಿತ್ ಬೌಲಿಂಗ್‌ನಲ್ಲಿ ನಿಧೀಶ್‌ಗೆ ಕ್ಯಾಚ್ ಕೊಟ್ಟರು. ಅಷ್ಟೊತ್ತಿಗೆ ತಂಡವು (4ಕ್ಕೆ49) ಗೆಲುವಿನ ಸನಿಹ ತಲುಪಿತ್ತು. ಅಕ್ಷಯ್ ಮತ್ತು ಯಶ್ ರಾಥೋಡ್ (ಔಟಾಗದೇ 11) ಅವರು ತಂಡವನ್ನು ಗೆಲುವಿನ ದಡ ಸೇರಿಸಿದರು.

ಮೂರುವರೆ ತಿಂಗಳ ಹಿಂದಷ್ಟೇ ರಜತ್ ಪಾಟೀದಾರ್ ನಾಯಕತ್ವದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಐಪಿಎಲ್ ಪ್ರಶಸ್ತಿ ಜಯಿಸಿತ್ತು. ಇದೀಗ ಅವರದ್ದೇ ನಾಯಕತ್ವದ ತಂಡವು ದೇಶಿ ಕ್ರಿಕೆಟ್‌ನ ಪ್ರತಿಷ್ಠಿತ ಪ್ರಶಸ್ತಿ ಜಯಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ವಲಯ: 63 ಓವರ್‌ಗಳಲ್ಲಿ 149, ಕೇಂದ್ರ ವಲಯ: 145.1 ಓವರ್‌ಗಳಲ್ಲಿ 511. ಎರಡನೇ ಇನಿಂಗ್ಸ್: ದಕ್ಷಿಣ ವಲಯ: 121 ಓವರ್‌ಗಳಲ್ಲಿ 426. ಕೇಂದ್ರ ವಲಯ: 20.3 ಓವರ್‌ಗಳಲ್ಲಿ 4ಕ್ಕೆ66 (ಅಕ್ಷಯ್ ವಾಡಕರ್ ಔಟಾಗದೇ 19, ರಜತ್ ಪಾಟೀದಾರ್ 13, ಯಶ್ ರಾಥೋಡ್ ಔಟಾಗದೇ 13, ಗುರ್ಜಪನೀತ್ ಸಿಂಗ್ 21ಕ್ಕೆ2, ಅಂಕಿತ್ ಶರ್ಮಾ 22ಕ್ಕೆ2) ಫಲಿತಾಂಶ: ಕೇಂದ್ರ ವಲಯಕ್ಕೆ 6 ವಿಕೆಟ್‌ಗಳ ಜಯ.

ಪಂದ್ಯಶ್ರೇಷ್ಠ: ಯಶ್ ರಾಥೋಡ್.

ಸರಣಿಶ್ರೇಷ್ಠ: ಸಾರಾಂಶ್ ಜೈನ್.



ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಸೋಮವಾರ ನಡೆದ ದುಲೀಪ್ ಟ್ರೋಫಿ ಫೈನಲ್ ಪಂದ್ಯದಲ್ಲಿ ದಕ್ಷಿಣ ವಲಯದ ವಿರುದ್ಧ ಜಯಗಳಿಸಿದ ಕೇಂದ್ರ ವಲಯದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು ಚಿತ್ರ: ಪ್ರಶಾಂತ್ ಎಚ್.ಜಿ.

> ತಂಡವು ಟೂರ್ನಿಯಲ್ಲಿ ಉತ್ತಮವಾಗಿ ಆಡಿದೆ. ಅದರಲ್ಲೂ ಆ್ಯಂಡ್ರೆ ಸಿದ್ಧಾರ್ಥ್, ಆರ್. ಸ್ಮರಣ್ ಅವರ ಆಟ ಚೆನ್ನಾಗಿತ್ತು. ಅವರಿಗೆ ಉತ್ತಮ ಭವಿಷ್ಯವಿದೆ
> **ಲಕ್ಷ್ಮೀಪತಿ ಬಾಲಾಜಿ,** ದಕ್ಷಿಣವಲಯದಕೋಚ್

ಕೋಲ್ಟ್ಸ್‌ಗೆ ಆಸರೆಯಾದ ಮೋನಿಷ್

ಪ್ರಜಾವಾಣಿ ವಾರ್ತೆ

ಮೈಸೂರು: ಆಲ್‌ರೌಂಡರ್ ಮೋನಿಷ್ ರೆಡ್ಡಿ (59 ಔಟಾಗದೇ; 54ಎ) ಅವರ ಅರ್ಧಶತಕ ಗಳಿಸಿ ಕ್ಯಾಪ್ಟನ್ ಕೆ.ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಕರ್ನಾಟಕ ಕೋಲ್ಟ್ಸ್ ತಂಡಕ್ಕೆ ಸೋಮವಾರ ಬರೋಡ ಕ್ರಿಕೆಟ್ ಸಂಸ್ಥೆ ಎದುರು ಆಸರೆಯಾದರು.

ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಕೋಲ್ಟ್ಸ್ 184 ರನ್ ಗಳಿಸಿತು. ಒಂದು ಹಂತದಲ್ಲಿ 83 ರನ್‌ಗೆ 8 ವಿಕೆಟ್ ಕಳೆದುಕೊಂಡಿದ್ದ ತಂಡಕ್ಕೆ 9ನೇ ವಿಕೆಟ್‌ಗೆ ನೇನಿಷ್ ರೆಡ್ಡಿ ಹಾಗೂ ಎಲ್.ಆರ್. ಕುಮಾರ್ ಆಸರೆ ಆದರು. ಈ ಜೋಡಿಯು 93 ರನ್ ಜತೆಯಾಟದ ಮೂಲಕ ತಂಡವನ್ನು ಸಂಕಷ್ಟದಿಂದ ಪಾರು ಮಾಡಿತು. ಬರೋಡ ಪರ ರಸಿಕ್ ದಾರ್ 4 ವಿಕೆಟ್ ಪಡೆದರು.



ರಸಿಕ್ ದಾರ್

ಬರೋಡ ಸಹ ರನ್ ಗಳಿಸಲು ತಿಣುಕಾಡಿತು. ದಿನದಾಟದ ಅಂತ್ಯಕ್ಕೆ 6 ವಿಕೆಟ್ ನಷ್ಟಕ್ಕೆ 129 ರನ್ ಗಳಿಸಿದ್ದು, ವಿಷ್ಣು ಸೋಲಂಕಿ (44) ಏಕಾಂಗಿ ಹೋರಾಟ ಪ್ರದರ್ಶಿಸಿದರು. ಶಿಖರ್ ಶೆಟ್ಟಿ (38ಕ್ಕೆ 4) ಪರಿಣಾಮಕಾರಿ ಎನಿಸಿದರು

ಸಂಕ್ಷಿಪ್ತ ಸ್ಕೋರ್: ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ: ಕೆಎಸ್‌ಸಿಎ ಕೋಲ್ಟ್ಸ್: 47.3 ಓವರ್‌ಗಳಲ್ಲಿ 184 (ಮೋನಿಷ್ ರೆಡ್ಡಿ ಔಟಾಗದೆ 59, ರಸಿಕ್ ದಾರ್ 35ಕ್ಕೆ 4, ಭಾರ್ಗವ್ 44ಕ್ಕೆ3); ಬರೋಡ ಕ್ರಿಕೆಟ್ ಸಂಸ್ಥೆ: 40 ಓವರ್‌ಗಳಲ್ಲಿ 6 ವಿಕೆಟ್‌ಗೆ 129 (ವಿಷ್ಣು ಸೋಲಂಕಿ ಔಟಾಗದೇ 44; ಶಿಖರ್ ಶೆಟ್ಟಿ 38ಕ್ಕೆ4).

ಎಸ್‌ಜೆಸಿಇ ಕ್ರೀಡಾಂಗಣ, ಮೈಸೂರು: ಆಂಧ್ರ ಕ್ರಿಕೆಟ್ ಸಂಸ್ಥೆ: 23.2 ಓವರ್‌ಗಳಲ್ಲಿ 87 (ನವೀನ್ ಕನ್ವರ್ 18ಕ್ಕೆ4, ದಿವೇಶ್ ಶರ್ಮ 24ಕ್ಕೆ4). ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ: 61 ಓವರ್‌ಗಳಲ್ಲಿ 4ಕ್ಕೆ 232 (ಏಕಾಂತ್ ಸೇನ್ ಔಟಾಗದೇ 76, ಸಿದ್ಧಾಂತ್ ಪುರೋಹಿತ್ 50).

ಫೈನಲ್‌ಗೇರಲು ಶ್ರೀಶಂಕರ್ ವಿಫಲ

ಟೋಕಿಯೊ (ಪಿಟಿಐ): ಭಾರತದ ಲಾಂಗ್‌ಜಂಪ್ ತಾರೆ ಮುರಳಿ ಶ್ರೀಶಂಕರ್ ಅವರು ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಅಂತಿಮ ಸುತ್ತಿಗೆ ಅರ್ಹತೆ ಪಡೆಯಲು ವಿಫಲರಾದರು. ಅವರು ಸೋಮವಾರ ತಮ್ಮ ಅರ್ಹತಾ ಗುಂಪಿನಲ್ಲಿ 14ನೇ ಸ್ಥಾನ ಪಡೆಯುವುದರೊಂದಿಗೆ ಈ ಕೂಟದಲ್ಲಿ ಭಾರತದ ಅಥ್ಲೀಟುಗಳ ನಿರಾಶಾದಾಯಕ ನಿರ್ವಹಣೆ ಮುಂದುವರಿಯಿತು.



ಮೂರನೇ ಸಲ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಂಡಿರುವ ಶ್ರೀಶಂಕರ್ ಅವರು 'ಎ' ಗುಂಪಿನ ಕ್ವಾಲಿಫಿಕೇಷನ್‌ನಲ್ಲಿ ಮೂರು ಯತ್ನಗಳಲ್ಲಿ 7.78 ಮೀ.ಗಳ ಉತ್ತಮ ಜಿಗಿತ ದಾಖಲಿಸಿದರು. ಅವರು 37 ಮಂದಿ ಸ್ಪರ್ಧಿಗಳಲ್ಲಿ ಒಟ್ಟಾರೆ 25ನೇ ಸ್ಥಾನ ಪಡೆಯಲಷ್ಟೇ ಶಕ್ತರಾದರು.

ಪಾರುಲ್ ವಿಫಲ: ಮಹಿಳೆಯರ 3000 ಮೀ. ಸ್ಟೀಪಲ್‌ಚೇಸ್‌ನಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಪಾರುಲ್ ಚೌಧರಿ ಅವರು 9ನಿ.22.24 ಸೆ.ಗಳಲ್ಲಿ ಗುರಿ ತಲುಪಿ ಒಟ್ಟಾರೆ 20ನೇ ಸ್ಥಾನ ಪಡೆದರು. ಹಾಗಾಗಿ ಫೈನಲ್‌ಗೆ ತೇರ್ಗಡೆಯಾಗಲಿಲ್ಲ.

ವಿಶ್ವದಾಖಲೆಯೊಂದಿಗೆ ಡುಪ್ಲಾಂಟಿಸ್‌ಗೆ ಚಿನ್ನ

ಸ್ವೀಡನ್‌ನ ದಿಗ್ಗಜ ಅಥ್ಲೀಟ್ ಮೊಂಡೊ ಡುಪ್ಲಾಂಟಿಸ್ ಅವರು ಪೋಲ್‌ವಾಲ್ಟ್‌ನಲ್ಲಿ ವಿಶ್ವದಾಖಲೆಯೊಂದಿಗೆ ಮೂರನೇ ಬಾರಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದರು.

25 ವರ್ಷ ವಯಸ್ಸಿನ ಈ ತಾರೆ, ಟೋಕಿಯೋದ ನ್ಯಾಷನಲ್ ಸ್ಟೇಡಿಯಂನಲ್ಲಿ 6.30 ಮೀ ಜಿಗಿದು 14ನೇ ಬಾರಿ ವಿಶ್ವ ದಾಖಲೆ ಸ್ಥಾಪಿಸಿದರು.

ಮುಂದಿನ ವರ್ಷದ ಕ್ಯಾಂಡಿಡೇಟ್ಸ್‌ಗೂ ಅರ್ಹತೆ

ವೈಶಾಲಿಗೆ ಗ್ರ್ಯಾಂಡ್ ಸ್ವಿಸ್ ಚೆಸ್ ಕಿರೀಟ

ಸಮರ್‌ಖಂಡ್ (ಉಜ್ಬೇಕಿಸ್ತಾನ) (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್.ವೈಶಾಲಿ ಸತತ ಎರಡನೇ ಬಾರಿ ಫಿಡೆ ಮಹಿಳಾ ಗ್ರ್ಯಾಂಡ್ ಸ್ವಿಸ್ ಟೂರ್ನಿಯಲ್ಲಿ ಚಾಂಪಿಯನ್ ಕಿರೀಟ ಧರಿಸಿದರು. ಆ ಮೂಲಕ ಮುಂದಿನ ವರ್ಷದ ಮಹಿಳಾ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಆಡುವ ಅರ್ಹತೆಯನ್ನೂ ಸಂಪಾದಿಸಿದರು.

ಮಾಜಿ ವಿಶ್ವ ಮಹಿಳಾ ಚಾಂಪಿಯನ್ ಝೊಂಗ್‌ಯಿ ತಾನ್ ಜೊತೆ ಸೋಮವಾರ ಹೋರಾಡಿ ಡ್ರಾ ಸಾಧಿಸಿದ ಅವರು ಅಂತಿಮವಾಗಿ 11 ಸುತ್ತುಗಳಿಂದ 8 ಅಂಕ ಕಲೆಹಾಕಿದರು.

ಅಜರ್‌ಬೈಜಾನ್‌ನ ಉಲ್ವಿಯಾ ಫತಾಲಿಯೇವಾ ಜೊತೆ ಡ್ರಾ ಮಾಡಿಕೊಂಡ ರಷ್ಯಾದ ಕ್ಯಾತರಿನಾ ಲಾಗ್ನೊ ಸಹ ಎಂಟು ಅಂಕ ಪಡೆದರೂ ಟೈಬ್ರೇಕರ್‌ನಲ್ಲಿ ಎರಡನೇ ಸ್ಥಾನಕ್ಕೆ ಸರಿದರು. ಈ ಟೂರ್ನಿಯಿಂದ ಇಬ್ಬರು ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆಯುವ ಕಾರಣ ಲಾಗ್ನೊ ಸಹ ಅವಕಾಶ ಪಡೆದರು.

ಈ ಟೂರ್ನಿಯಲ್ಲಿ ವೈಶಾಲಿ ಆರು ಪಂದ್ಯ ಗೆದ್ದು, ಒಂದು ಸೋತು, ನಾಲ್ಕು ಡ್ರಾ ಮಾಡಿಕೊಂಡರು.

ವೈಶಾಲಿ ಅವರು ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆದ ಭಾರತದ ಮೂರನೇ ಆಟಗಾರ್ತಿ. ಜಾರ್ಜಿಯಾದ ಬಟುಮಿಯಲ್ಲಿ ವಿಶ್ವಕಪ್ ಗೆದ್ದುಕೊಂಡಿದ್ದ ದಿವ್ಯಾ ದೇಶಮುಖ್ ಮತ್ತು ರನ್ನರ್ ಅಪ್ ಆಗಿದ್ದ ಕೋನೇರು ಹಂಪಿ ಅವರು ಈ ಮೊದಲೇ ಅರ್ಹತೆ ಪಡೆದಿದ್ದರು.

ಕಜಾಕಸ್ತಾನದ ಬಿಬಿಸಾರ ಅಸೌನ್‌ಬಯೇವಾ, ಚೀನಾದ ತಾನ್ ಝೊಂಗ್‌ಯಿ ಮತ್ತು ಯಕ್ಸಿನ್ ಸಾಂಗ್ (ತಲಾ 7.5) ಕ್ರಮವಾಗಿ ಮೂರರಿಂದ ಐದರವರೆಗಿನ ಸ್ಥಾನಗಳನ್ನು ಪಡೆದರು.

ಓಪನ್ ವಿಭಾಗದಲ್ಲಿ ಡಚ್ ಗ್ರ್ಯಾಂಡ್‌ಮಾಸ್ಟರ್ ಅನಿಶ್ ಗಿರಿ ಎಂಟು ಅಂಕ ಗಳಿಸಿ ಪ್ರಶಸ್ತಿ ಗೆದ್ದುಕೊಂಡರು. ಗಿರಿ ಜೊತೆಗೆ ಈ ಟೂರ್ನಿಯಲ್ಲಿ ಎರಡನೇ ಸ್ಥಾನ ಪಡೆದ ಮಥಾಯಸ್ ಬ್ಲೂಬಾಮ್, ಹಿಕಾರು ನಕಾಮುರಾ (ರೇಟಿಂಗ್ ಆಧಾರ), ಆರ್.ಪ್ರಜ್ಞಾನಂದ ಮತ್ತು ಫ್ಯಾಬಿಯಾನ ಕರುವಾನ ಅವರು ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆಯುವುದು ಖಚಿತವಾಗಿದೆ.

ಕೊನೆಯ ಮೂರು ಸ್ಥಾನಗಳು, ಗೋವಾದಲ್ಲಿ ಮುಂದಿನ ತಿಂಗಳು ನಡೆಯುವ ವಿಶ್ವಕಪ್‌ನಲ್ಲಿ ತೀರ್ಮಾನವಾಗಲಿವೆ. ಕ್ಯಾಂಡಿಡೇಟ್ಸ್ ವಿಜೇತರು ಹಾಲಿ ವಿಶ್ವ ಚಾಂಪಿಯನ್ ಗುಕೇಶ್ ಅವರಿಗೆ ಸವಾಲು ಹಾಕುವ ಅರ್ಹತೆ ಪಡೆಯುತ್ತಾರೆ.

ಭಾರತದ ಅರ್ಜುನ್ ಇರಿಗೇಶಿ, ನಿಹಾಲ್ ಸರಿನ್, ವಿದಿತ್ ಗುಜರಾತಿ ತಲಾ 7 ಅಂಕ, ಪ್ರಣವ್ ವಿ. 6.5 ಅಂಕ ಪಡೆದರು.



ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ವೈಶಾಲಿ 'ಎಕ್ಸ್' ಚಿತ್ರ

ಪ್ರೊ ಕಬಡ್ಡಿ: ಬೆಂಗಳೂರು ಬುಲ್ಸ್‌ಗೆ ಸತತ ನಾಲ್ಕನೇ ಗೆಲುವು

ಕನ್ನಡಿಗ ಗಣೇಶ್ ಆಟಕ್ಕೆ ಒಲಿದ ಜಯ

• ಪ್ರದೀಶ್ ಎಚ್. ಮರೋಡಿ

ಜೈಪುರ: ಕನ್ನಡಿಗ ಗಣೇಶ ಹಣಮಂತಗೋಳ ಅವರು ಪಂದ್ಯದ ಕೊನೆಯಲ್ಲಿ ನಡೆಸಿದ ಸೂಪರ್ ರೇಡ್ ನೆರವಿನಿಂದ ಬೆಂಗಳೂರು ಬುಲ್ಸ್ ತಂಡವು ಸೋಮವಾರ 12ನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಎರಡು ಅಂಕಗಳ ರೋಚಕ ಜಯ ಸಾಧಿಸಿತು.

ಸವಾಯಿ ಮಾನ್ ಸಿಂಗ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ 'ದಕ್ಷಿಣ ಡರ್ಬಿ'ಯ ಹಣಾಹಣಿಯಲ್ಲಿ ಬುಲ್ಸ್ ತಂಡವು 34–32ರಿಂದ ತೆಲುಗು ಟೈಟನ್ಸ್ ತಂಡವನ್ನು ಮಣಿಸಿ, 'ಗುಲಾಬಿ ನಗರಿ'ಯಲ್ಲಿ ಸತತ ಎರಡನೇ ಗೆಲುವು ದಾಖಲಿಸಿತು.

ಕೊನೆಯ ಕ್ಷಣದವರೆಗೆ ಹಾವು–ಏಣಿಯಂತೆ ಸಾಗಿದ ಪಂದ್ಯವು ಪ್ರೇಕ್ಷಕರನ್ನು ತುದಿಗಾಲಿನಲ್ಲಿ ನಿಲ್ಲಿಸಿತ್ತು. ಒಂದು ಅಂಕ ಹಿನ್ನಡೆಯಲ್ಲಿದ್ದ ಬುಲ್ಸ್ ತಂಡಕ್ಕೆ ಗಣೇಶ್ ಅವರು ನಿರ್ಣಾಯಕ ರೇಡ್‌ನಲ್ಲಿ ಮೂರು ಅಂಕಗಳನ್ನು ಬಾಚಿಕೊಂಡು, ಗೆಲುವಿನ ರೂವಾರಿಯಾದರು.

ಕನ್ನಡಿಗ ಬಿ.ಸಿ. ರಮೇಶ್ ಗರಡಿಯಲ್ಲಿ ಪಳಗಿದ ಬುಲ್ಸ್ ಆಟಗಾರರು ಈ ಪಂದ್ಯದಲ್ಲಿ ಮತ್ತೊಮ್ಮೆ ಸಾಂಘಿಕ ಆಟ ಪ್ರದರ್ಶಿಸಿದರು. ಮೊದಲ ಮೂರು ಪಂದ್ಯಗಳನ್ನು ಸೋತಿದ್ದ ಬುಲ್ಸ್, ನಂತರದಲ್ಲಿ ತಂಡ ಸಂಯೋಜನೆಯಲ್ಲಿ ಬದಲಾವಣೆ ಕಂಡುಕೊಂಡು ಸತತ ನಾಲ್ಕು ಪಂದ್ಯಗಳನ್ನು ಗೆದ್ದುಕೊಂಡಂತಾಗಿದೆ. ಇದರೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೆ ಬಡ್ತಿ ಪಡೆಯಿತು.

ಪಂದ್ಯದ ಬಹುತೇಕ ಅವಧಿಯಲ್ಲಿ ಟೈಟನ್ಸ್ ತಂಡವೇ ಮುನ್ನಡೆ ಕಾಯ್ದುಕೊಂಡಿತ್ತು. ಮೊದಲಾರ್ಧದಲ್ಲಿ 11–14ರಿಂದ ಹಿನ್ನಡೆಯಲ್ಲಿದ್ದ ಬೆಂಗಳೂರು ತಂಡಕ್ಕೆ ರೇಡರ್ ಅಲಿರೆಜಾ ಮಿರ್ಜೈಯನ್ (11) ಉತ್ತರಾರ್ಧದಲ್ಲಿ ಮಹತ್ವದ ಚೇತರಿಕೆ ನೀಡಿದರು. ಅವರು ಈ ಆವೃತ್ತಿಯಲ್ಲಿ ನಾಲ್ಕು ಬಾರಿ 'ಸೂಪರ್ ಟೆನ್' ಸೇರಿದಂತೆ ಒಟ್ಟು 50 ಅಂಕಗಳ ಗಡಿ ದಾಟಿದರು. ಅವರಿಗೆ ಗಣೇಶ್ (7) ಬೆಂಬಲ ನೀಡಿದರು. ಟೈಟನ್ಸ್ ಪರ ಭರತ್ (13) ಮತ್ತು ವಿಜಯ್ (9) ಮಿಂಚಿದರು.

ದಿನದ ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಹರಿಯಾಣ ಸ್ಟೀಲರ್ಸ್ ತಂಡವು 40–37ರಿಂದ ಗುಜರಾತ್ ಜೈಂಟ್ಸ್ ಎದುರು ಜಯ ಸಾಧಿಸಿತು.

ಇಂದಿನ ಪಂದ್ಯಗಳು: ಯು.ಪಿ. ಯೋಧಾಸ್– ಬೆಂಗಾಲ್ ವಾರಿಯರ್ಸ್ (ರಾತ್ರಿ 8)
ಬೆಂಗಳೂರು ಬುಲ್ಸ್– ತಮಿಳು ತಲೈವಾಸ್ (ರಾತ್ರಿ 9)



ಬೆಂಗಳೂರು ಬುಲ್ಸ್ ತಂಡದ ಗಣೇಶ ಹಣಮಂತಗೋಳ ಅವರ ರೇಡಿಂಗ್ ವೈಖರಿ